# ಸಮಾಜ ವಿಜ್ಞಾನ - I

# SOCIAL SCIENCE - I

## ತರಗತಿ X

## STANDARD X

### ಭಾಗ - 2

### PART 2

ಕೇರಳ ಸರಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ

**2019**

NT-911-1-SOC.SCI.-I-10-K-VOL.2

**State Council of Educational Research and Training (SCERT)**
Poojappura, Thiruvananthapuram 695 012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition: 2019
Typesetting and Layout : SCERT
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜವಿಜ್ಞಾನ ಕಲಿಕೆಯು ಸಮಾಜದ ಕುರಿತಾದ ಸಮಗ್ರವಾದ ಅಧ್ಯಯನವಾಗಿದೆ. ಮಾನವ ರಾಶಿಯ ಮಹತ್ತರವಾದ ಪ್ರಗತಿಯ ಕುರಿತು ಇದರಲ್ಲಿ ಚರ್ಚಿಸಲಾಗುತ್ತದೆ. ಸಮಾಜವಿಜ್ಞಾನ ಕಲಿಕೆಯು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಪರಿಸರಕ್ಕೆ ಸೂಕ್ತವಾದ ದೃಷ್ಟಿಕೋನದ ಮೂಲಕ ವಾಸ್ತವಿಕತೆಗಳನ್ನು ವಿಶ್ಲೇಷಿಸುವ ಹಾಗೂ ಮಾನವನ ಬಹುಮುಖ ಪ್ರಗತಿಯ ಚಿತ್ರಣವನ್ನು ಒದಗಿಸುವಂತಿರಬೇಕು.

ವರ್ತಮಾನಕಾಲವು ಭೂತಕಾಲದೊಂದಿಗೆ ನಡೆಸುವ ನಿರಂತರ ಸಂವಾದ ಫಲವಾಗಿದೆ ಚರಿತ್ರೆ. ಅದು ಭೂತಕಾಲವನ್ನು ಪ್ರತಿನಿಧಿಸುವುದರೊಂದಿಗೆ, ವರ್ತಮಾನಕಾಲದ ಮೇಲೆ ಬೆಳಕು ಚೆಲ್ಲುವುದು. ಜತೆಯಲ್ಲಿ ಭವಿಷ್ಯದ ಕುರಿತಾದ ತಿಳುವಳಿಕೆಯನ್ನು ನೀಡುವುದು. ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ಸಮಕಾಲೀನ ಜೀವನದ ಮೇಲೆ ಬೆಳಕು ಚೆಲ್ಲುವುದರೊಂದಿಗೆ ಪೌರ ಪ್ರಜ್ಞೆ ಮತ್ತು ಸಾಮಾಜಿಕ ಬದ್ಧತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. ಚರಿತ್ರೆ ಮತ್ತು ರಾಜ್ಯಶಾಸ್ತ್ರಗಳು ವ್ಯತ್ಯಸ್ತ ವಿಜ್ಞಾನ ಶಾಖೆಗಳಾದರೂ ಇವುಗಳ ನಡುವೆ ಅನೇಕ ಸಮಾನತೆಗಳಿವೆ.

ಮಾನವ ಸಹೋದರತೆ, ಸಾರ್ವಲೌಕಿಕ ದೃಷ್ಟಿಕೋನ, ಜಾತ್ಯತೀತತೆ, ಪ್ರಜಾಪ್ರಭುತ್ವ ಪ್ರಜ್ಞೆಗಳನ್ನು ಬೆಳೆಸಲು ಹಾಗೂ ಮೌಲ್ಯಪ್ರಜ್ಞೆಯನ್ನು ಹೊಂದಿದ ಒಂದು ಸಮಾಜವನ್ನು ಸೃಷ್ಟಿಸಲು ಸಮಾಜವಿಜ್ಞಾನ ಕಲಿಕೆಯು ಅನಿವಾರ್ಯವಾಗಿದೆಯೆಂಬ ದೃಷ್ಟಿಕೋನವನ್ನಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ತಯಾರಿಸಲಾಗಿದೆ. ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬೀ ವಿಷಯಗಳನ್ನು ಸೇರಿಸಿಕೊಡು ಸರಳ ಹಾಗೂ ಆಕರ್ಷಣೀಯವಾಗಿ ಈ ಪಠ್ಯಪುಸ್ತಕವು ನಿಮ್ಮೆಡೆಗೆ ತಲುಪುತ್ತದೆ.

**ಸಮಗ್ರ** ಎನ್ನುವ ತಂತ್ರಜ್ಞಾನ ಆಧಾರಿತ ವಿದ್ಯಾರ್ಥಿ ಪೋರ್ಟಲ್ ಮತ್ತು ಕ್ಯೂ.ಆರ್. ಕೋಡ್‌ಗಳು ತರಗತಿ ಚಟುವಟಿಕೆಗಳನ್ನು ಮತ್ತಷ್ಟು ಅನಾಯಾಸಕರವಾಗಿಯೂ ರಸವತ್ತಾಗಿಯೂ ಮಾರ್ಪಡಿಸಲಿದೆ. ರಾಷ್ಟ್ರೀಯ ಉದ್ಯೋಗ ನೈಪುಣ್ಯ ಚೌಕಟ್ಟು (ಎನ್.ಎಸ್.ಕ್ಯು.ಎಫ್) ಮತ್ತು ಐ.ಸಿ.ಟಿ. ಸಾಧ್ಯತೆಗಳನ್ನು ಈ ಪಾಠಪುಸ್ತಕದಲ್ಲಿ ಪರಿಗಣಿಸಲಾಗಿದೆ.

ವಾಸ್ತವಿಕತೆಗಳನ್ನು ಸೃಜನಾತ್ಮಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಮೌಲ್ಯನಿರ್ಣಯ ಮಾಡಲು ಸಮಾಜವಿಜ್ಞಾನ ಪಠ್ಯಪುಸ್ತಕ ಮತ್ತು ಕಲಿಕಾ ಚಟುವಟಿಕೆಗಳು ಸಹಾಯಕವಾಗಬಹುದು. ಸಮಾಜವಿಜ್ಞಾನ ಕಲಿಕೆಯನ್ನು ರಸವತ್ತಾದ ಅನುಭವವಾಗಿ ಬದಲಾಯಿಸಲು ಇದು ನಿಮಗೆ ಪ್ರಚೋದನಕಾರಿಯೂ ಮುಂದಿನ ಜೀವನಕ್ಕೆ ಮಾರ್ಗದರ್ಶಿಯೂ ಆಗಬಹುದು.

ಪ್ರೀತಿಪೂರ್ವಕ,

**ಡಾ. ಜೆ. ಪ್ರಸಾದ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# ಅನುಕ್ರಮಣಿಕೆ


| | | |
|---|---|---|
| 07. | ಸ್ವಾತಂತ್ರ್ಯಾನಂತರ ಭಾರತ | 137 – 150 |
| 08. | ಕೇರಳ ಆಧುನಿಕತೆಯೆಡೆಗೆ | 151 – 170 |
| 09. | ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ | 171 – 182 |
| 10. | ಪೌರಪ್ರಜ್ಞೆ | 183 – 192 |
| 11. | ಸಮಾಜಶಾಸ್ತ್ರ : ಎಂದರೇನು? ಯಾಕೆ? | 193 – 202 |

## ಈ ಪುಸ್ತಕದಲ್ಲಿ ಕಲಿಕೆಯ ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಬಳಸಲಾಗಿದೆ.



ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ.



ಕಲಿಕೆಯ ಪ್ರಗತಿಯನ್ನು ನಿರ್ಣಯಿಸುವುದಕ್ಕಿರುವ ಪ್ರಶ್ನೆಗಳು



ಚಟುವಟಿಕೆಗಳು



ಮೌಲ್ಯನಿರ್ಣಯ ಮಾಡುವ



ಮುಂದುವರಿದ ಚಟುವಟಿಕೆಗಳು



ಐ.ಸಿ.ಟಿ. ಸಾಧ್ಯತೆಗಳು

## ಪಾಠಪುಸ್ತಕದ ಕುರಿತು

ಹತ್ತನೇ ತರಗತಿಯ ಸಮಾಜವಿಜ್ಞಾನ ಪಾಠಪುಸ್ತಕದ ಒಂದನೇ ಭಾಗವು ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬೀ ವಿಷಯಗಳಲ್ಲಾಗಿ ಒಟ್ಟು ಹನ್ನೊಂದು ಅಧ್ಯಾಯಗಳನ್ನು ಒಳಗೊಂಡಿದೆ. ಏಳು ಅಧ್ಯಾಯಗಳಲ್ಲಿ ಚರಿತ್ರೆ ಪಾಠಭಾಗವನ್ನು ಕೊಡಲಾಗಿದೆ. ಆರಂಭದ ಎರಡು ಅಧ್ಯಾಯಗಳು ಜಾಗತಿಕ ಚರಿತ್ರೆಗೆ ಸಂಬಂಧಪಟ್ಟಿರುವುದು ಮತ್ತು ಅನಂತರದ ನಾಲ್ಕು ಅಧ್ಯಾಯಗಳು ಆಧುನಿಕ ಭಾರತದ ಚರಿತ್ರೆಗೆ ಸಂಬಂಧಿಸಿರುವುದು ಆಗಿದೆ. ಒಂದು ಅಧ್ಯಾಯವು ಆಧುನಿಕ ಕೇರಳದ ಚರಿತ್ರೆಗೆ ಸಂಬಂಧಿಸಿರುವುದಾಗಿದೆ. ಚರಿತ್ರೆಯ ಮೂಲಗಳನ್ನು ಸಾಧ್ಯವಿರುವಷ್ಟು ಉಪಯೋಗಿಸಿ ವಿಷಯಾಧಾರಿತವಾಗಿ (Thematic) ಮಂಡನೆಗಿರುವ ಸಾಧ್ಯತೆಗಳನ್ನು ಪರಿಗಣಿಸಿಕೊಂಡು ಪಾಠಭಾಗಗಳನ್ನು ರೂಪಿಸಲಾಗಿದೆ. ಏಳನೇ ತರಗತಿಯ ಚರಿತ್ರೆಯ ಪಾಠಭಾಗಗಳ ವಿಸ್ತೃತ ರೂಪವನ್ನು ಹತ್ತನೇ ತರಗತಿಯಲ್ಲಿ ಒಳಪಡಿಸಲಾಗಿದೆ. ಹಿಂದಿನ ತರಗತಿಗಳ ಪಾಠಭಾಗದಲ್ಲಿರುವ ವಿಷಯ ವಲಯಗಳ ಮುಂದುವರಿಕೆ ಹಾಗೂ ಪ್ರಗತಿಯನ್ನು ದೃಢಪಡಿಸುವ ರೀತಿಯಲ್ಲಿ ಪಾಠಭಾಗಗಳನ್ನು ಕ್ರಮೀಕರಿಸಲಾಗಿದೆ. ಏಳನೇ ತರಗತಿಯಲ್ಲಿ ಕಾಲಗಣನೆಗೆ ಅನುಸಾರವಾಗಿ ವ್ಯಕ್ತಿಗಳಿಗೆ, ಚಳುವಳಿಗಳಿಗೆ, ವಾಸ್ತವಿಕತೆಗಳಿಗೆ ಪ್ರಾಧಾನ್ಯವನ್ನು ನೀಡುವ ಸಮೀಪನವನ್ನು ಸ್ವೀಕರಿಸಲಾಗಿತ್ತು. ಆದರೆ ಹತ್ತನೇ ತರಗತಿಯಲ್ಲಿ ಚರಿತ್ರೆಯ ವಾಸ್ತವಿಕತೆಗಳಿಗಿಂತಲೂ ಮಿಗಿಲಾಗಿ ಆಶಯಗಳ ವಿಶ್ಲೇಷಣೆಗೆ ಹೆಚ್ಚಿನ ಆದ್ಯತೆ ನೀಡಿ ಚರಿತ್ರೆಯ ಪ್ರಕ್ರಿಯೆಗಳನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಆಧುನಿಕ ಮಾನವನ ಜೀವನಕ್ಕೆ ಅಗತ್ಯವಾದ ಅನಿವಾರ್ಯ ಆಶಯಗಳಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಜಾತ್ಯತೀತತೆ, ರಾಷ್ಟ್ರೀಯತೆ ಇತ್ಯಾದಿ ರೂಪುಗೊಂಡಿರುವುದು ಬೇರೆ ಬೇರೆ ಭೂಖಂಡಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಳ ಮತ್ತು ಕ್ರಾಂತಿಗಳ ಮೂಲಕವಾಗಿದೆ. **'ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು'** ಎಂಬ ಮೊದಲ ಅಧ್ಯಾಯವು ಇಂತಹ ಆಧುನಿಕ ಆಶಯಗಳ ಕ್ರಮಾನುಗತವಾದ ಬೆಳವಣಿಗೆ ಮತ್ತು ವಿಕಾಸವನ್ನು ಪರಿಚಯಿಸುವ ಹಾಗೂ ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. **'ಇಪ್ಪತ್ತನೆಯ ಶತಮಾನದ ಜಗತ್ತು'** ಎಂಬ ಅಧ್ಯಾಯದಲ್ಲಿ ಇಪ್ಪತ್ತನೇ ಶತಮಾನದಲ್ಲಿ ನಡೆದ ಪ್ರಧಾನ ಘಟನೆಗಳನ್ನು ಹಾಗೂ ಅವುಗಳ ಪರಿಣಾಮಗಳನ್ನು ಚರ್ಚಿಸಲಾಗಿದೆ. ಘಟನೆಗಳ ವಿವರಣೆಗಿಂತಲೂ ಹೆಚ್ಚಿನ ಮಹತ್ವವನ್ನು ಪರಿಣಾಮಗಳಿಗೆ ನೀಡಲಾಗಿದೆ. ಯುದ್ಧವು ಆರಂಭವಾಗುವುದು ಮಾನವನ ಮನಸ್ಸಿನಲ್ಲಾಗಿದೆ. ಆದುದರಿಂದ ಪ್ರತಿಭಟನಾ ಸಾಮರ್ಥ್ಯವನ್ನು ಕಟ್ಟಿ ಬೆಳೆಸಬೇಕಾದುದು ಮಾನವನ ಮನಸ್ಸಿನಲ್ಲಾಗಿದೆಯೆಂಬ ದೃಷ್ಟಿಕೋನವು ಈ ಅಧ್ಯಾಯದ ಪ್ರಧಾನ ಆಶಯವಾಗಿದೆ. ಅನಂತರ ಮುಂದಿನ ಅಧ್ಯಾಯದಲ್ಲಿ ಆಧುನಿಕ ಭಾರತದ ಚರಿತ್ರೆಯನ್ನು ಚರ್ಚಿಸಲಾಗಿದೆ.

ಬ್ರಿಟಿಷರ ಸಾಮ್ರಾಜ್ಯಶಾಹಿ ಶೋಷಣೆ ಮತ್ತು ಅದರ ಪ್ರತಿಕ್ರಿಯೆಯೆಂಬ ನೆಲೆಯಲ್ಲಿ ಬೆಳೆದು ಬಂದ ಭಾರತದ ರಾಷ್ಟ್ರೀಯತೆಯು ಆಧುನಿಕ ಭಾರತದ ಚರಿತ್ರೆಯನ್ನು ರೂಪಿಸಿತು.

ಬ್ರಿಟಿಷರ ಶೋಷಣೆಯು ಭಾರತದ ವಿಭಿನ್ನ ಜನವಿಭಾಗಗಳನ್ನು ಸಾಮ್ರಾಜ್ಯಶಾಹಿ ವಿರುದ್ಧ ಮನೋಭಾವದೆಡೆಗೆ ಮತ್ತು ರಾಷ್ಟ್ರೀಯತೆಯೆಡೆಗೆ ಹೇಗೆ ಸಾಗಿಸಿತೆಂಬುದನ್ನು **'ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು'** ಎಂಬ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ರಾಷ್ಟ್ರೀಯತೆಯು ಭಾರತದ ಸಾಂಸ್ಕೃತಿಕ ವಲಯದಲ್ಲಿ ಯಾವೆಲ್ಲ ಬದಲಾವಣೆಯನ್ನುಂಟುಮಾಡಿತೆಂಬುದನ್ನು **'ಸಂಸ್ಕೃತಿ ಹಾಗೂ ರಾಷ್ಟ್ರೀಯತೆ'** ಎಂಬ ಅಧ್ಯಾಯವು ಸ್ಪಷ್ಟಪಡಿಸುತ್ತದೆ. ಭಾರತದ ವಿದ್ಯಾಸಂಪನ್ನರ ಹಾಗೂ ಉನ್ನತ ವರ್ಗದವರ ಮಧ್ಯೆ ಮಾತ್ರ ಹುದುಗಿಕೊಂಡಿದ್ದ ರಾಷ್ಟ್ರೀಯ ಚಳುವಳಿಯು ಜನಪರ ಸ್ವಭಾವವನ್ನು ಹೇಗೆ ಪಡೆಯಿತೆಂಬುದನ್ನು **'ಹೋರಾಟ ಮತ್ತು ಸ್ವಾತಂತ್ರ್ಯ'** ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ.

**'ಸ್ವಾತಂತ್ರ್ಯಾನಂತರದ ಭಾರತ'** ಎಂಬ ಅಧ್ಯಾಯವು ಸ್ವಾತಂತ್ರ್ಯಾನಂತರ ಭಾರತವು ಎದುರಿಸಿದ ಸಮಸ್ಯೆಗಳನ್ನೂ ಪ್ರಗತಿಯ ಕಡೆಗಿನ ಭಾರತದ ಪ್ರಯಾಣವನ್ನೂ ಸ್ಪಷ್ಟಪಡಿಸುತ್ತದೆ.

**'ಕೇರಳ ಆಧುನಿಕತೆಯೆಡೆಗೆ'** ಎಂಬ ಅಧ್ಯಾಯವು ಆಧುನಿಕತೆಯೆಡೆಗೆ ಕೇರಳದ ಪ್ರಯಾಣದ ವಿವಿಧ ಹಂತಗಳನ್ನು ವಿವರಿಸುತ್ತದೆ.

ರಾಜ್ಯಶಾಸ್ತ್ರದ ಭಾಗವಾಗಿ **'ಸಾರ್ವಜನಿಕ ಆಡಳಿತ'** ಎಂಬ ಅಧ್ಯಾಯದಲ್ಲಿ ಭಾರತದ ಸಾರ್ವಜನಿಕ ಆಡಳಿತ ವ್ಯವಸ್ಥೆಯ ಆವಶ್ಯಕತೆ, ವಿಶೇಷತೆಗಳು, ರಚನೆ, ಆಡಳಿತ ನವೀಕರಣದ ಪ್ರಯತ್ನಗಳನ್ನು ಸ್ಪಷ್ಟಪಡಿಸಲಾಗಿದೆ.

**'ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ'** ವೆಂಬ ಪಾಠಭಾಗದಲ್ಲಿ ರಾಷ್ಟ್ರದ ರೂಪೀಕರಣ, ಘಟಕಗಳು, ಜವಾಬ್ದಾರಿಗಳು, ಪೌರ ಮತ್ತು ರಾಷ್ಟ್ರಗಳೊಳಗಿನ ಸಂಬಂಧ, ರಾಜ್ಯಶಾಸ್ತ್ರ ಕಲಿಕೆಯ ಅನಿವಾರ್ಯತೆ ಇತ್ಯಾದಿಗಳನ್ನು ವಿವರಿಸಲಾಗಿದೆ.

ಒಂದು ಪ್ರಜಾಪ್ರಭುತ್ವ ಸಮಾಜದಲ್ಲಿ ಪೌರಪ್ರಜ್ಞೆಯ ಪ್ರಾಧಾನ್ಯ ಮತ್ತು ಔಚಿತ್ಯ ಏನೆಂಬುದನ್ನು **'ಪೌರಪ್ರಜ್ಞೆ'** ಎಂಬ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**'ಸಮಾಜಶಾಸ್ತ್ರ ಎಂದರೇನು? ಯಾಕೆ?'** ಎಂಬ ಅಧ್ಯಾಯದಲ್ಲಿ ಸಮಾಜಶಾಸ್ತ್ರವೆಂಬ ಕಲಿಕಾವಲಯದ ಪ್ರಾಧಾನ್ಯ ಮತ್ತು ಸಮಾಜಶಾಸ್ತ್ರದ ಕಲಿಕಾ ವಿಧಾನಗಳ ಕುರಿತು ವಿವರಿಸಲಾಗಿದೆ.

ಜ್ಞಾನ ನಿರ್ಮಾಣ ಪ್ರಕ್ರಿಯೆಗೆ ಸಹಾಯಕವಾಗುವ ರೀತಿಯಲ್ಲಿ ವಿಷಯ ವಲಯಗಳನ್ನು, ಕಲಿಕಾ ಚಟುವಟಿಕೆಗಳನ್ನು, ಪ್ರತಿಫಲನಾತ್ಮಕ ಪ್ರಶ್ನೆಗಳನ್ನು, ಸ್ವಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳನ್ನು, ಮುಂದುವರಿದ ಚಟುವಟಿಕೆಗಳನ್ನು ಎಲ್ಲ ಅಧ್ಯಾಯಗಳಲ್ಲೂ ಕೊಡಲಾಗಿದೆ. ಪಾಠಪುಸ್ತಕದಲ್ಲಿರುವ ಸಾಧ್ಯತೆಗಳನ್ನು ವಿಪುಲಗೊಳಿಸಿ ಜ್ಞಾನ ನಿರ್ಮಾಣವನ್ನು ಫಲಪ್ರದವಾಗಿ ಮತ್ತು ಚಟುವಟಿಕೆಯಾಧಾರಿತವಾಗಿ ಮುನ್ನಡೆಸಲು ಪ್ರಯತ್ನಿಸುವಿರಲ್ಲವೇ.




ಅಧ್ಯಾಯ

07

# ಸ್ವಾತಂತ್ರ್ಯಾನಂತರ ಭಾರತ

> ವಿಧಿಯ ಚಕ್ರಗಳು ಬ್ರಿಟಿಷರನ್ನು ಒಂದು ದಿನ ಭಾರತವನ್ನು ಉಪೇಕ್ಷಿಸಲು ನಿರ್ಬಂಧಗೊಳಿಸುವುದು. ಆದರೆ ಯಾವ ರೂಪದಲ್ಲಿರುವ ಭಾರತವನ್ನು ಅವರು ಇಲ್ಲಿ ಉಪೇಕ್ಷಿಸಿ ಹೋಗುವರು? ಶತಮಾನಗಳ ಕಾಲದ ಅವರ ಆಡಳಿತದ ಬಿಗಿ ಹಿಡಿತ ಕೊನೆಗೆ ಬತ್ತಿಬರಡಾಗಿ ಹೋಗುವಾಗ ಅವರು ಬಿಟ್ಟು ಹೋಗುವುದು ಕೆಸರಿನ ಮತ್ತು ಕೊಳಕಿನ ರಾಶಿಯನ್ನಾಗಿರಬಹುದು.
>
> **ರವೀಂದ್ರನಾಥ ಠಾಗೋರ್**



ಇದು ರವೀಂದ್ರನಾಥ ಠಾಗೋರ್ 1941ರಲ್ಲಿ ಪ್ರಕಟಿಸಿದ ಅಭಿಪ್ರಾಯವಾಗಿದೆ. ಈ ಮೂಲಕ ಅವರು ಯಾವೆಲ್ಲ ವಿಚಾರಗಳನ್ನು ಸೂಚಿಸುತ್ತಾರೆ?

- ಭಾರತದ ಆಡಳಿತವನ್ನು ಬ್ರಿಟಿಷರು ಕೈಬಿಡಬೇಕಾಗಬಹುದು.
- ಬ್ರಿಟಿಷರು ಬಿಟ್ಟುಹೋಗುವುದು ಸಂಕಷ್ಟಪೂರ್ಣವಾದ ಭಾರತವನ್ನಾಗಿರಬಹುದು.

ಸ್ವಾತಂತ್ರ್ಯಾನಂತರದ ಭಾರತವು ಎದುರಿಸಿದ ಅತೀ ದೊಡ್ಡ ಸವಾಲು ವಿಭಜನೆ ಮತ್ತು ಅದರ ಫಲವಾಗಿ ಉಂಟಾದ ನಿರಾಶ್ರಿತರ ಸಮಸ್ಯೆಯಾಗಿತ್ತು.

## ನಿರಾಶ್ರಿತರ ಪ್ರವಾಹ



ಮೇಲಿನ ಚಿತ್ರಗಳನ್ನು ಗಮನಿಸಿರಿ. ಇವು ಕುಟುಂಬದ ಸದಸ್ಯರು ತಮ್ಮ ವಸ್ತುಗಳೊಂದಿಗೆ ಪ್ರಯಾಣ ಮಾಡುವ ನಿರಾಶ್ರಿತರ ಚಿತ್ರಗಳಾಗಿವೆ.ಇದು ದೇಶವಿಭಜನೆಯ ಕಾಲದ ಸಾಮಾನ್ಯ

NT-911-2-SOC.SCI.-I-10-K-VOL.2

ದೃಶ್ಯವಾಗಿತ್ತು. ಭಾರತದಿಂದ ಪಾಕಿಸ್ತಾನಕ್ಕೂ ಪಾಕಿಸ್ತಾನದಿಂದ ಭಾರತಕ್ಕೂ ನಿರಾಶ್ರಿತರ ಪ್ರವಾಹ ಉಂಟಾಯಿತು. ಇದರಿಂದಾಗಿ ದೇಶದ ಹಲವೆಡೆಗಳಲ್ಲಿ ಕೋಮುಗಲಭೆಗಳುಂಟಾದುವು. ಕಲ್ಕತ್ತ, ಬಿಹಾರ, ನವಖಾಲಿ, ದಿಲ್ಲಿ, ಪಂಜಾಬು, ಕಾಶ್ಮೀರ ಮೊದಲಾದ ಸ್ಥಳಗಳಲ್ಲಿ ಗಲಭೆಗಳಿಂದ ರಕ್ತಸಿಕ್ತವಾಯಿತು. ಸಾವಿರಾರು ಜನರು ಹತ್ಯೆಗೈಯಲ್ಪಟ್ಟರು. ಮಹಿಳೆಯರು ಆಕ್ರಮಣಕ್ಕೊಳಗಾದರು. ಇದರ ಪರಿಣಾಮವಾಗಿ ಸರ್ವಸ್ವವನ್ನೂ ಕಳಕೊಂಡು ಪಲಾಯನ ಮಾಡಿದ ಬೇರೆ ಬೇರೆ ವಿಭಾಗದವರು ನಿರಾಶ್ರಿತರಾಗಿ ಸಂಚರಿಸಬೇಕಾಯಿತು. ಕಾಲ್ನಡಿಗೆಯಾಗಿಯೂ ಎತ್ತಿನ ಗಾಡಿಯಲ್ಲೂ ಉಗಿಬಂಡಿಯಲ್ಲೂ ಹತ್ತು ದಶಲಕ್ಷದಷ್ಟು ಜನರು ನಿರಾಶ್ರಿತರಾಗಬೇಕಾಯಿತು. ಸ್ವಾತಂತ್ರ್ಯ ನಂತರ ಸರಕಾರದ ಸಂದರ್ಭೋಚಿತ ಮಧ್ಯಪ್ರವೇಶದಿಂದ ಹಾಗೂ ಪುನರ್ವಸತಿ ಕಾರ್ಯಗಳಿಂದ ನಿರಾಶ್ರಿತರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಯಿತು.



**ಹುತಾತ್ಮರಾದ ಗಾಂಧೀಜಿ**

“ನಮ್ಮ ಬದುಕಿನಿಂದ ಪ್ರಕಾಶವೊಂದು ಕಣ್ಮರೆಯಾಯಿತು. ಈಗ ಎಲ್ಲೆಲ್ಲೂ ಕತ್ತಲು” ಇವು ಗಾಂಧೀಜಿಯ ಮರಣದ ಕುರಿತು ನೆಹರೂರವರು ಹೇಳಿದ ಮಾತುಗಳಾಗಿವೆ. ಭಾರತವನ್ನು ಬ್ರಿಟಿಷರ ಆಡಳಿತದಿಂದ ಮುಕ್ತವಾಗಿಸಲು ಅಹಿಂಸಾತ್ಮಕ ಹೋರಾಟಕ್ಕೆ ನೇತೃತ್ವ ನೀಡಿದ ಗಾಂಧೀಜಿಯು 1948 ಜನವರಿ 30ರಂದು ದಿಲ್ಲಿಯ ಪ್ರಾರ್ಥನಾ ಸ್ಥಳದಲ್ಲಿ ನಾಥೂರಾಂ ವಿನಾಯಕ ಗೋಡ್ಸೆಯ ಗುಂಡೇಟಿಗೆ ಬಲಿಯಾದರು. ಗಾಂಧೀಜಿಯವರ ಹತ್ಯೆಯು ವಿಭಜನೆಯ ನಂತರ ನಡೆದ ಕೋಮುಗಲಭೆಗಳ ಪರಿಣಾಮವಾಗಿದೆ.

## ದೇಶೀಯ ರಾಜ್ಯಗಳ ವಿಲೀನೀಕರಣ



**ಸ್ವತಂತ್ರ ಭಾರತದಲ್ಲಿ ನಿರಾಶ್ರಿತರ ಪ್ರವಾಹಕ್ಕೆ ಕಾರಣವಾದ ಸನ್ನಿವೇಶವನ್ನು ಚರ್ಚಿಸಿರಿ.**

ಸ್ವಾತಂತ್ರ್ಯ ಸಿಗುವುದಕ್ಕಿಂತ ಮೊದಲು ಭಾರತದಲ್ಲಿ ಬ್ರಿಟಿಷರು ಪ್ರತ್ಯಕ್ಷವಾಗಿ ಆಡಳಿತ ನಡೆಸುತ್ತಿದ್ದ ಪ್ರದೇಶಗಳನ್ನು ಹೊರತುಪಡಿಸಿ ಬ್ರಿಟಿಷ್ ನಿಯಂತ್ರಣದಲ್ಲಿದ್ದ ಆರು ನೂರರಷ್ಟು ದೇಶೀಯ ರಾಜ್ಯಗಳಿದ್ದುವು. ದೇಶೀಯ ರಾಜ್ಯಗಳು ಭಾರತದೊಂದಿಗೊ ಪಾಕಿಸ್ತಾನದೊಂದಿಗೊ ಸೇರಲು ಅಥವಾ ಸ್ವತಂತ್ರವಾಗಿರಲೊ ಅಧಿಕಾರ ನೀಡಿದ ಬಳಿಕವೇ ಬ್ರಿಟಿಷರು ಭಾರತವನ್ನು ಬಿಟ್ಟು ಹೋದರು. ದೇಶೀಯ ರಾಜ್ಯಗಳನ್ನು ಭಾರತದ ಒಕ್ಕೂಟದೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆಯು ಸ್ವಾತಂತ್ರ್ಯಾನಂತರ ಭಾರತವು ಎದುರಿಸಿದ ಪ್ರಧಾನ ಸಮಸ್ಯೆಗಳಲ್ಲೊಂದಾಗಿತ್ತು. ಇದು ಬಹಳ ತ್ರಾಸದಾಯಕ ಕೆಲಸವಾಗಿತ್ತು. ಕೇಂದ್ರಮಂತ್ರಿ ಮಂಡಲದಲ್ಲಿ ಪ್ರಾಂತ್ಯಗಳಿಗೆ ಸಂಬಂಧಿಸಿದ ಖಾತೆಯ ಜವಾಬ್ದಾರಿಯನ್ನು ಸರ್ದಾರ್ ವಲ್ಲಭಭಾಯ್ ಪಟೇಲರು ವಹಿಸಿದ್ದರು. ಸ್ಟೇಟ್ಸ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯಾಗಿ ಮಲಯಾಳಿಯಾದ ವಿ.ಪಿ. ಮೆನೋನ್‌ರನ್ನು ಅವರು ನೇಮಕಗೊಳಿಸಿದರು.


ದೇಶೀಯ ರಾಜ್ಯಗಳನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಲು ಪಟೇಲ್ ಮತ್ತು ವಿ.ಪಿ. ಮೆನೋನ್ ಸೇರಿ ವಿಲೀನೀಕರಣ ಒಪ್ಪಂದ (Instrument of Accession) ವನ್ನು ತಯಾರಿಸಿದರು. ಅದರ ಪ್ರಕಾರ ರಕ್ಷಣೆ, ವಿದೇಶಾಂಗ, ವಾರ್ತಾ ವಿನಿಮಯ ಎಂಬಿವುಗಳ ನಿಯಂತ್ರಣವನ್ನು ದೇಶೀಯ ರಾಜ್ಯಗಳು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸಬೇಕು. ಜನಪರ ಪ್ರತಿಭಟನೆಗಳು ಮತ್ತು ಭಾರತ ಸರಕಾರದ ಪ್ರಾಯೋಗಿಕ ಹಸ್ತಕ್ಷೇಪದಿಂದಾಗಿ ಹೆಚ್ಚಿನ

ದೇಶೀಯ ರಾಜ್ಯಗಳು ವಿಲೀನೀಕರಣ ಒಪ್ಪಂದಕ್ಕೆ ಸಹಿ ಹಾಕಿ ಭಾರತ ಒಕ್ಕೂಟದಲ್ಲಿ ಸೇರಿದವು. ಆದರೆ ಹೈದರಾಬಾದ್, ಕಾಶ್ಮೀರ, ಜುನಾಘಢ ಎಂಬೀ ದೇಶೀಯ ರಾಜ್ಯಗಳು ಭಾರತ ಒಕ್ಕೂಟದೊಂದಿಗೆ ಸೇರಲು ನಿರಾಕರಿಸಿದವು. ಬಳಿಕ ಮಾತುಕತೆ ಹಾಗೂ ಸೈನಿಕ ಕಾರ್ಯಾಚರಣೆಯ ಮೂಲಕ ಇವುಗಳನ್ನು ಭಾರತ ಒಕ್ಕೂಟದೊಂದಿಗೆ ಸೇರ್ಪಡೆಗೊಳಿಸಲಾಯಿತು.

### ವಿಭಜನೆ ಚಲನಚಿತ್ರದಲ್ಲಿ

ವಿಭಜನೆಯ ಕಾಲದ ಘಟನೆಗಳನ್ನು ಆಧರಿಸಿ ಅನೇಕ ಚಲನಚಿತ್ರಗಳು ನಿರ್ಮಿಸಲ್ಪಟ್ಟಿವೆ. ಋತ್ವಿಕ್ ಘಟಕ್‌ರ "ಮೇಘೆ ಧಾಕ್ಕಾಧಾರ" ಎಂ.ಎಸ್. ಸತ್ಯುರವರ 'ಗರಂ ಹವ' ಗೋವಿಂದ್ ನಿಹಲಾನಿಯ 'ತಮಸ್' ಪಮೇಲರೂಕ್ಸ್‌ರ 'ಟ್ರೈಯಿನ್ ಟು ಪಾಕಿಸ್ತಾನ್' ಮೊದಲಾದವು ವಿಭಜನೆ ಕಾಲದ ಸಮಸ್ಯೆಗಳನ್ನಾಧರಿಸಿ ನಿರ್ಮಿಸಲ್ಪಟ್ಟ ಖ್ಯಾತ ಚಲನಚಿತ್ರಗಳಾಗಿವೆ.

ಭಾರತದ ಕೆಲವು ಪ್ರದೇಶಗಳು ಸ್ವಾತಂತ್ರ್ಯ ಲಭಿಸಿದ ಬಳಿಕ ಫ್ರಾನ್ಸ್, ಪೋರ್ಚುಗಲ್ ಎಂಬೀ ಯುರೋಪಿನ ದೇಶಗಳ ಅಧೀನದಲ್ಲಿದ್ದುವು. ಇವುಗಳಲ್ಲಿ ಪ್ರಬಲ ಜನಪರ ಹೋರಾಟಗಳುಂಟಾದವು. ಇದರಿಂದಾಗಿ ಫ್ರಾನ್ಸ್ ತಮ್ಮ ಸ್ವಾಧೀನದಲ್ಲಿದ್ದ ಪ್ರದೇಶಗಳನ್ನು ಹಿಂತಿರುಗಿಸಿದುವು. ಸೈನಿಕ ಕಾರ್ಯಾಚರಣೆಯ ಮೂಲಕ ಪೋರ್ಚುಗಲ್‌ನ ಸ್ವಾಧೀನದಲ್ಲಿದ್ದ ಪ್ರದೇಶಗಳನ್ನು ಭಾರತದ ಒಕ್ಕೂಟದೊಂದಿಗೆ ವಿಲೀನಗೊಳಿಸಲಾಯಿತು. ಕೆಳಗೆ ಕೊಟ್ಟಿರುವ ತಖ್ತೆಯಿಂದ ಇದು ಸ್ಪಷ್ಟವಾಗುತ್ತದೆ.



ಸರ್ದಾರ್ ವಲ್ಲಭಭಾಯ್ ಪಟೇಲ್


### ವಿ.ಪಿ. ಮೆನೋನ್



ಇವರು 1894ರಲ್ಲಿ ಪಾಲಕ್ಕಾಡ್ ಜಿಲ್ಲೆಯ ಒಟ್ಟಪಾಲದಲ್ಲಿ ಜನಿಸಿದರು. ಶಾಲಾ ಜೀವನದ ಬಳಿಕ ವಿವಿಧ ವಲಯಗಳಲ್ಲಿ ದುಡಿದರು. ಬಳಿಕ ದೆಹಲಿಯ ಸೆಕ್ರಟೇರಿಯಟ್‌ನಲ್ಲಿ ಗುಮಾಸ್ತರಾದರು. ಇಂಗ್ಲೀಷ್ ಭಾಷೆಯಲ್ಲಿ ಪಾಂಡಿತ್ಯವಿದ್ದ ಕಾರಣ ಸರಕಾರ ಅವರಿಗೆ ಅನೇಕ ಜವಾಬ್ದಾರಿಗಳನ್ನು ನೀಡಿತು. ಸರ್ದಾರ್ ಪಟೇಲರು ಹಾಗೂ ನೆಹರೂರವರೊಂದಿಗೆ ದೇಶೀಯ ರಾಜ್ಯಗಳ ಸೇರ್ಪಡೆಯಲ್ಲಿ ನಿರ್ಣಾಯಕ ಪಾತ್ರವಹಿಸಿದರು. 1952ರಲ್ಲಿ ಒರಿಸ್ಸಾದ ರಾಜ್ಯಪಾಲರಾಗಿ ಅಧಿಕಾರ ವಹಿಸಿದರು. 'ದಿ ಟ್ರಾನ್ಸ್‌ಫರ್ ಆಫ್ ಪವರ್ ಇನ್ ಇಂಡಿಯಾ', 'ಇಂಟಗ್ರೇಶನ್ ಆಫ್ ಇಂಡಿಯನ್ ಸ್ಟೇಟ್ಸ್' ಎಂಬೀ ಗ್ರಂಥಗಳನ್ನು ರಚಿಸಿದರು.

| ದೇಶ | ಅಧೀನದಲ್ಲಿರುವ ಪ್ರದೇಶ | ಭಾರತ ಒಕ್ಕೂಟ ಸೇರಿದ ವರ್ಷ |
|---|---|---|
| ♦ ಫ್ರಾನ್ಸ್ | ♦ ಪೊಂಡಿಚ್ಚೇರಿ, ಕಾರೈಕಲ್, ಮಾಹೆ, ಯಾನಂ | • 1954 |
| ♦ ಪೋರ್ಚುಗಲ್ | ♦ ಗೋವಾ, ಡಾಮನ್, ಡಿಯು | • 1961 |

## ಸಂವಿಧಾನ ರಚನೆ ಮತ್ತು ಪ್ರಥಮ ಸಾರ್ವತ್ರಿಕ ಚುನಾವಣೆ




ಡಾ. ರಾಜೇಂದ್ರಪ್ರಸಾದ್



ಡಾ. ಬಿ.ಆರ್. ಅಂಬೇಡ್ಕರ್

ಭಾರತ ರಾಷ್ಟ್ರರೂಪೀಕರಣದ ಅಡಿಪಾಯವೇ ಭಾರತದ ಸಂವಿಧಾನ. ಸ್ವಾತಂತ್ರ್ಯ ಲಭಿಸುವುದಕ್ಕಿಂತ ಮೊದಲೇ ಬ್ರಿಟಿಷ್ ಆಡಳಿತದ ಅಧೀನದಲ್ಲಿರುವ ಕ್ಯಾಬಿನೆಟ್ ಮಿಷನ್ ಒಂದು ಸಂವಿಧಾನ ನಿರ್ಮಾಣ ಸಮಿತಿಯನ್ನು ರೂಪೀಕರಿಸಲು ನಿರ್ದೇಶಿಸಿತು. ಇದರಂತೆ 1946ರಲ್ಲಿ ಡಾ. ರಾಜೇಂದ್ರ ಪ್ರಸಾದ್ ಅಧ್ಯಕ್ಷರಾಗಿರುವ ಸಂವಿಧಾನ ರಚನಾ ಸಮಿತಿಯನ್ನು ರೂಪಿಸಲಾಯಿತು. ಸ್ವಾತಂತ್ರ ಲಭಿಸಿದ ಬಳಿಕ ಬಹಳ ಬೇಗನೆ ಅದರ ಚಟುವಟಿಕೆಗಳು ಸಾಗಿದವು. ಸಂವಿಧಾನ ರಚಿಸಲು ಡಾ. ಬಿ.ಆರ್. ಅಂಬೇಡ್ಕರ್ ಚೆಯರ್‌ಮೇನ್ ಆಗಿರುವ ಕರಡು ಸಮಿತಿಯನ್ನು ರಚಿಸಲಾಯಿತು. ಅನೇಕ ಚರ್ಚೆ ಹಾಗೂ ಸಂವಾದಗಳ ಬಳಿಕ ಸಂವಿಧಾನಕ್ಕೆ ರೂಪು ನೀಡಿದರು. ಸಂವಿಧಾನವು ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮೊಳಗಿ ಬಂದ ಆಶಯ ಮತ್ತು ಆಗ್ರಹಗಳ ಪ್ರತಿಫಲನವಾಗಿದೆ. 1950 ಜನವರಿ 26ರಂದು ಸ್ವತಂತ್ರ ಭಾರತದ ಸಂವಿಧಾನ ಜಾರಿಯಾಗಿ ಭಾರತವನ್ನು ಒಂದು ಗಣರಾಜ್ಯ ದೇಶವೆಂದು ಘೋಷಿಸಲಾಯಿತು.

ಸ್ವಾತಂತ್ರ್ಯಾನಂತರ ಭಾರತ ಎದುರಿಸಿದ ಮತ್ತೊಂದು ಸಮಸ್ಯೆ ಪ್ರಜಾಪ್ರಭುತ್ವ ವ್ಯವಸ್ಥೆಯ ರೂಪೀಕರಣವಾಗಿದೆ. ಸಂವಿಧಾನಕ್ಕನುಸಾರವಾಗಿ ಭಾರತದ ಪ್ರಥಮ ಚುನಾವಣೆ 1951, 1952ರಲ್ಲಿ ನಡೆಯಿತು. ಸ್ವತಂತ್ರವೂ ನಿಷ್ಪಕ್ಷವೂ ಆಗಿ ನಡೆದ ಪ್ರಥಮ ಚುನಾವಣೆಯು ಭಾರತದ ಪ್ರಜಾಪ್ರಭುತ್ವದ ಗೆಲುವಾಗಿದೆ. ಭಾರತದೊಂದಿಗೆ ಸ್ವಾತಂತ್ರ್ಯ ಗಳಿಸಿದ ಏಷ್ಯಾ ಮತ್ತು ಆಫ್ರಿಕದ ಹೆಚ್ಚಿನ ದೇಶಗಳು ಪ್ರಜಾಪ್ರಭುತ್ವದಿಂದ ದೂರ ಸರಿಯುತ್ತಿರುವಾಗ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಇಂದಿಗೂ ಶಕ್ತಿಯುತವಾಗಿ ನೆಲೆನಿಂತಿದೆ.




ಭಾರತ ಸಂವಿಧಾನದ ಮುಖಪುಟ

ಸಂವಿಧಾನ ರಚನೆಯ ವಿವಿಧ ಹಂತಗಳನ್ನು ಮತ್ತು ಸಂಬಂಧಿಸಿದ ವ್ಯಕ್ತಿಗಳನ್ನು ಸೇರಿಸಿ ಪ್ರೆಸೆಂಟೇಶನ್ ತಯಾರಿಸಿರಿ.





**ಭಾರತದ ಪ್ರಜಾಪ್ರಭುತ್ವವನ್ನು ಸಂರಕ್ಷಿಸುವುದರಲ್ಲಿ ಸಂವಿಧಾನದ ಪಾತ್ರವನ್ನು ಚರ್ಚಿಸಿರಿ.**

## ಭಾಷಾವಾರು ಪ್ರಾಂತ್ಯಗಳ ರೂಪೀಕರಣ

ದೇಶೀಯರಾಜ್ಯಗಳ ವಿಲೀನದ ಕುರಿತಾಗಿ ನಾವು ಚರ್ಚಿಸಿದೆವಲ್ಲವೇ.ಇಲ್ಲಿನ ಜನರು ಎದುರಿಸುವ ಒಂದು ಪ್ರಧಾನ ಸಮಸ್ಯೆ ಭಾಷೆಗೆ ಸಂಬಂಧಿಸಿದುದಾಗಿದೆ. ಒಂದು ದೇಶೀಯ ರಾಜ್ಯದಲ್ಲಿ ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರಿದ್ದರು. ಆದಕಾರಣ ಭಾಷೆಯ ಆಧಾರದಲ್ಲಿ

ಪ್ರಾಂತ್ಯಗಳನ್ನು ರೂಪಿಸಬೇಕೆಂಬ ಬೇಡಿಕೆ ಭಾರತದ ವಿವಿಧ ಭಾಗಗಳಲ್ಲಿ ಹುಟ್ಟಿಕೊಂಡಿತು. 1920ರ ನಾಗಪುರ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಷೆಯ ಆಧಾರದಲ್ಲಿ ಪ್ರಾಂತ್ಯ ಕಾಂಗ್ರೆಸ್ ಸಮಿತಿಗಳನ್ನು ರೂಪಿಸಲು ತೀರ್ಮಾನಿಸಲಾಯಿತು. ಸ್ವಾತಂತ್ರ್ಯಾನಂತರ ಭಾಷೆಯ ಆಧಾರದಲ್ಲಿ ಪ್ರಾಂತ್ಯಗಳನ್ನು ರೂಪೀಕರಿಸಬೇಕೆಂಬ ಬೇಡಿಕೆ ಮುಂದಿಟ್ಟು ಜನಪರ ಚಳುವಳಿಯು ಆರಂಭವಾಯಿತು. ತೆಲುಗು ಮಾತನಾಡುವವರಿಗಾಗಿ ಆಂಧ್ರಪ್ರಾಂತ್ಯ ರೂಪಿಸಬೇಕೆಂಬ ಬೇಡಿಕೆಯೊಂದಿಗೆ ಸ್ವಾತಂತ್ರ್ಯ ಹೋರಾಟಗಾರರಾದ ಪೋಟ್ಟಿ ಶ್ರೀರಾಮುಲು ನಿರಾಹಾರ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಐವತ್ತೆಂಟು ದಿನಗಳ ನಿರಾಹಾರ ಸತ್ಯಾಗ್ರಹದಿಂದಾಗಿ ಅವರು ಮರಣ ಹೊಂದಿದರು. ಇದರಿಂದಾಗಿ ಹೋರಾಟ ತೀವ್ರ ಸ್ವರೂಪ ಪಡೆದು ತೆಲುಗು ಮಾತನಾಡುವವರಿಗಾಗಿ ಆಂಧ್ರಪ್ರದೇಶ ಎಂಬ ಪ್ರಾಂತ್ಯಕ್ಕೆ 1953ರಲ್ಲಿ ರೂಪುನೀಡಿದರು. ಭಾಷೆಯ ಆಧಾರದಲ್ಲಿ ಪ್ರಾಂತ್ಯ ಬೇಕೆಂಬ ಬೇಡಿಕೆ ಇದರಿಂದಾಗಿ ತೀವ್ರವಾಯಿತು. ಭಾಷೆಗಳ ಆಧಾರದಲ್ಲಿ ಪ್ರಾಂತ್ಯಗಳನ್ನು ಪುನಃ ರೂಪಿಸುವುದಕ್ಕಾಗಿ ಪ್ರಾಂತ್ಯ ಪುನರ್ವಿಂಗಡನಾ ಆಯೋಗವನ್ನು ರಚಿಸಿದರು. ಫಜಲ್ ಆಲಿ ಈ ಆಯೋಗದ ಅಧ್ಯಕ್ಷರಾಗಿದ್ದರು. ಎಚ್.ಎನ್. ಕುನ್ಸ್ರು, ಮಲಯಾಳಿಯಾದ ಕೆ.ಎಂ. ಫಣಿಕ್ಕರ್ ಎಂಬವರು ಆಯೋಗದ ಇತರ ಸದಸ್ಯರು.



ಪೋಟಿ ಶ್ರೀರಾಮುಲು



ಫಸಲ್ ಆಲಿ



ಕೆ.ಎಂ.ಪಣಿಕ್ಕರ್



ಎಚ್.ಎನ್. ಕುನ್ಸ್ರು

ಈ ಆಯೋಗದ ವರದಿಯ ಆಧಾರದಲ್ಲಿ 1956ರಲ್ಲಿ ಭಾರತದ ಪ್ರಾಂತ್ಯ ಪುನರ್ವಿಂಗಡನಾ ನಿಯಮವನ್ನು ಪಾರ್ಲಿಮೆಂಟು ಅಂಗೀಕರಿಸಿತು. ಇದರ ಪ್ರಕಾರ ಹದಿನಾಲ್ಕು ಪ್ರಾಂತ್ಯಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳು ರೂಪುಗೊಂಡುವು.

ಬಳಿಕ ಹಲವು ಹಂತಗಳಲ್ಲಾಗಿ ಹೊಸ ಪ್ರಾಂತ್ಯಗಳು ರೂಪುಗೊಂಡುವು. ಭಾರತದಲ್ಲಿ ಈಗ ಇಪ್ಪತ್ತೊಂಬತ್ತು ಪ್ರಾಂತ್ಯಗಳು ಹಾಗೂ ಆರು ಕೇಂದ್ರಾಡಳಿತ ಪ್ರದೇಶಗಳು ಮತ್ತು ಒಂದು ಸ್ಟೇಟ್ ಕೇಪಿಟಲ್ ಟೆರಿಟೆರಿಯಿದೆ.

ಭಾರತದ 29 ಪ್ರಾಂತ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳನ್ನು ಸೇರಿಸಿ ಕೊಂಡು ಕಲಿಕಾ ಸಂಪನ್ಮೂಲವೊಂದನ್ನು ತಯಾರಿಸಿರಿ.



ಸ್ವತಂತ್ರ ಭಾರತವು ಪ್ರಾಂತ್ಯ ಪುನರ್ವಿಂಗಡನೆಗಾಗಿ ಭಾಷೆಯನ್ನು ಮಾನದಂಡವಾಗಿ ಸ್ವೀಕರಿಸಿದುದು ಯಾಕೆ?



## ಆರ್ಥಿಕ ವಲಯದ ಸಾಧನೆಗಳು

ಸ್ವತಂತ್ರ ಭಾರತದ ಆರ್ಥಿಕ ಅಡಿಪಾಯವು ಬಹಳ ಶೋಚನೀಯವಾಗಿತ್ತು. ಆ ಕಾಲದಲ್ಲಿ ನೆಲೆನಿಂತಿದ್ದ ಬಂಡವಾಳಶಾಹಿ - ಸಮಾಜವಾದಿ ಆರ್ಥಿಕ ವ್ಯವಸ್ಥೆಗಳ ಸಮನ್ವಯವಾದ ಮಿಶ್ರ ಆರ್ಥಿಕ ವ್ಯವಸ್ಥೆ (Mixed Economy) ಯನ್ನು ಭಾರತವು ಸ್ವೀಕರಿಸಿತು. ಅದು ಸಾರ್ವಜನಿಕ ವಲಯಕ್ಕೆ ಮಹತ್ವ ನೀಡಿತು.



**ಯೋಜನಾ ಆಯೋಗ**

1950 ಮಾರ್ಚ್ 15ರಂದು ಯೋಜನಾ ಆಯೋಗವು ಅಸ್ತಿತ್ವಕ್ಕೆ ಬಂದಿತು. ಪ್ರಧಾನಮಂತ್ರಿ ಜವಹರಲಾಲ್ ನೆಹರು ಅಧ್ಯಕ್ಷರಾಗಿ ಹಾಗೂ ಗುಲ್ಜಾರಿಲಾಲ್‌ನಂದರು ಉಪಾಧ್ಯಕ್ಷರಾಗಿದ್ದರು. ಟಿ.ಟಿ ಕೃಷ್ಣಮಾಚಾರಿ, ಸಿ.ಡಿ.ದೇಶ್‌ಮುಖ್ ಎಂಬವರು ಸದಸ್ಯರಾಗಿದ್ದರು.

ಸ್ವಾತಂತ್ರ್ಯಾನಂತರ ಜವಹರಲಾಲ್ ನೆಹರೂರವರ ನೇತೃತ್ವದ ಸರಕಾರವು ಆರ್ಥಿಕ ಪ್ರಗತಿಯನ್ನು ಗುರಿಯಾಗಿರಿಸಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದರು. ಇವುಗಳಲ್ಲಿ ಹಲವು ಯೋಜನೆಗಳು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜರಗಿದ ಕಾಂಗ್ರೆಸ್ ಸಮ್ಮೇಳನಗಳಲ್ಲಿ ಚರ್ಚಿಸಿದವುಗಳಾಗಿವೆ. ಅವುಗಳಲ್ಲಿ ಕೇಂದ್ರೀಕೃತ ಆರ್ಥಿಕ ಯೋಜನೆಯು ಪ್ರಧಾನವಾದುದಾಗಿದೆ. ಸೋವಿಯತ್ ಯೂನಿಯನ್‌ನಿಂದ ಭಾರತವು ಕೇಂದ್ರೀಕೃತ ಆರ್ಥಿಕ ಯೋಜನೆ ಎಂಬ ಆಶಯವನ್ನು ಸ್ವೀಕರಿಸಿತು. ಭಾರತದ ಆರ್ಥಿಕ ಯೋಜನೆಯ ಚರಿತ್ರೆಯನ್ನು ಹಿಂದಿನ ತರಗತಿಗಳಲ್ಲಿ ಚರ್ಚಿಸಿದುದು ನೆನಪಿರಬಹುದಲ್ಲವೇ.

ಸ್ವಾತಂತ್ರ್ಯಾನಂತರ ಆರ್ಥಿಕ ಯೋಜನಾ ಕಾರ್ಯಕ್ರಮಕ್ಕೆ ಶಕ್ತಿ ಹೆಚ್ಚಿತು. 1950ರಲ್ಲಿ ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಯೋಜನಾ ಆಯೋಗವು ಅಸ್ತಿತ್ವಕ್ಕೆ ಬಂದಿತು. ಆರ್ಥಿಕ ಅಭಿವೃದ್ಧಿಗಾಗಿ ಯೋಜನಾ ಆಯೋಗವು ಹಲವು ಯೋಜನೆಗಳನ್ನು ಮುಂದಿರಿಸಿತು.



ನೆಹರು ಯೋಜನಾ ಆಯೋಗದ ಸಭೆಯಲ್ಲಿ

ದೇಶದ ಆರ್ಥಿಕ ಬೆಳವಣಿಗೆಯನ್ನು ಗುರಿಯಾಗಿರಿಸಿ ಯೋಜನಾ ಆಯೋಗವು ಜಾರಿಗೊಳಿಸಿದ ಯೋಜನೆಯೇ ಪಂಚವಾರ್ಷಿಕ ಯೋಜನೆಯಾಗಿದೆ. 1951ರಲ್ಲಿ ಆರಂಭವಾದ ಪಂಚವಾರ್ಷಿಕ ಯೋಜನೆಯು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬಹಳಷ್ಟು ಮುಂದೆ ಸಾಗುವುದಕ್ಕೆ ಸಹಾಯಕವಾಯಿತು. ಕೃಷಿ ಕೈಗಾರಿಕಾ ವಲಯಗಳನ್ನು ಪುಷ್ಟಿಗೊಳಿಸಲು, ಬಡತನ ನಿರ್ಮೂಲನೆಗೆ, ಚೈತನ್ಯದ ಉತ್ಪಾದನೆಗೆ, ವಿದ್ಯಾಭ್ಯಾಸ ವಲಯದ ಪ್ರಗತಿಗೆ ಇದು ಸಹಾಯಕವಾಯಿತು. ಆರ್ಥಿಕಾಭಿವೃದ್ಧಿಗೆ ವಿದೇಶಗಳ ಸಹಾಯವೂ ಭಾರತಕ್ಕೆ ಲಭಿಸಿತು. ವಿದೇಶೀಯರ ಸಹಾಯದಿಂದ ಭಾರತದ ವಿವಿಧ ಭಾಗಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಆರಂಭವಾದುವು.



ಬಾಕ್ರಾನಂಗಲ್ ಪದ್ಧತಿ

| ಕಬ್ಬಿಣ-ಉಕ್ಕಿನ ಕೈಗಾರಿಕೆಗಳು | ಸಹಾಯ ನೀಡಿದ ರಾಷ್ಟ್ರಗಳು |
|---|---|
| ◆ ಭಿಲಾಯಿ | ◆ ಸೋವಿಯತ್ ಯೂನಿಯನ್ |
| ◆ ಬೊಕಾರೊ | ◆ ಸೋವಿಯತ್ ಯೂನಿಯನ್ |
| ◆ ರೂರ್ಕೆಲಾ | ◆ ಜರ್ಮನಿ |
| ◆ ದುರ್ಗಾಪುರ | ◆ ಬ್ರಿಟನ್ |

ಭಾರತದ ಆರ್ಥಿಕತೆಯ ಆಧುನೀಕರಣಕ್ಕೆ ಬೃಹತ್ ಅಣೆಕಟ್ಟುಗಳು ಪ್ರಧಾನ ಪಾತ್ರ ವಹಿಸಿವೆ. ಕೃಷಿಗೆ ಅಗತ್ಯವಾದ ನೀರು ಮತ್ತು ಕೈಗಾರಿಕೆಗಳಿಗೆ ಅಗತ್ಯವಿರುವ ವಿದ್ಯುತ್‌ಶಕ್ತಿ ಇದರಿಂದ ಲಭಿಸುತ್ತದೆ. ಭಾರತದ ಬೃಹತ್ ವಿವಿಧೋದ್ದೇಶ ನದೀದಡ ಯೋಜನೆಯಾದ ಬಾಕ್ರಾನಂಗಲ್ ನೀರಾವರಿ ಯೋಜನೆಯು ಸ್ವತಂತ್ರ ಭಾರತದ ಹೆಮ್ಮೆಯ ಯೋಜನೆಯಾಗಿದೆ.

ನೀರಾವರಿ ಸೌಕರ್ಯಗಳ ಲಭ್ಯತೆಯು ಭಾರತದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿತು. ಕೃಷಿ ಅಭಿವೃದ್ಧಿ, ಜಾನುವಾರು ಸಂರಕ್ಷಣೆ, ಭೌತಿಕ ಸೌಕರ್ಯಗಳ ಅಭಿವೃದ್ಧಿ ಮೊದಲಾದ ಗುರಿಯೊಂದಿಗೆ ದೇಶೀಯ ಮಟ್ಟದಲ್ಲಿ ಐವತ್ತೈದು ಯೋಜನೆಗಳಿಗೆ 1952 ಅಕ್ಟೋಬರ್ 2 (ಮಹಾತ್ಮಾ ಗಾಂಧೀಜಿಯವರ ಜನ್ಮದಿನ) ರಂದು ಚಾಲನೆ ನೀಡಿದರು.

ಇಂಜಿನಿಯರಿಂಗ್, ಕೃಷಿ ಸಂಶೋಧನೆ, ಪ್ರವಾಸೋದ್ಯಮ ಯೋಜನೆ ಮೊದಲಾದವುಗಳಿಗೆ ಸಂಬಂಧಿಸಿದ ಉದ್ಯೋಗ ಸಾಧ್ಯತೆಗಳನ್ನು ವಿಶ್ಲೇಷಿಸಿರಿ.

1990ರ ವೇಳೆಗೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಗಣನೀಯ ಬದಲಾವಣೆ ಉಂಟಾಯಿತು. ಸಾರ್ವಜನಿಕ ವಲಯಕ್ಕೆ ಬದಲಾಗಿ ಖಾಸಗಿ ವಲಯಕ್ಕೆ ಪ್ರಾಧಾನ್ಯ ಲಭಿಸಿತು.

**ಸ್ವಾತಂತ್ರ್ಯಾನಂತರ ಭಾರತದ ಆರ್ಥಿಕ ವಲಯದ ಪ್ರಗತಿಯ ಕುರಿತು ತರಗತಿಯಲ್ಲಿ ಚರ್ಚೆ ನಡೆಸಿರಿ.**



ಸ್ವತಂತ್ರ ಭಾರತವು ಆರ್ಥಿಕ ಕ್ಷೇತ್ರದಲ್ಲಿ ಕೈಗೊಂಡ ಕ್ರಮಗಳ ಪರಿಣಾಮಗಳೇನಾಗಿತ್ತು?



## ವೈಜ್ಞಾನಿಕ-ತಾಂತ್ರಿಕ ಸಾಧನೆಗಳು

ಸ್ವಾತಂತ್ರ್ಯಾನಂತರ ಭಾರತವು ವಿಜ್ಞಾನ- ತಂತ್ರಜ್ಞಾನಗಳಲ್ಲಿ ಬಹಳ ಪ್ರಗತಿಯನ್ನು ಸಾಧಿಸಿದೆ. ಭಾರತದ ಕೃಷಿ ಅಭಿವೃದ್ಧಿಯಲ್ಲೂ ಕೈಗಾರಿಕೀಕರಣದಲ್ಲೂ ತಾಂತ್ರಿಕ ಪರಿಣತರಿಗೆ ಪ್ರಧಾನ ಪಾತ್ರವಿದೆ. ಆಧುನಿಕ ವಿಜ್ಞಾನದ ಆರಾಧಕರಾದ ನೆಹರೂರವರ ನೇತೃತ್ವದಲ್ಲಿ ವಿಜ್ಞಾನ-ತಾಂತ್ರಿಕ ರಂಗಗಳಲ್ಲಿ ಭಾರತವು ಅಭೂತಪೂರ್ವ ಸಾಧನೆಯನ್ನು ಮಾಡಿದೆ. ಹಲವು ಸಂಶೋಧನಾ ಸಂಸ್ಥೆಗಳು ಸ್ಥಾಪನೆಗೊಂಡುವು. ಅವುಗಳಲ್ಲಿ ಕೆಲವು ಸಂಸ್ಥೆಗಳನ್ನು ಕೆಳಗೆ ಕೊಡಲಾಗಿದೆ.



ಹೋಮಿ ಜಹಾಂಗೀರ್‌ಭಾಬ

- ವೈಜ್ಞಾನಿಕ – ಕೈಗಾರಿಕಾ ಸಂಶೋಧನಾ ಸಮಿತಿ (Council of Scientifc and Industrial Research)
- ಭಾರತದ ಕೃಷಿ ಸಂಶೋಧನಾ ಸಮಿತಿ (Indian Council for Agricultural Research)
- ಭಾರತದ ವೈದ್ಯಕೀಯ ಸಂಶೋಧನಾ ಸಮಿತಿ (Indian Council of Medical Research)

ಹೋಮಿ ಜಹಾಂಗೀರ್‌ಭಾಬ ಮತ್ತು ಎಸ್.ಎನ್. ಭಟ್ನಾಗರ್‌ರವರು ವಿಜ್ಞಾನ ಕೈಗಾರಿಕಾ ಸಂಶೋಧನಾ ಸಮಿತಿಯ ಯೋಜನೆಗಳಿಗೆ ನೇತೃತ್ವ ನೀಡಿದರು. ಟಾಟಾ ಇನ್‌ಸ್ಟಿಟ್ಯೂಟ್ ಓಫ್ ಫಂಡಮೆಂಟಲ್ ರಿಸರ್ಚ್ ಮತ್ತು ಭಾರತ ಅಣುಶಕ್ತಿ ಆಯೋಗಗಳು ಹೋಮಿ ಜಹಾಂಗೀರ್‌ಭಾಬ ನೇತೃತ್ವ ನೀಡಿದ ಸಂಸ್ಥೆಗಳಾಗಿವೆ.



ಎಸ್.ಎನ್.ಭಟ್ನಾಗರ್

ಅಂತಾರಾಷ್ಟ್ರೀಯ ಗುಣಮಟ್ಟದ ಹಲವು ತಾಂತ್ರಿಕ ವಿದ್ಯಾಲಯಗಳು ಆ ಕಾಲದಲ್ಲಿ ಸ್ಥಾಪಿಸಲ್ಪಟ್ಟವು. ಐದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನೋಲಜಿಗಳನ್ನು (IIT) 1954 ಮತ್ತು1964ರ ನಡುವೆ ಸ್ಥಾಪಿಸಲಾಯಿತು. ವೈಜ್ಞಾನಿಕ ಸಾಮಗ್ರಿಗಳು ಮತ್ತು ವಿಜ್ಞಾನದ ವಿಚಾರಗಳಿಗಾಗಿ ಪಾಶ್ಚಾತ್ಯ ದೇಶಗಳ ಆಶ್ರಯವನ್ನು ಕಡಿಮೆ ಮಾಡಬೇಕು ಎಂಬ ನೆಹರೂರವರ ದೃಷ್ಟಿಕೋನ ಇದಕ್ಕೆ ಅಡಿಪಾಯವಾಯಿತು. ವೈದ್ಯಕೀಯ ವಿದ್ಯಾಭ್ಯಾಸ, ಬಯೋ ಮೆಡಿಕಲ್, ಇಂಜಿನಿಯರಿಂಗ್, ಜೆನೆಟಿಕ್ ವಿಜ್ಞಾನ, ಜೈವ ತಂತ್ರಜ್ಞಾನ, ಆರೋಗ್ಯ, ಸಾರಿಗೆ, ಸಾಗರಸಂಶೋಧನೆ, ಮಾಹಿತಿ ತಂತ್ರಜ್ಞಾನ, ಅಣುಶಕ್ತಿ ಎಂಬೀ ವಲಯಗಳಲ್ಲಿ ಭಾರತವು ಅಪಾರ ಸಾಧನೆಯನ್ನು ಮಾಡಿದೆ.


ಐ.ಎಸ್.ಆರ್.ಒ. ಕೇಂದ್ರಕಛೇರಿ, ಬೆಂಗಳೂರು.

## ಭಾರತ ಮತ್ತು ಬಾಹ್ಯಾಕಾಶ ಸಂಶೋಧನೆ

ಸ್ವಾತಂತ್ರ್ಯಾನಂತರ ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಹಲವು ಸಂಶೋಧನೆಗಳನ್ನು ನಡೆಸಿತು. 1962ರಲ್ಲಿ ಜವಹರಲಾಲ್ ನೆಹರು ಮತ್ತು ವಿಜ್ಞಾನಿಯಾದ ವಿಕ್ರಂ ಸಾರಾಭಾಯಿಯವರ ಪ್ರಯತ್ನದ ಫಲವಾಗಿ ರಾಷ್ಟ್ರೀಯ ಬಾಹ್ಯಾಕಾಶ ಸಂಶೋಧನಾ ಸಮಿತಿಯು ರೂಪೀಕರಿಸಲ್ಪಟ್ಟಿತು. ಅದು ಮುಂದುವರಿದು 1969ರಲ್ಲಿ ಭಾರತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಐ.ಎಸ್.ಆರ್.ಒ.) ರೂಪುಗೊಂಡಂದಿನಿಂದ ಇದು ಭಾರತದ ಬಾಹ್ಯಾಕಾಶ ಸಂಶೋಧನೆಯ ನೇತೃತ್ವವಹಿಸಿತು. ತಿರುವನಂತಪುರಕ್ಕೆ ಸಮೀಪವಿರುವ ತುಂಬಾದಲ್ಲಿ ಭಾರತದ ಮೊದಲ ರೋಕೆಟ್ ಉಡ್ಡಯನ ಕೇಂದ್ರವನ್ನು ಸ್ಥಾಪಿಸಿದರು.


ವಿ.ಎಸ್.ಎಸ್.ವಿ. ತುಂಬ

ಭಾರತದ ಬಾಹ್ಯಾಕಾಶ ಸಂಶೋಧಕರ ಸಾಮೂಹಿಕ ಪ್ರಯತ್ನದ ಫಲವಾಗಿ 1975ರಲ್ಲಿ ಆರ್ಯಭಟ ಎಂಬ ಉಪಗ್ರಹವನ್ನು ಯಶಸ್ವಿಯಾಗಿ ಉಡ್ಡಯನ ಮಾಡಿದರು. ಉಪಗ್ರಹಗಳಿಗೆ ಹೊರತಾಗಿ ಬಾಹ್ಯಾಕಾಶ ಉಡ್ಡಯನ ವಾಹನಗಳನ್ನು ಭಾರತ ಅಭಿವೃದ್ಧಿಪಡಿಸಿತು. ಉಪಗ್ರಹ ನಿರ್ಮಿಸಲು ಮತ್ತು ಉಡ್ಡಯಿಸಲು ಸಾಮರ್ಥ್ಯವುಳ್ಳ ಏಕೈಕ ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರವೆಂಬ ಗೌರವಕ್ಕೆ ಪಾತ್ರವಾಗಲು ಸಾಧ್ಯವಾದುದು ನೆಹರೂರವರ ದೂರದೃಷ್ಟಿಯು ಪರಿಣಾಮವಾಗಿದೆ. ಉಪಗ್ರಹಗಳನ್ನು ಅಭಿವೃದ್ಧಿಪಡಿಸಲು ಹಲವು ಏಜನ್ಸಿಗಳು ಇಂದು ನಮ್ಮಲ್ಲಿವೆ. ಅವುಗಳನ್ನು ಕೆಳಗೆ ಕೊಡಲಾಗಿದೆ.

FDZJ7L

- ನೇಶನಲ್ ರಿಮೋಟ್ ಸೆನ್ಸಿಂಗ್ ಏಜನ್ಸಿ.
- ಫಿಸಿಕಲ್ ರಿಸರ್ಚ್ ಲೆಬೋರೇಟರಿ.


ಆರ್ಯಭಟ

ಕ್ಷಿಪಣಿ ತಾಂತ್ರಿಕತೆಯಲ್ಲೂ ಭಾರತವು ಪ್ರಗತಿಯನ್ನು ಹೊಂದಿದೆ. ಅಗ್ನಿ, ಪೃಥ್ವಿ ಮೊದಲಾದವುಗಳು ಭಾರತವು ಅಭಿವೃದ್ಧಿಪಡಿಸಿದ ಕ್ಷಿಪಣಿಗಳಾಗಿವೆ. ಡಾ. ರಾಜಾರಾಮಣ್ಣ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಮೊದಲಾದವರು ಅಣು ವಿಜ್ಞಾನ ರಂಗದಲ್ಲಿ


ಡಾ. ರಾಜಾ ರಾಮಣ್ಣ

### ವಿಕ್ರಂ ಸಾರಾಭಾಯಿ



ವಿಕ್ರಂ ಸಾರಾಭಾಯಿಯು ಅಣು ವಿಜ್ಞಾನ ಕ್ಷೇತ್ರ ಹಾಗೂ ಬಾಹ್ಯಾಕಾಶ ವಲಯಕ್ಕೆ ಅಪಾರ ಕೊಡುಗೆ ನೀಡಿದ ವಿಜ್ಞಾನಿಯಾಗಿದ್ದಾರೆ. ಕೇಂಬ್ರಿಡ್ಜ್‌ನಿಂದ ಉನ್ನತ ವಿದ್ಯಾಭ್ಯಾಸ ಪಡೆದು ಭಾರತಕ್ಕೆ ಬಂದ ಅವರು ಅಹಮ್ಮದಾಬಾದ್‌ನ ಫಿಸಿಕಲ್ ರಿಸರ್ಚ್ ಲೆಬೋರೇಟರಿಯಲ್ಲಿ ಫಿಸಿಕ್ಸ್ ಪ್ರೊಫೆಸರ್ ಮತ್ತು ನಿರ್ದೇಶಕರಾಗಿದ್ದರು. ವಿಕ್ರಂ ಸಾರಾಭಾಯಿಯವರು ತುಂಬಾ ಬಾಹ್ಯಾಕಾಶ ಸಂಶೋಧನಾ ಕೇಂದ್ರ, ಅಹಮ್ಮದಾಬಾದ್‌ನ ಉಪಗ್ರಹ ವಾರ್ತಾ ವಿನಿಮಯಕೇಂದ್ರ ಮೊದಲಾದುವುಗಳ ಶಿಲ್ಪಿಯಾಗಿದ್ದಾರೆ. ಅವರ ಸ್ಮರಣೆಗಾಗಿ ತುಂಬಾದ ಬಾಹ್ಯಾಕಾಶ ಕೇಂದ್ರಕ್ಕೆ 'ವಿಕ್ರಂ ಸಾರಾಭಾಯಿ ಸ್ಪೇಸ್ ಸೆಂಟರ್' (ವಿ.ಎಸ್.ಎಸ್.ಸಿ.) ಎಂದು ನಾಮಕರಣ ಮಾಡಿದರು.

### ಡಾ. ಎ.ಪಿ.ಜೆ. ಅಬ್ದುಲ್ ಕಲಾಂ



ಭಾರತದ ಹನ್ನೊಂದನೇ ರಾಷ್ಟ್ರಪತಿಯಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಿಜ್ಞಾನಿಯೂ ಸಂಶೋಧಕರೂ ಆಗಿದ್ದರು. ಅವರು ಕ್ಷಿಪಣಿ ತಾಂತ್ರಿಕತೆಯನ್ನು ಅಭಿವೃದ್ಧಿ ಪಡಿಸುವುದರಲ್ಲಿ ಪರಿಣಿತರಾಗಿದ್ದರು. ಐ.ಎಸ್.ಆರ್. ಒ. ದ ಜವಾಬ್ದಾರಿ ವಹಿಸಿದ ಅವರು ಬಾಹ್ಯಾಕಾಶ ಉಪಗ್ರಹ ಉಡ್ಡಯನ ವಾಹಿನಿಗಳನ್ನು (SLV3, PSLV) ಅಭಿವೃದ್ಧಿಪಡಿಸಿದರು. ಅವರನ್ನು 'ಮಿಸೈಲ್ ಮೇನ್ ಆಫ್ ಇಂಡಿಯ'(ಕ್ಷಿಪಣಿಗಳ ಪಿತ) ಎಂದು ಕರೆಯುತ್ತಾರೆ.

ಸಂಶೋಧನೆಗಳಿಗೆ ನೇತೃತ್ವವನ್ನು ನೀಡಿದರು.

ಚಾಂದ್ರಯಾನ, ಮಂಗಳಯಾನಗಳ ಉಡ್ಡಯನದೊಂದಿಗೆ ಭಾರತವು ಬಾಹ್ಯಾಕಾಶ ಸಂಶೋಧನೆಯಲ್ಲಿ ಹೊಸಯುಗಕ್ಕೆ ನಾಂದಿ ಹಾಡಿತು. ಭಾರತದ ಮೊದಲ ಚಾಂದ್ರಯಾನ ಕಾರ್ಯಾಚರಣೆಯು 2008 ಅಕ್ಟೋಬರಿನಲ್ಲಿ ಪ್ರಾರಂಭವಾಯಿತು. ಅಮೇರಿಕ, ರಷ್ಯಾ, ಯುರೋಪಿಯನ್ ಸ್ಪೇಸ್ ಏಜನ್ಸಿ, ಚೀನಾ, ಜಪಾನ್ ಮೊದಲಾದ ದೇಶಗಳ ನಂತರ ಚಂದ್ರನ ಭ್ರಮಣಪಥದಲ್ಲಿ ಸ್ವಂತ ಕೃತಕ ಉಪಗ್ರಹವನ್ನು ಕಳುಹಿಸಿದ ದೇಶವೆಂಬ ಖ್ಯಾತಿಯು ಭಾರತಕ್ಕಿದೆ. ಭಾರತದ ಬಾಹ್ಯಾಕಾಶ ಇಲಾಖೆಯು ಮಂಗಳನಲ್ಲಿಗೆ ಕೈಗೊಂಡ ಕಾರ್ಯಾಚರಣೆಯೇ ಮಂಗಳಯಾನವಾಗಿದೆ. ಮಂಗಳಯಾನವು ಭೂಮಿಯಿಂದ ಬಹಳ ದೂರ ತಲುಪಿದ ಭಾರತ ನಿರ್ಮಿಸಿದ ಕೃತಕ ಉಪಗ್ರಹವಾಗಿದೆ. ಈ ಮೂಲಕ ಬಾಹ್ಯಾಕಾಶ ಸಂಶೋಧನ ರಂಗದಲ್ಲಿ ಹೊಸ ಸಂಶೋಧನೆಗಳಿಗೆ ಭಾರತವು ತಯಾರಾಗುತ್ತಿದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ವೈಜ್ಞಾನಿಕ ಮತ್ತು ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದ ಉನ್ನತ ಮಟ್ಟದ ಅಧ್ಯಯನಕ್ಕೆ ಸಂಬಂಧಿಸಿದ ಕ್ಷೇತ್ರಗಳನ್ನು ಕಂಡುಕೊಳ್ಳಿರಿ.

**ಬಾಹ್ಯಾಕಾಶ ರಂಗದಲ್ಲಿ ಭಾರತದ ಸಾಧನೆಗಳು ಎಂಬ ಆಶಯದ ಆಧಾರದಲ್ಲಿ ಒಂದು ಆಲ್ಬಂ ತಯಾರಿಸಿರಿ.**



ವೈಜ್ಞಾನಿಕ ರಂಗದಲ್ಲಿ ಗಳಿಸಿದ ಸಾಧನೆಗಳು ಭಾರತದ ಅಭಿವೃದ್ಧಿಗೆ ಸಹಾಯಕವಾದುದು ಹೇಗೆ?



NT-911-3-SOC.SCI.-I-10-K-VOL.2

## ಶಿಕ್ಷಣ

*“ಭಾರತದ ಭವಿಷ್ಯ ನಿರ್ಧಾರವಾಗುವುದು ಭಾರತದ ತರಗತಿ ಕೋಣೆಗಳಲ್ಲಿ”*

***ಡಾ.ಡಿ.ಎಸ್.ಕೊಥಾರಿ***

ರಾಷ್ಟ್ರದ ಅಭಿವೃದ್ಧಿಯಲ್ಲಿ ವಿದ್ಯಾಭ್ಯಾಸದ ಮಹತ್ವವನ್ನು ತಿಳಿದ ರಾಷ್ಟ್ರೀಯ ನೇತಾರರು ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ಅನುಸರಿಸಲು ಪ್ರಯತ್ನಿಸಿದರು. ಭಾರತದ ಶಿಕ್ಷಣದ ಕುರಿತು ಅಧ್ಯಯನ ನಡೆಸಲು ಮತ್ತು ಶಿಫಾರಸು ಸಮರ್ಪಿಸಲು ಸರಕಾರವು ಹಲವು ಹಂತಗಳಲ್ಲಾಗಿ ವಿವಿಧ ಆಯೋಗಗಳನ್ನು ನೇಮಿಸಿತು. ಕೆಳಗೆ ಕೊಟ್ಟಿರುವ ತಖ್ತೆಯಿಂದ ಅವುಗಳನ್ನು ಅರ್ಥ ಮಾಡಿಕೊಳ್ಳಬಹುದು.

| ಆಯೋಗ | ಉದ್ದೇಶ | ಶಿಫಾರಸುಗಳು |
|---|---|---|
| ♦ ಡಾ. ರಾಧಾಕೃಷ್ಣನ್ ಆಯೋಗ (1948) | ವಿಶ್ವವಿದ್ಯಾಲಯ ವಿದ್ಯಾಭ್ಯಾಸದ ಕುರಿತು ಅಧ್ಯಯನ | ♦ ಉದ್ಯೋಗ ಆಧಾರಿತ ವಿದ್ಯಾ ಸಂಸ್ಥೆಗಳನ್ನು ಆರಂಭಿಸುವುದು.<br>♦ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರಾಧಾನ್ಯ ನೀಡಬೇಕು.<br>♦ ಯುನಿವರ್ಸಿಟಿಗ್ರಾಂಟ್ಸ್‌ಕಮಿಷನ್ (ಯು.ಜಿ.ಸಿ)ರೂಪಿಸಬೇಕು. |
| ♦ ಡಾ. ಲಕ್ಷ್ಮಣ ಸ್ವಾಮಿ ಮುದಲಿಯಾರ್ ಆಯೋಗ (1952) | ಸೆಕಂಡರಿ ವಿದ್ಯಾಭ್ಯಾಸ ವಲಯದ ಕುರಿತು ಅಧ್ಯಯನ | ♦ ತ್ರಿಭಾಷಾ ಪದ್ಧತಿ ಜಾರಿಗೊಳಿಸಬೇಕು.<br>♦ ಸೆಕಂಡರಿ ಮಟ್ಟದಲ್ಲಿ ವಿದ್ಯಾಭ್ಯಾಸ ಆಯೋಗ ರೂಪಿಸಬೇಕು.<br>♦ ವಿವಿಧೋದ್ದೇಶ ಶಾಲೆಗಳ ಸ್ಥಾಪನೆ<br>♦ ಅಧ್ಯಾಪಕ ತರಬೇತಿ ಸಮಿತಿ ರೂಪಿಸಬೇಕು. |
| ♦ ಡಾ. ಡಿ.ಎಸ್. ಕೊಥಾರಿ ಆಯೋಗ (1964) | ವಿದ್ಯಾಭ್ಯಾಸದ ದೇಶೀಯ ಮಾದರಿಯ ಕುರಿತು ಅಧ್ಯಯನ | ♦ 10+2+3 ಮಾದರಿಯಲ್ಲಿ ವಿದ್ಯಾಭ್ಯಾಸವನ್ನು ಜಾರಿಗೊಳಿಸಬೇಕು.<br>♦ ಸೆಕೆಂಡರಿ ಹಂತದಲ್ಲಿ ವೃತ್ತಿ ಆಧಾರಿತ ಶಿಕ್ಷಣವನ್ನು ಜಾರಿ ಗೊಳಿಸಬೇಕು.<br>♦ ನೈತಿಕ ಶಿಕ್ಷಣಕ್ಕೆ ಒತ್ತು ನೀಡಬೇಕು. |

1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (NPE - National Policy on Education) ಯನ್ನು ರೂಪಿಸಲಾಯಿತು. ನೂತನ ಯುಗಕ್ಕೆ ಭಾರತವನ್ನು ಕೊಂಡೊಯ್ಯುವ ಏಕೈಕ ಗುರಿಯೊಂದಿಗೆ ಇದನ್ನು ಜಾರಿಗೊಳಿಸಲಾಯಿತು. 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಧಾನ ಶಿಫಾರಸುಗಳನ್ನು ಕೆಳಗೆ ಕೊಡಲಾಗಿದೆ.

- ಪ್ರಾಥಮಿಕ ವಿದ್ಯಾಭ್ಯಾಸ ಹಾಗೂ ಮುಂದುವರಿದ ವಿದ್ಯಾಭ್ಯಾಸಕ್ಕೆ ಪ್ರಾಧಾನ್ಯ ನೀಡಬೇಕು.
- ಪ್ರಾಥಮಿಕ ಹಂತದಲ್ಲಿ ವಿದ್ಯಾಭ್ಯಾಸವನ್ನು ಸಾರ್ವತ್ರಿಕಗೊಳಿಸಲು ಮತ್ತು ಶಾಲೆಗಳ ಭೌತಿಕ ಸೌಕರ್ಯಗಳನ್ನು ಉತ್ತಮಗೊಳಿಸಲು 'ಓಪರೇಷನ್ ಬ್ಲೇಕ್ ಬೋರ್ಡ್' ಯೋಜನೆಯನ್ನು ಜಾರಿಗೊಳಿಸಬೇಕು.
- ಪ್ರತಿಯೊಂದು ಜಿಲ್ಲೆಯಲ್ಲಿಯೂ ನವೋದಯ ವಿದ್ಯಾಲಯವನ್ನು ಸ್ಥಾಪಿಸಬೇಕು.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಬೇಕು.



**ಮೌಲಾನ ಅಬ್ದುಲ್ ಕಲಾಂ ಆಜಾದ್**

ಇವರು ಸ್ವತಂತ್ರ ಭಾರತದ ಮೊದಲ ಶಿಕ್ಷಣ ಮಂತ್ರಿಯಾಗಿದ್ದರು. ಸ್ವತಂತ್ರ ಭಾರತದ ಶಿಕ್ಷಣ ನೀತಿಯನ್ನು ರೂಪಿಸುವಲ್ಲಿ ಅವರು ಗಮನಾರ್ಹ ಪಾತ್ರವನ್ನು ವಹಿಸಿದರು. ಅವರ ಜನ್ಮದಿನವಾದ ನವೆಂಬರ್ 11ನ್ನು ದೇಶೀಯ ಶಿಕ್ಷಕ ದಿನವಾಗಿ ಆಚರಿಸುವರು.'ಇಂಡಿಯಾ ವಿನ್ಸ್ ಫ್ರೀಡಂ' ಅವರ ಪ್ರಸಿದ್ಧ ಗ್ರಂಥವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗೆ ನಾಂದಿಹಾಡಲು ನೂತನ ಶಿಕ್ಷಣ ಧೋರಣೆಯಿಂದ ಸಾಧ್ಯವಾಯಿತು. 2009ರಲ್ಲಿ ಭಾರತ ಸರಕಾರವು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಅಂಗೀಕರಿಸಿ ನಿಯಮವನ್ನು ಜಾರಿಗೊಳಿಸಿತು.

ಕೇಂದ್ರ ಸರಕಾರ ಆವಿಷ್ಕರಿಸಿದ ಸರ್ವಶಿಕ್ಷಾ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಮುಂತಾದ ಯೋಜನೆಗಳನ್ನು ಸಂಯೋಜಿಸಿ ಸಮಗ್ರ ಶಿಕ್ಷಾ ಅಭಿಯಾನ್ ಯೋಜನೆಯನ್ನು 2018ರಲ್ಲಿ ದೇಶದಲ್ಲಿ ಜಾರಿಗೊಳಿಸಲಾಯಿತು.

ಸ್ವಾತಂತ್ರ್ಯಾನಂತರ ಭಾರತವು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ವಿಶ್ಲೇಷಿಸಿರಿ.



## ಸಾಂಸ್ಕೃತಿಕ ಸಾಧನೆಗಳು

ಸ್ವಾತಂತ್ರ್ಯಾನಂತರ ಭಾರತವು ಸಾಂಸ್ಕೃತಿಕ ವಲಯದಲ್ಲೂ ಅತ್ಯಧಿಕ ಸಾಧನೆಯನ್ನು ಮಾಡಿದೆ. ಭಾರತಕ್ಕೆ ಅದರದ್ದೇ ಆದ ಸಾಂಸ್ಕೃತಿಕ ಪರಂಪರೆಯಿದೆ ಎಂದು ಹಿಂದಿನ ತರಗತಿಗಳಲ್ಲಿ ಅರ್ಥೈಸಿಕೊಂಡಿರುವಿರಲ್ಲವೇ. ಭಾರತದ ಒಳಗೆ ಹಾಗೂ ಹೊರಗೆ ಸಾಂಸ್ಕೃತಿಕ ಮುನ್ನಡೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಸ್ವಾತಂತ್ರ್ಯಾನಂತರ ಅನೇಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಅವುಗಳಲ್ಲಿ ಪ್ರಧಾನವಾದವುಗಳನ್ನು ತಖ್ತೆಯಲ್ಲಿ ಕೊಡಲಾಗಿದೆ.

**ಸಾಂಸ್ಕೃತಿಕ ವಿನಿಮಯ - ಅಧ್ಯಾಪಕರಿಗಾಗಿ**



ಸೆಂಟರ್ ಫೋರ್ ಕಲ್ಚರಲ್ ರಿಸೋರ್ಸ್ ಏಂಡ್ ಟ್ರೈನಿಂಗ್ (Centre for Cultural Resource and Training) ಎಂಬುದು ವಿದ್ಯಾಭ್ಯಾಸವನ್ನು ಸಂಸ್ಕೃತಿಯೊಂದಿಗೆ ಜೋಡಿಸುವ ಗುರಿಯನ್ನಿಟ್ಟುಕೊಂಡು ಕೇಂದ್ರ ಸಾಂಸ್ಕೃತಿಕ ಇಲಾಖೆಯು 1979ರಲ್ಲಿ ರೂಪಿಸಿದ ಸಂಸ್ಥೆಯಾಗಿದೆ. ನವದೆಹಲಿಯಲ್ಲಿ ಇದರ ಕೇಂದ್ರ ಕಚೇರಿಯಿದೆ. ಅಧ್ಯಾಪಕರಿಗೆ ಮತ್ತು ಮಕ್ಕಳಿಗೆ ಸಾಂಸ್ಕೃತಿಕ ವಿನಿಮಯಕ್ಕೆ ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸುವ ಉದ್ದೇಶವನ್ನು ಇದು ಹೊಂದಿದೆ.

| ಸಂಸ್ಥೆ | ಚಟುವಟಿಕೆಗಳು | ಕೇಂದ್ರ ಕಚೇರಿ |
|---|---|---|
| ♦ ಸಂಗೀತ ನಾಟಕ ಅಕಾಡಮಿ | ♦ ದಿ ನೇಶನಲ್ ಅಕಾಡಮಿ ಆಫ್ ಡಾನ್ಸ್, ಡ್ರಾಮ ಏಂಡ್ ಮ್ಯೂಸಿಕ್ ಎಂದು ಮೊದಲು ಕರೆಯಲ್ಪಡುತಿತು. ಸಂಗೀತ ಹಾಗೂ ನಾಟಕಕ್ಕೆ ಪ್ರೋತ್ಸಾಹವನ್ನೀಯುವುದು ಇದರ ಗುರಿ. | ♦ ನವದೆಹಲಿ |
| ♦ ಲಲಿತ ಕಲಾ ಅಕಾಡಮಿ | ♦ ಭಾರತದ ಒಳಗೂ ಹೊರಗೂ ಭಾರತದ ಕಲೆಗಳನ್ನು ಪ್ರಚಾರ ಮಾಡುವುದು ಇದರ ಗುರಿ. | ♦ ನವದೆಹಲಿ |
| ♦ ಸಾಹಿತ್ಯ ಅಕಾಡಮಿ | ♦ ಭಾರತದ ಭಾಷಾಸಾಹಿತ್ಯದ ಅಭಿವೃದ್ಧಿಯು ಇದರ ಗುರಿ. | ♦ ನವದೆಹಲಿ |
| ♦ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ | ♦ ಸಂಗೀತ, ನಾಟಕ ಅಕಾಡೆಮಿಯ ಅಧೀನದಲಿ ಸ್ಥಾಪನೆಯಾಯಿತು. ಸ್ಕೂಲ್ ಓಫ್ ಡ್ರಾಮ ಎಲಾ ವರ್ಷವೂ ನಾಟಕಮೇಳ ನಡೆಸುತ್ತದೆ. | ♦ ನವದೆಹಲಿ |
| ♦ ನ್ಯಾಶನಲ್ ಬುಕ್ ಟ್ರಸ್ಟ್ ಆಫ್ ಇಂಡಿಯ | ♦ ಕಡಿಮೆ ಖರ್ಚಿನಲ್ಲಿ ಪುಸ್ತಕಗಳನ್ನು ಪ್ರಕಟಿಸುವುದು, ಓದುವ ಹವ್ಯಾಸ ಬೆಳೆಸುವುದು, ಭಾರತದ ಪುಸ್ತಕಗಳನ್ನು ನಮ್ಮ ದೇಶದಲ್ಲಿ ಮತ್ತೆ ವಿದೇಶಗಳಲ್ಲಿ ಪ್ರೋತ್ಸಾಹಿಸುವುದು. | ♦ ನವದೆಹಲಿ |

## ವಿದೇಶ ಧೋರಣೆ

*ಜಗತ್ತಿನ ಎಲ್ಲ ಜನರ ಕ್ಷೇಮ ಹಾಗೂ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡು ಎಲ್ಲರೊಂದಿಗೆ ಸೌಹಾರ್ದತೆಯಿಂದ ಸಹಕರಿಸುವುದು ನಮ್ಮ ಗುರಿಯಾಗಿದೆ. ಯಾರೊಂದಿಗೂ ಸಮಸ್ಯೆಯುಂಟುಮಾಡಲು ತಯಾರಿಲ್ಲ ಎಂದು ಜಗತ್ತಿನ ರಾಷ್ಟ್ರಗಳಿಗೆ ನಾವು ತಿಳಿಸುತ್ತೇವೆ.*

*ಜವಹರಲಾಲ್ ನೆಹರೂರವರ ಭಾಷಣ (1947)*

ನೆಹರೂರವರ ಈ ಮಾತುಗಳು ವಿದೇಶಗಳೊಂದಿಗೆ ಭಾರತದ ಸಮೀಪನವನ್ನು ಸ್ಪಷ್ಟಪಡಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಇಂಡಿಯನ್ ನಾಷನಲ್ ಕಾಂಗ್ರೆಸ್ ರೂಪಿಸಿದ ವಿದೇಶ ಧೋರಣೆಯನ್ನು ಸ್ವಾತಂತ್ರ್ಯಾನಂತರ ಭಾರತವು ಸ್ವೀಕರಿಸಿದೆ. ಜವಹರಲಾಲ್ ನೆಹರೂರವರು ಭಾರತದ ವಿದೇಶ ಧೋರಣೆಯ ಮುಖ್ಯ ಶಿಲ್ಪಿಯಾಗಿದ್ದಾರೆ.

ಭಾರತದ ವಿದೇಶ ಧೋರಣೆಯ ಪ್ರಧಾನ ತತ್ವಗಳನ್ನು ಕೆಳಗೆ ಕೊಡಲಾಗಿದೆ.

- ಸಾಮ್ರಾಜ್ಯಶಾಹಿತ್ವ ಹಾಗೂ ವಸಾಹತುಶಾಹಿತ್ವ ವ್ಯವಸ್ಥೆಗೆ ವಿರೋಧ.
- ವಂಶೀಯತೆಗೆ ವಿರೋಧ.
- ವಿಶ್ವಸಂಸ್ಥೆಯಲ್ಲಿ ವಿಶ್ವಾಸ.
- ಶಾಂತಿಯುತ ಸಹಬಾಳ್ವೆ.
- ಪಂಚಶೀಲ ತತ್ವಗಳು.
- ವಿದೇಶ ಸಹಾಯದ ಅವಶ್ಯಕತೆಗೆ ಒತ್ತು.
- ಅಲಿಪ್ತ ಧೋರಣೆ



ಸ್ವತಂತ್ರ ಭಾರತದ ವಿದೇಶ ಧೋರಣೆಯಲ್ಲಿ ರಾಷ್ಟ್ರೀಯ ಚಳವಳಿಯ ಮೌಲ್ಯಗಳು ಎಷ್ಟರ ಮಟ್ಟಿಗೆ ಪ್ರತಿಫಲಿಸಿವೆ. ಪರಿಶೀಲಿಸಿರಿ.

## ಪಂಚಶೀಲ ತತ್ವಗಳು

FE9F99


1954ರಲ್ಲಿ ಚೀನಾದೊಂದಿಗೆ ಗಡಿಸಮಸ್ಯೆ ಉದ್ಭವಿಸಿದಾಗ ಅವರೊಂದಿಗೆ ಸಹಿಹಾಕಿದ ಒಪ್ಪಂದವೇ ಪಂಚಶೀಲ ತತ್ವಗಳಾಗಿವೆ. ಜವಹರಲಾಲ್ ನೆಹರು ಮತ್ತು ಚೀನಾದ ಪ್ರಧಾನಮಂತ್ರಿಯಾದ ಚೌ ಎನ್ ಲಾಯ್ ಈ ಸಂಯುಕ್ತ ಹೇಳಿಕೆಗೆ ಸಹಿಹಾಕಿದರು. ಚೀನಾದೊಂದಿಗೆ ಸಹಿ ಹಾಕಿದ ಒಪ್ಪಂದವು ಪಂಚಶೀಲ ತತ್ವವಾದರೂ ಎಲ್ಲ ದೇಶಗಳೊಂದಿಗಿರುವ ಭಾರತದ ನಿಲುವು ಅದೇ ಆಗಿದೆ. ಅವುಗಳನ್ನು ಕೆಳಗೆ ಕೊಡಲಾಗಿದೆ.

- ದೇಶದ ಗಡಿಯನ್ನೂ ಅಖಂಡತೆಯನ್ನೂ ಪರಮಾವಧಿಕಾರವನ್ನೂ ಪರಸ್ಪರ ಅಂಗೀಕರಿಸಬೇಕು.
- ಪರಸ್ಪರ ಅನಾಕ್ರಮಣ.
- ಆಂತರಿಕ ವಿಚಾರಗಳಲ್ಲಿ ಪರಸ್ಪರ ಮಧ್ಯಪ್ರವೇಶಿಸದಿರುವುದು.
- ಸಮತ್ವ ಮತ್ತು ಪರಸ್ಪರ ಸಹಕಾರ ಬೆಳೆಸುವುದು.
- ಶಾಂತಿಯುತ ಸಹಬಾಳ್ವೆ ಪಾಲಿಸುವುದು.

ಸ್ವಾತಂತ್ರ್ಯದ ನಂತರ ಭಾರತವು ವಿವಿಧ ವಲಯಗಳಲ್ಲಿ ಗಳಿಸಿದ ಸಾಧನೆಗಳನ್ನು ಆಧಾರವಾಗಿಟ್ಟು ಒಂದು ದೃಶ್ಯ ರೂಪಕ (Visuval Presentation)ವನ್ನು ತಯಾರಿಸಿರಿ.

ಎರಡನೆಯ ಜಾಗತಿಕ ಯುದ್ಧಾನಂತರ ರೂಪೀಕರಿಸಲ್ಪಟ್ಟ ಅಲಿಪ್ತ ಧೋರಣೆಯ ಕುರಿತು ಹಿಂದಿನ ಪಾಠ ಭಾಗದಲ್ಲಿ ಚರ್ಚಿಸಿದ ವಿಚಾರವು ನೆನಪಿರಬಹುದಲ್ಲವೇ. ಭಾರತದ ಪ್ರಧಾನಮಂತ್ರಿಯಾಗಿದ್ದ ಜವಹರಲಾಲ್ ನೆಹರೂರವರು ಅದರ ರೂಪೀಕರಣಕ್ಕೆ ನೇತೃತ್ವ ನೀಡಿದವರಲ್ಲೊಬ್ಬರಾಗಿದ್ದಾರೆ. ಅಂತಾರಾಷ್ಟ್ರೀಯ ಸಮಸ್ಯೆಗಳಲ್ಲಿ ಯಾವುದೇ ಒಂದು ಗುಂಪಿನೊಂದಿಗೆ ನಿಲ್ಲದೆ ಸಮಸ್ಯೆಯ ಸರಿ ತಪ್ಪುಗಳನ್ನು ತುಲನೆಮಾಡಿ ಧೋರಣೆ ರೂಪಿಸುವ ಸಮೀಪನವನ್ನು ಭಾರತವು ಸ್ವೀಕರಿಸಿದೆ.

**ಇಂದಿನ ಭಾರತದ ವಿದೇಶ ಧೋರಣೆಯನ್ನು ಪರಿಶೀಲಿಸಿ ಅದರ ಮೂಲತತ್ವಗಳಲ್ಲಿ ಯಾವುದಾದರೂ ಬದಲಾವಣೆಗಳಾಗಿವೆಯೇ ಎಂದು ಚರ್ಚಿಸಿರಿ.**



## ಮೌಲ್ಯನಿರ್ಣಯ ಮಾಡುವ

- ಸ್ವಾತಂತ್ರ್ಯ ಲಭಿಸಿದಾಗ ಭಾರತವು ಎದುರಿಸಬೇಕಾಗಿ ಬಂದ ಪ್ರಧಾನ ಸಮಸ್ಯೆಗಳಾವುವು?
- ದೇಶೀಯ ರಾಜ್ಯಗಳ ಏಕೀಕರಣದ ಕುರಿತು ಲಘು ಟಿಪ್ಪಣಿ ತಯಾರಿಸಿರಿ.
- ಭಾಷೆಯ ಆಧಾರದಲ್ಲಿ ಪ್ರಾಂತ್ಯಗಳ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸಿರಿ.
- ಭಾರತದ ಸಂವಿಧಾನ ರೂಪೀಕರಣದ ಕುರಿತು ಟಿಪ್ಪಣಿ ತಯಾರಿಸಿರಿ.
- ಸ್ವಾತಂತ್ರ್ಯಾನಂತರ ಭಾರತವು ವಿಜ್ಞಾನ-ತಾಂತ್ರಿಕ ರಂಗಗಳಲ್ಲಿ ಗಣನೀಯ ಸಾಧನೆಯನ್ನು ಮಾಡಿದೆ. ಈ ಹೇಳಿಕೆಯ ಔಚಿತ್ಯವನ್ನು ಪರಿಶೀಲಿಸಿರಿ.
- ಸ್ವಾತಂತ್ರ್ಯಾನಂತರ ಕಾಲದಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲುಂಟಾದ ಪ್ರಗತಿಯನ್ನು ವಿಶ್ಲೇಷಿಸಿರಿ.
- 1986ರ ದೇಶೀಯ ಶಿಕ್ಷಣ ಧೋರಣೆಯ ವಿಶೇಷತೆಗಳನ್ನು ವಿವರಿಸಿರಿ.
- ಭಾರತದ ವಿದೇಶ ಧೋರಣೆಯ ಪ್ರಧಾನ ತತ್ವಗಳನ್ನು ಪಟ್ಟಿ ಮಾಡಿರಿ.

## ಮುಂದುವರಿದ ಚಟುವಟಿಕೆಗಳು

- ಜಗತ್ತಿನ ದೇಶಗಳೊಂದಿಗೆ ಭಾರತದ ಸಂಬಂಧವನ್ನು ಆಧಾರವಾಗಿರಿಸಿ ಪ್ರಬಂಧ ತಯಾರಿಸಿರಿ.
- ಭಾರತದ ಪ್ರಾಂತ್ಯಗಳ ಹೆಸರು, ರಾಜಧಾನಿ, ರೂಪುಗೊಂಡ ವರ್ಷ ಎಂಬವುಗಳ ಪಟ್ಟಿ ತಯಾರಿಸಿರಿ.
- ಸ್ವಾತಂತ್ರ್ಯಾನಂತರ ಭಾರತವು ವಿವಿಧ ವಲಯಗಳಲ್ಲಿ ಸಾಧಿಸಿದ ಪ್ರಗತಿಯನ್ನು ಆಧಾರವಾಗಿರಿಸಿ ಒಂದು ಓನ್‌ಲೈನ್ ರಸಪ್ರಶ್ನೆ ತಯಾರಿಸಿ ಮಂಡಿಸಿರಿ.

ಅಧ್ಯಾಯ

08



# ಕೇರಳ ಆಧುನಿಕತೆಯೆಡೆಗೆ

**1498**

ಮೇ 20 ಭಾನುವಾರ

*"ಸಮೀಪದಲ್ಲಿ ಮನೋಹರವಾದ ಪರ್ವತ ಶ್ರೇಣಿಗಳಿದ್ದುವು. ನಮಗೆ ದಾರಿತೋರಿಸುವವನಿಗೆ ಸ್ಥಳವನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಲಿಲ್ಲ. ತೀರಕ್ಕೆ ತುಂಬಾ ಹತ್ತಿರವಾಗುವಾಗ ಅವರು ಹೇಳಿದರು, "ನಾವು ಕಲ್ಲೈಕುಟ್ಟಿಗೆ ಉತ್ತರದಲ್ಲೀದ್ದೇವೆಂದೂ ಅದೇ ನಮ್ಮ ಲಕ್ಷ್ಯವಾಗಿದೆಯೆಂದೂ ಹೇಳಿದರು". ಅಂದು ರಾತ್ರಿ ಕಲ್ಲೈಕುಟ್ಟಿ (Czlicut) ಪಟ್ಟಣದಿಂದ ಎರಡು ಗಾವುದ ದೂರದಲ್ಲಿ ನಾವು ಲಂಗರು ಹಾಕಿದೆವು. ಕಾಪ್ಯ (ಕಾಪ್ಪಾಡ್) ಎಂಬ ಈ ಪಟ್ಟಣವನ್ನು ನಮ್ಮ ದಾರಿತೋರಿಸುವವನು ಕಲ್ಲೈಕುಟ್ಟಿ ಎಂದು ತಪ್ಪಾಗಿ ತಿಳಿದುದರಿಂದ ಹೀಗಾಯಿತು. ಅಲ್ಪದೂರದಲ್ಲಿ ಪಂದರಿನಿ (ಪಂದಲಾಯಿನಿ) ಪಟ್ಟಣವಿದೆ. ನಾಲ್ಕು ದೋಣಿಗಳಲ್ಲಾಗಿ ತೀರದಿಂದ ಹೊರಟ ಹಲವರು ನಮ್ಮನ್ನು ಸಮೀಪಿಸಿದರು. ನಾವು ಯಾವ ಪ್ರದೇಶದವರೆಂದು ತಿಳಿಯುವುದು ಅವರ ಉದ್ದೇಶವಾಗಿತ್ತು. ಕಲ್ಲೈಕುಟ್ಟಿಗಿರುವ ದಾರಿಯನ್ನು ಆವರು ತೋರಿಸಿದರು.*

*ವಾಸ್ಕೋಡಗಾಮನೊಂದಿಗೆ ಕೇರಳಕ್ಕೆ ತಲುಪಿದ ಪೋರ್ಚುಗೀಸ್ ನಾವಿಕ ಅಲ್‌ವಾರೋ ವೆನ್‌ಹೋವಿನ ಡೈರಿಯ ಟಿಪ್ಪಣಿ.*

ಮೇಲೆ ನೀಡಿರುವ ಡೈರಿಯ ಟಿಪ್ಪಣಿಯು ಏನನ್ನು ಸೂಚಿಸುತ್ತದೆ? ಹದಿನೈದನೇ ಶತಮಾನದ ಕೊನೆಯಲ್ಲಿ ವ್ಯಾಪಾರಕ್ಕಾಗಿ ಯುರೋಪಿಯನರು ಕೇರಳಕ್ಕೆ ತಲುಪಿದರು. ಅವರಿಗಿಂತ ಹಿಂದೆ ಕೇರಳದೊಂದಿಗೆ ಅರಬರು ಮತ್ತು ಚೀನಾದವರು ವ್ಯಾಪಾರ ಸಂಬಂಧವನ್ನಿಟ್ಟುಕೊಂಡವರಲ್ಲಿ ಪ್ರಮುಖರಾಗಿದ್ದಾರೆ. ಅವರ ವ್ಯಾಪಾರದ ಏಕಾಧಿಪತ್ಯವನ್ನು ಕೊನೆಗೊಳಿಸುವುದು ಪೋರ್ಚುಗೀಸರ ಉದ್ದೇಶವಾಗಿತ್ತು. ಅರಬ್ ವ್ಯಾಪಾರಿಗಳನ್ನು ಹೊರದಬ್ಬುವಂತೆ ಕಲ್ಲಿಕೋಟೆಯ ಆಡಳಿತಾಧಿಕಾರಿಯಾಗಿದ್ದ ಸಾಮೂದಿರಿಯವರೊಂದಿಗೆ ಪೋರ್ಚುಗೀಸರು ಬೇಡಿಕೆಯಿಟ್ಟರು. ಆದರೆ ಆ ಬೇಡಿಕೆಯು ಸಾಮೂದಿರಿಯಿಂದ ನಿರಾಕರಿಸಲ್ಪಟ್ಟಾಗ ಪೋರ್ಚುಗೀಸರು ಕುಪಿತರಾದರು. ಕಲ್ಲಿಕೋಟೆಯ ಶತ್ರು ರಾಜ್ಯವಾದ ಕೊಚ್ಚಿಯಲ್ಲಿ ನೆಲೆಯೂರಿದ ಅವರು ಕೇರಳದ ಆಧಿಪತ್ಯವನ್ನು ಪಡೆಯಲು ಪ್ರಯತ್ನಿಸಿದರು. ಕುಂಞಾಲಿ ಮರಕ್ಕಾರರ

കുഞ്ഞാലി മരക്കാർ



ವಡಗರದಲ್ಲಿರುವ ಕುಂಞಾಲಿ ಮರಕ್ಕಾರರ ಸ್ಮಾರಕ

ಕುಂಞಾಲಿ ಮರಕ್ಕಾರು ಕಲ್ಲಿಕೋಟೆಯಲ್ಲಿ ಆಡಳಿತವನ್ನು ನಡೆಸುತ್ತಿದ್ದ ಸಾಮೂದಿರಿಯ ನಾವಿಕ ಸೇನೆಯ ಮುಖ್ಯಸ್ಥರಾಗಿದ್ದರು. ಕಲ್ಲಿಕೋಟೆ ಜಿಲ್ಲೆಯ ವಡಗರದ ಸಮೀಪದ ಪುದುಪನದಲ್ಲಿರುವ ಮರಕ್ಕಾರ್ ಕೋಟೆಯು ಇವರ ಕೇಂದ್ರವಾಗಿತ್ತು. ಇವರು ನಾಲ್ಕು ಜನರಿದ್ದರು. ಪೋರ್ಚುಗೀಸರ ವಶದಲ್ಲಿದ್ದ ಚಾಲೀಯ ಕೋಟೆಯನ್ನು ಪುನಃ ವಶಪಡಿಸಲು ಇವರಿಗೆ ಸಹಾಯ ಮಾಡಿದವರು ಕುಂಞಾಲಿ 3ನೆಯ ಮರಕಾರಾಗಿದ್ದರು. ಮರಕ್ಕಾರರ ಚಾಲಿಯ ಕೋಟೆಯ ವಿಜಯವನ್ನು ಹೊಗಳಿ ಖಾಸಿ ಮೊಹಮ್ಮದ್ ಹದಿನಾರನೆಯ ಶತಮಾನದಲ್ಲಿ ಬರೆದ ಅರಬೀ ಕಾವ್ಯವು ಫತ್‌ಹುಲ್ ಮುಬೀನ್ (ಸ್ಪಷ್ಟವಾದ ವಿಜಯ) ಆಗಿದೆ. ಇಸ್ಲಾಂ ಮತಕ್ಕೂ ಹಿಂದೂ ಧರ್ಮಕ್ಕೂ ಬೇಕಾಗಿ ಒಂದೇ ರೀತಿಯಲ್ಲಿ ಹೋರಾಡಿದ ಹಿಂದೂ ರಾಜನೊಬ್ಬನನ್ನು ನೋಡಿ ಕಲಿಯಿರಿ ಸುಲ್ತಾನರೇ ಎಂಬ ಗೆರೆಗಳು ಆ ಕಾಲದ ಸಾಮಾಜಿಕ ಸಾಮರಸ್ಯವನ್ನು ಸೂಚಿಸುತ್ತವೆ.

ನೇತೃತ್ವದ ಸಾಮೂದಿರಿಯ ನಾವಿಕ ಸೇನೆಯು ಅರಬೀ ಸಮುದ್ರದಲ್ಲಿ ಪೋರ್ಚುಗೀಸರನ್ನು ಶಕ್ತಿಯುತವಾಗಿ ಪ್ರತಿಭಟಿಸಿದರೂ ಜಯಗಳಿಸಲು ಸಾಧ್ಯವಾಗಲಿಲ್ಲ.

ಪೋರ್ಚುಗೀಸರಂತೆಯೇ ಡಚ್ಚರು, ಇಂಗ್ಲೀಷರು, ಫ್ರೆಂಚರು ವ್ಯಾಪಾರದ ಏಕಾಧಿಪತ್ಯವನ್ನು ಗಳಿಸಲು ಪರಸ್ಪರ ಸ್ಪರ್ಧಿಸಿದರು. ಕರಿಮೆಣಸಿಗೆ ಬೇಕಾಗಿ ಈ ಸ್ಪರ್ಧೆಯು ನಡೆಯಿತು. 1663ರಲ್ಲಿ ಡಚ್ಚರು ಪೋರ್ಚುಗೀಸರನ್ನು ಕೇರಳದಿಂದ ಹೊರದಬ್ಬಿದರು. ಆದರೆ ತಿರುವಾಂಕೂರಿನ ಆಡಳಿತಾಧಿಕಾರಿಯಾದ ಮಾರ್ತಾಂಡವರ್ಮನು ಬ್ರಿಟಿಷರ ಸಹಾಯದೊಂದಿಗೆ 1741ರ ಕೊಳಚ್ಚಲ್ ಯುದ್ಧದಲ್ಲಿ ಡಚ್ಚರನ್ನು ಪರಾಜಯಗೊಳಿಸಿದನು. ಅದರೊಂದಿಗೆ ಡಚ್ಚರಿಗೆ ಕೇರಳವನ್ನು ಬಿಟ್ಟುಹೋಗಬೇಕಾಗಿ ಬಂತು. ಇಂಗ್ಲೀಷರು ಮತ್ತು ಫ್ರೆಂಚರ ನಡುವೆ ನಡೆದ ಕರ್ನಾಟಿಕ್ ಯುದ್ಧದಲ್ಲಿ ಬ್ರಿಟಿಷರ ಗೆಲುವಿನೊಂದಿಗೆ ದಕ್ಷಿಣ ಭಾರತದ ವ್ಯಾಪಾರದ ಏಕಾಧಿಪತ್ಯವು ಬ್ರಿಟಿಷರ ಕೈಗೆ ಬಂತು.



ಮಾರ್ತಾಂಡವರ್ಮ

**ಕೇರಳಕ್ಕೆ ಯುರೋಪಿಯನರ ಆಗಮನ ಮತ್ತು ಅವರ ಉದ್ದೇಶಗಳ ಕುರಿತು ಚರ್ಚಿಸಿರಿ.**

### ಕೊಳಚ್ಚಲ್ ಯುದ್ಧ

'ಡಚ್ಚರಿಗೆ ಸಂಬಂಧಿಸಿದಂತೆ ಕೊಳಚ್ಚಲ್ ಯುದ್ಧವು ಅತ್ಯಂತ ವಿನಾಶಕಾರಿಯಾಗಿತ್ತು. ಪ್ಲಾಸಿ ಯುದ್ಧದಂತೆಯೇ ಇದೊಂದು ದೊಡ್ಡ ಯುದ್ಧವಾಗಿರಲಿಲ್ಲ. ಆದರೆ ಕೇರಳವನ್ನು (ಮಲಬಾರು)ವಶಪಡಿಸಬೇಕೆಂಬ ಡಚ್ಚರ ಆಸೆಯು ಇದರೊಂದಿಗೆ ಮಣ್ಣುಪಾಲಾಯಿತು. ಡಚ್ಚರ ಆಯುಧ ಬಲಕ್ಕೆದುರಾಗಿ ಮಾಡಿದ ಮೊದಲ ಶಕ್ತಿಯುತ ಪ್ರಹಾರವು ಇದಾಗಿತ್ತು. ಇದರ ಆಘಾತದಿಂದ ಹೊರಬರಲು ಇವರಿಗೆ ಮತ್ತೆ ಸಾಧ್ಯವಾಗಲಿಲ್ಲ. ಇದುವೇ ಈ ಯುದ್ಧದಿಂದ ಉಂಟಾದ ಮಹತ್ತರ ಸಾಧನೆ.

**ಸರದಾರ್ ಕೆ.ಎಂ. ಪಣಿಕ್ಕರ್**

**ಹಿಸ್ಟರಿ ಆಫ್ ಕೇರಳ**


## ಕೇರಳಕ್ಕೆ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಗಮನ

1615ರಲ್ಲಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯ ಪ್ರತಿನಿಧಿಯಾಗಿ ಸಾಮೂದಿರಿಯನ್ನು ಸಂದರ್ಶಿಸಿ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿದನು. ಅನಂತರ ಕಂಪೆನಿಯು ವಿಳಿಂಜಂ, ತಲಶ್ಶೇರಿ ಮತ್ತು ಅಂಜುತೆಂಜ್‌ನಲ್ಲಿ ಗೋದಾಮುಗಳನ್ನು ಸ್ಥಾಪಿಸಲು ಅನುಮತಿಯನ್ನು

ಪಡೆಯಿತು. ಅನಂತರದಲ್ಲಿ ಅಂಜುತೆಂಙ್‌ನಲ್ಲಿ ಕೋಟೆಯೊಂದನ್ನು ಕಟ್ಟಲು ಅಟ್ಟಿಂಗಲ್ ರಾಣಿಯಿಂದ ಅನುಮತಿಯನ್ನು ಪಡೆದುಕೊಳ್ಳಲಾಯಿತು. ಮುಂದಿನ ದಿನಗಳಲ್ಲಿ ಅದು ಪಶ್ಚಿಮ ತೀರದಲ್ಲಿ ಬ್ರಿಟಿಷರ ಪ್ರಧಾನ ಸೈನಿಕ ಕೇಂದ್ರವಾಯಿತು. ಅಂಜುತೆಂಙ್‌ನ್ನು ಬ್ರಿಟಿಷರ ಸೈನಿಕ ಕೇಂದ್ರವನ್ನಾಗಿ ಮಾಡಿದ್ದನ್ನು ಊರಿನವರು ಪ್ರಬಲವಾಗಿ ವಿರೋಧಿಸಿದರು. 1721ರಲ್ಲಿ ಅಟ್ಟಿಂಗಲ್ ರಾಣಿಗೆ ಉಡುಗೊರೆಯೊಂದಿಗೆ ಹೋಗುತ್ತಿದ್ದ ನೂರೈವತ್ತರಷ್ಟಿದ್ದ ಬ್ರಿಟಿಷರನ್ನು ಊರಿನವರು ವಧಿಸಿದರು. ಇದನ್ನು ಅಟ್ಟಿಂಗಲ್ ದಂಗೆ ಎಂದು ಕರೆಯುತ್ತಾರೆ. ಈ ದಂಗೆಯು ಬ್ರಿಟಿಷರ ವಿರುದ್ಧವಾಗಿ ಕೇರಳದಲ್ಲಿ ನಡೆದ ಮೊದಲ ಸಂಘಟಿತ ಹೋರಾಟವಾಗಿತ್ತು.

1792ರಲ್ಲಿ ಮೈಸೂರಿನ ಆಡಳಿತಾಧಿಕಾರಿ ಮತ್ತು ಬ್ರಿಟಿಷ್‌ರ ನಡುವೆ ನಡೆದ ಶ್ರೀರಂಗಪಟ್ಟಣ ಒಪ್ಪಂದದಂತೆ ಕೇರಳದ ಮಲಬಾರು ಪ್ರದೇಶವು ಬ್ರಿಟಿಷರ ವಶವಾಯಿತು. 1792ರಲ್ಲಿ ಕೊಚ್ಚಿಯ ರಾಜರು ಬ್ರಿಟಿಷರ ಒಡೆತನವನ್ನು ಅಂಗೀಕರಿಸಿ ಕಪ್ಪವನ್ನು ಕೊಡಲು ನಿರ್ಬಂಧಿತರಾದರು. 1795ರ ಒಪ್ಪಂದದಂತೆ ತಿರುವಾಂಕೂರು ಬ್ರಿಟಿಷರ ಆಧಿಪತ್ಯವನ್ನು ಅಂಗೀಕರಿಸಿತು. ಪ್ರತಿಫಲವಾಗಿ ಶತ್ರುಗಳಿಂದ ಅವರನ್ನು ಸಂರಕ್ಷಿಸುವುದಾಗಿ ಬ್ರಿಟಿಷರು ವಾಗ್ದಾನ ನೀಡಿದರು. ಈ ರೀತಿಯಲ್ಲಿ ಮಲಬಾರಿನಲ್ಲಿ ನೇರವಾಗಿಯೂ ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ಸಾಮಂತ ರಾಜರ ಮೂಲಕವೂ ಬ್ರಿಟಿಷರು ಆಡಳಿತ ನಡೆಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ 18ನೆಯ ಶತಮಾನದೊಂದಿಗೆ ಕೇರಳವು ಪೂರ್ಣವಾಗಿ ಬ್ರಿಟಿಷರ ಆಧಿಪತ್ಯಕ್ಕೊಳಗಾಯಿತು.

**ಮಲಬಾರು, ಕೊಚ್ಚಿ, ತಿರುವಾಂಕೂರು ಬ್ರಿಟಿಷರ ನಿಯಂತ್ರಣಕ್ಕೆ ಬಂದದ್ದು ಹೇಗೆ? ಟಿಪ್ಪಣಿ ತಯಾರಿಸಿರಿ.**



## ಬ್ರಿಟಿಷರಿಗೆದುರಾಗಿ ನಡೆದ ಆರಂಭಕಾಲದ ಪ್ರತಿಭಟನೆಗಳು

**ವೇಲುತಂಬಿ ದಳವನ ಕುಂಡರ ಘೋಷಣೆಯಿಂದ...**

*"ಅನ್ಯರ ಪ್ರದೇಶಗಳನ್ನು ವಂಚನೆಯಿಂದ ವಶಪಡಿಸಿಕೊಳ್ಳುವುದು ಅವರ ವಂಶ ಪರಂಪರೆಯಾಗಿದೆ. ಈ ರೀತಿಯಲ್ಲಿ ಪ್ರದೇಶವೊಂದು ಅವರ ಹಿಡಿತಕ್ಕೆ ಬಂದರೆ ಅವರ ಸೈನ್ಯವು ಅಲ್ಲಿನ ರಾಜಧಾನಿ ಮತ್ತು ಕೋಟೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆ. ರಾಜರ ಮತ್ತು ಅಲ್ಲಿನ ಪ್ರಜೆಗಳ ಪರಂಪರಾಗತವಾದ ಗೌರವ, ಪದವಿಗಳು, ಆಚಾರ ಅನುಷ್ಠಾನಗಳು ಎಲ್ಲವೂ ಇದರೊಂದಿಗೆ ಕೊನೆಗೊಳ್ಳುತ್ತದೆ. ಉಪ್ಪನ್ನು ಒಳಗೊಂಡಂತೆ ಎಲ್ಲ ವ್ಯಾಪಾರವೂ ಅವರ ಮಾರುಕಟ್ಟೆಯ ವ್ಯಾಪ್ತಿಯಲ್ಲಿ ಬರುತ್ತದೆ. ಆಸ್ತಿ, ಮನೆ, ಬಯಲುಗಳು, ಫಲವೃಕ್ಷ ತೋಟಗಳನ್ನು ಅವರು ಸ್ವಾಧೀನಪಡಿಸಿಕೊಳ್ಳುತ್ತಾರೆ. ಚಿಕ್ಕ ತಪ್ಪುಗಳಿಗೂ ಅವರ ಕಿಂಕರರು ಕಠಿಣ ಶಿಕ್ಷೆಯನ್ನು ನೀಡುತ್ತಿದ್ದರು.*

**ಆಧಾರ-ಕೃಷ್ಣ ಚೈತನ್ಯ, ಕೇರಳ, ಪುಟ 51**

ರಾಜಕೀಯ ಆಡಳಿತವನ್ನು ವಶಪಡಿಸಿಕೊಂಡ ಬ್ರಿಟಿಷರು ದೇಶೀಯ ರಾಜರ ಮತ್ತು ನಾಡುವಾಳಿಗಳ ಅಧಿಕಾರದಲ್ಲಿ ಹಸ್ತಕ್ಷೇಪ ನಡೆಸಲು ಆರಂಭಿಸಿದರು. ಶತಮಾನಗಳಿಂದ ಅನುಭವಿಸುತ್ತಿದ್ದ ಸ್ವಾತಂತ್ರ್ಯ ಮತ್ತು ಹಕ್ಕುಗಳ ಮೇಲಿನ ಬ್ರಿಟಿಷರ ಹಸ್ತಕ್ಷೇಪವು ಅವರಿಗೆ ಇಷ್ಟವಾಗಲಿಲ್ಲ.

NT-911-4-SOC.SCI.-I-10-K-VOL.2

**ಕೇರಳ ಸಿಂಹಂ**

ಕೇರಳ ಸಿಂಹ ಎಂಬ ಹೆಸರಿನಲ್ಲಿ ಕರೆಯಲ್ಪಡುವ ಪಳಶ್ಶೀರಾಜನನ್ನು ಬ್ರಿಟಿಷ್ ದಾಖಲೆಗಳು 'ಪೈಚಿ ರಾಜ', 'ಕೊಟ್ಟ್ಯೂಟ್ ರಾಜ' ಎಂದು ಕರೆಯುತ್ತಿದ್ದವು. ಪಳಶ್ಶೀರಾಜನ ಜೀವನ ಕಥೆಯ ಆಧಾರದಲ್ಲಿ ಸರ್‌ದಾರ್ ಕೆ.ಎಂ. ಪಣಿಕ್ಕರ್ 'ಕೇರಳ ಸಿಂಹಂ' ಎಂಬ ಐತಿಹಾಸಿಕ ಕಾದಂಬರಿಯೊಂದನ್ನು ಬರೆದಿದ್ದಾರೆ. ಬ್ರಿಟಿಷರಿಗೆ ಶರಣಾಗದೆ ತನ್ನಲ್ಲಿರುವ ವಜ್ರದುಂಗುರವನ್ನು ನುಂಗಿ ಪಳಶ್ಶೀರಾಜ ಆತ್ಮಹತ್ಯೆ ಮಾಡಿದನೆಂದು ಈ ಕಾದಂಬರಿಯಲ್ಲಿ ನಿರೂಪಿಸಲಾಗಿದೆ.


ಮಾನಂದವಾಡಿಯಲ್ಲಿರುವ ಪಳಶ್ಶೀ ಸ್ಮಾರಕ

ಇದಕ್ಕೆದುರಾಗಿ ಮಲಬಾರು, ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ಬ್ರಿಟಿಷರಿಗೆದುರಾದ ಪ್ರತಿಭಟನೆಗಳು ಬೆಳೆದು ಬಂದುವು.

## ಪಳಶ್ಶೀ ದಂಗೆ

ಮಲಬಾರಿನ ಕೋಟ್ಟಯಂ ರಾಜಕುಟುಂಬದ ಕೇರಳವರ್ಮ ಪಳಶ್ಶೀರಾಜನು ಬ್ರಿಟಿಷರ ಆಧಿಪತ್ಯಕ್ಕೆ ಎದುರಾಗಿ ಮಲಬಾರಿನಲ್ಲಿ ನಡೆದ ಪ್ರಬಲವಾದ ಪ್ರತಿಭಟನೆಗೆ ನೇತೃತ್ವವನ್ನು ನೀಡಿದನು. ಮೈಸೂರು ಅರಸರಿಗೆದುರಾಗಿ ಬ್ರಿಟಿಷರು ಮಾಡಿದ ಯುದ್ಧದಲ್ಲಿ ಪಳಶ್ಶೀರಾಜನು ಬ್ರಿಟಿಷರಿಗೆ ಸಹಾಯ ಮಾಡಿದನು. ಇದಕ್ಕೆ ಪ್ರತಿಫಲವಾಗಿ ಕೋಟ್ಟಯಂನಲ್ಲಿ ತೆರಿಗೆಯನ್ನು ವಸೂಲಿ ಮಾಡುವ ಅಧಿಕಾರವನ್ನು ಪಳಶ್ಶೀರಾಜನಿಗೆ ಕೊಡುವುದಾಗಿ ಬ್ರಿಟಿಷರು ವಾಗ್ದಾನವನ್ನು ನೀಡಿದ್ದರು.ಆದರೆ ಮೈಸೂರು ವಿಜಯದ ನಂತರ ವಾಗ್ದಾನದಂತೆ ನಡೆಯಲು ಬ್ರಿಟಿಷರು ತಯಾರಾಗಲಿಲ್ಲ. ಅಲ್ಲದೆ ವಯನಾಡಿನ ಮೇಲೆ ಬ್ರಿಟಿಷರು ಹಕ್ಕಿನ ಪ್ರತಿಪಾದನೆಯನ್ನು ಮಂಡಿಸಿದರು. ಈ ದ್ವಂದ್ವ ನೀತಿಗೆದುರಾಗಿ ಪಳಶ್ಶೀರಾಜನು ಜನರನ್ನು ಸಂಘಟಿಸಿ ಬ್ರಿಟಿಷರಿಗೆ ಎದುರಾಗಿ ಹೋರಾಡಿದನು. ಚೆಂಬನ್‌ಪೋಕರ್, ಕೈತೇರಿ ಅಂಬುನಾಯರ್, ಎಡಚ್ಚೇನ ಕುಂಗನ್ ನಾಯರ್, ವಯನಾಡಿನ ಕುರುಚಿಯರ ನೇತಾರನಾಗಿದ್ದ ತಲಕ್ಕಲ್ ಚಂದು ಎಂಬವರ ಸಹಾಯದೊಂದಿಗೆ ಪಳಶ್ಶೀರಾಜನು ಬ್ರಿಟಿಷರ ವಿರುದ್ಧ ಗೆರಿಲ್ಲಾ ಹೋರಾಟವನ್ನು ಸಂಘಟಿಸಿದನು. ಹೋರಾಟದ ಮಧ್ಯೆ 1805 ನವೆಂಬರ್ 30ರಂದು ಪಳಶ್ಶೀರಾಜನು ಮರಣವನ್ನಪ್ಪಿದನು.


ಮಣ್ಣಾಡಿಯಲ್ಲಿ ವೇಲುತಂಬಿ ದಳವನ ಪ್ರತಿಮೆ ಮತ್ತು ಸ್ಮಾರಕ

## ವೇಲುತಂಬಿ ಮತ್ತು ಪಾಲಿಯತಚ್ಚನ್

ತಿರುವಾಂಕೂರು ಮತ್ತು ಕೊಚ್ಚಿಯ ಆಂತರಿಕ ವಿಷಯದಲ್ಲಿ ಬ್ರಿಟಿಷರು ಹಸ್ತಕ್ಷೇಪ ನಡೆಸಿದಾಗ ದಿವಾನರಾದ ವೇಲುತಂಬಿ ಹಾಗೂ ಪಾಲಿಯತ್ತಚ್ಚನ್ ಅದನ್ನು ವಿರೋಧಿಸಿದರು. 1809 ಜನವರಿ 11ರಂದು ಹೊರಡಿಸಿದ ಕುಂಡರ ಘೋಷಣೆಯ ಮೂಲಕ ವೇಲುತಂಬಿಯು ಆಯುಧ ಸಹಿತರಾಗಿ ಬ್ರಿಟಿಷರ ವಿರುದ್ಧ ಹೋರಾಡುವಂತೆ ಜನರಿಗೆ ಕರೆನೀಡಿದರು. ತಿರುವಾಂಕೂರು ಮತ್ತು ಕೊಚ್ಚಿಯ ಸಂಯುಕ್ತ ಸೈನ್ಯವು ಬ್ರಿಟಿಷ್ ರೆಸಿಡೆಂಟ್ ಆದ ಮೆಕೋಲೆಯ ಅಧಿಕೃತ ವಸತಿಯನ್ನು ಆಕ್ರಮಿಸಿದವು. ಆದರೆ ಬ್ರಿಟಿಷ್ ಸೈನ್ಯವನ್ನು ಎದುರಿಸಲು ಇವರಿಗೆ ಸಾಧ್ಯವಾಗಲಿಲ್ಲ. ಸೆರೆಹಿಡಿಯಲ್ಪಡುವ ಬದಲಿಗೆ ವೇಲುತಂಬಿ ಮಣ್ಣಾಡಿಯಲ್ಲಿರುವ ಕ್ಷೇತ್ರವೊಂದರಲ್ಲಿ ಆತ್ಮಹತ್ಯೆಗೈದನು. ರೋಷ

ತಗ್ಗದ ಬ್ರಿಟಿಷರು ವೇಲುತಂಬಿ ದಳವನ ಮೃತ ಶರೀರವನ್ನು ತಿರುವನಂತಪುರದ ಕಣ್ಣಮೂಲೆ ಎಂಬಲ್ಲಿ ಕಟ್ಟಿ ನೇತಾಡಿಸಿದರು. ಪಾಲಿಯತ್ತಚ್ಚನನ್ನು ಮದ್ರಾಸಿಗೆ ಗಡೀಪಾರು ಮಾಡಿದರು. ಪಳಶ್ಶೀರಾಜ, ವೇಲುತಂಬಿ ದಳವ ಮತ್ತು ಪಾಲಿಯತ್ತಚ್ಚನ್‌ರ ಪರಾಜಯದೊಂದಿಗೆ ಬ್ರಿಟಿಷರಿಗೆದುರಾದ ನಾಡುವಾಳಿಗಳ ಪ್ರತಿಭಟನೆಯು ಕೊನೆಗೊಂಡಿತು. ಆದರೆ ಜನರ ಪ್ರತಿಭಟನೆಗಳು ಮುಂದುವರಿದುವು.


ಪಾಲಿಯತ್ತಚ್ಚನ್

- **ಬ್ರಿಟಿಷರ ವಿರುದ್ಧದ ಆರಂಭಕಾಲದ ಪ್ರತಿಭಟನೆಗಳು, ಇವುಗಳು ನಡೆದ ಪ್ರದೇಶಗಳು, ಕಾರಣಗಳು ಇವುಗಳನ್ನೊಳಗೊಂಡ ಪಟ್ಟಿಯೊಂದನ್ನು ತಯಾರಿಸಿರಿ.**

## ಕೇರಳವು ಜಾಗತಿಕ ವ್ಯಾಪಾರದ ಭಾಗವಾಗುತ್ತಿದೆ

ಆಡಳಿತವನ್ನು ವಶಪಡಿಸಿದ ನಂತರ ಬ್ರಿಟಿಷರು ಇಲ್ಲಿನ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುವ ಮತ್ತು ತಮ್ಮ ದೇಶದಲ್ಲಿ ಉತ್ಪಾದನೆಗೊಂಡ ಕೈಗಾರಿಕಾ ಉತ್ಪನ್ನಗಳನ್ನು ಇಲ್ಲಿಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರುವ ಕೆಲಸವನ್ನು ಮಾಡಿದರು. ಅಲ್ಲಿಯವರೆಗೆ ಸ್ವಯಂ ಪರ್ಯಾಪ್ತತೆಯನ್ನು ಪಡೆದಿದ್ದ ನಮ್ಮ ಗ್ರಾಮೀಣ ಆರ್ಥಿಕ ವ್ಯವಸ್ಥೆಯು ನೆಲಕಚ್ಚಿತು. ಈ ಮೂಲಕ ಬ್ರಿಟಿಷ್ ವ್ಯಾಪಾರವು ಬೃಹತ್ ಪ್ರಮಾಣದಲ್ಲಿ ವರ್ಧಿಸಿತು. ಹೀಗೆ ಕೇರಳವು ಜಾಗತಿಕ ವ್ಯಾಪಾರದ ಭಾಗವಾಯಿತು.

| ರಫ್ತು | ಆಮದು |
|---|---|
| • ತೆಂಗಿನಕಾಯಿ | • ಬಟ್ಟೆಬರೆ |
| • ಬೆಲ್ಲ | • ಸೀಮೆಎಣ್ಣೆ |
| • ಗೇರುಬೀಜ | • ಹೊಗೆಸೊಪ್ಪು |
| • ಕರಿಮೆಣಸು | • ಸಕ್ಕರೆ |
| • ಅಡಿಕೆ | • ಲೋಹದ ಉತ್ಪನ್ನಗಳು |
| • ಕಬ್ಬಿಣದ ಅದಿರು | |

**ಮೇಲಿನ ಪಟ್ಟಿಯನ್ನು ಗಮನಿಸಿ ಕೇರಳದ ವಿದೇಶಿ ವ್ಯಾಪಾರದ ಕುರಿತು ಯಾವೆಲ್ಲ ನಿಗಮನಕ್ಕೆ ಬರಬಹುದು?**

- 
- 
- 
- 

ವ್ಯಾಪಾರವನ್ನು ಸುಗಮಗೊಳಿಸಲು ಮಲಬಾರು, ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ನೆಲೆನಿಂತಿದ್ದ ವ್ಯಾಪಾರ ನಿಯಮಗಳನ್ನು ಬ್ರಿಟಿಷರು ತಮಗೆ ಅನುಕೂಲಕರವಾದ ರೀತಿಯಲ್ಲಿ ತಿದ್ದುಪಡಿಮಾಡಿದರು. ಏಕೀಕರಿಸಿದ ಹಣಕಾಸು ವ್ಯವಸ್ಥೆ ಮತ್ತು ಅಳತೆ ತೂಕ ಕ್ರಮಗಳು ಜಾರಿಗೊಂಡವು.

**ರೈಲು ಹಳಿ**

ಕೇರಳದಲ್ಲಿ ಮೊತ್ತಮೊದಲಿಗೆ ರೈಲು ಹಳಿಯನ್ನು ನಿರ್ಮಿಸಿದವರು ಬ್ರಿಟಿಷರಾಗಿದ್ದರು. ಬೇಪೂರಿನಿಂದ ತಿರೂರಿನವರೆಗಿನ ರೈಲು ಮಾರ್ಗವನ್ನು 1861ರಲ್ಲಿ ಸ್ಥಾಪಿಸಲಾಯಿತು. ಕಚ್ಚಾವಸ್ತುಗಳನ್ನು ಕೊಂಡುಹೋಗಲೂ ಕೈಗಾರಿಕಾ ಉತ್ಪನ್ನಗಳನ್ನು ದೂರದ ಗ್ರಾಮೀಣ ಪ್ರದೇಶಗಳಿಗೆ ತಲುಪಿಸಲೂ ಬ್ರಿಟಿಷರು ರೈಲನ್ನು ಬಳಸಿಕೊಂಡರು.

ವ್ಯಾಪಾರದ ಸಲುವಾಗಿ ಸಾರಿಗೆ ಸೌಕರ್ಯಗಳನ್ನು ಉತ್ತಮಪಡಿಸುವ ಉದ್ದೇಶದಿಂದ ರಸ್ತೆ, ಸೇತುವೆ, ರೈಲು ಮಾರ್ಗಗಳನ್ನು ನಿರ್ಮಿಸಿದರು. ಸರಕು ಸಾಗಾಟವನ್ನು ಸುಗಮಗೊಳಿಸಲು ಕೊಚ್ಚಿ, ಕಲ್ಲಿಕೋಟೆ, ಆಲಪ್ಪುಳ ಬಂದರುಗಳನ್ನು ಅಭಿವೃದ್ಧಿಗೊಳಿಸಿದರು.



ವ್ಯಾಪಾರವನ್ನು ಉತ್ತಮಪಡಿಸಲು ಬ್ರಿಟಿಷರು ಆರಂಭಿಸಿದ ಕ್ರಮಗಳ ಪರಿಣಾಮಗಳನ್ನು ವಿಶದೀಕರಿಸಿರಿ.

## ಭೂಸಂಬಂಧಗಳಲ್ಲಿ ಉಂಟಾದ ಬದಲಾವಣೆ

ಕೇರಳದಲ್ಲಿ ಭೂಮಿಯ ಮೇಲೆ ವಿವಿಧ ಜನವಿಭಾಗಗಳ ಹಕ್ಕುಗಳನ್ನು ಬ್ರಿಟಿಷ್ ಆಡಳಿತವು ಬದಲಾಯಿಸಿತು. ಪ್ರಾದೇಶಿಕ ನಾಡುವಾಳಿಗಳನ್ನೂ ಜಮೀನ್ದಾರರನ್ನೂ ಭೂಮಾಲಿಕರೆಂದು ಪರಿಗಣಿಸಿ ಅವರು ಬ್ರಿಟಿಷರಿಗೆ ನೀಡಬೇಕಾದ ತೆರಿಗೆಯನ್ನು ಮುಂಗಡವಾಗಿ ನಿಶ್ಚಯಿಸಲಾಯಿತು. ನಾಡುವಾಳಿಗಳು ಮತ್ತು ಜಮೀನ್ದಾರರು ಒಕ್ಕಲುಗಳ ಮೇಲೆ ಈ ತೆರಿಗೆಯನ್ನು ಕಡ್ಡಾಯವಾಗಿ ಹೇರಿದ್ದು ಮಾತ್ರವಲ್ಲದೆ ಕೃಷಿಕರನ್ನು ಕೃಷಿ ಭೂಮಿಯಿಂದ ಹೊರದಬ್ಬಿದರು. ಇದರೊಂದಿಗೆ ಮಲಬಾರಿನ ಕೃಷಿಕರ ಜೀವನವು ಮೊದಲಿಗಿಂತಲೂ ಶೋಚನೀಯವಾಯಿತು. ಇದರ ವಿರುದ್ಧವಾಗಿ ನಡೆದ ದಂಗೆಗಳ ಕುರಿತು ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಿರುವುದನ್ನು ನೆನಪಿಸುವಿರಲ್ಲವೇ.

ಮಾಪಿಳ್ಳೆ ದಂಗೆಯ ಕುರಿತಾದ ಅನ್ವೇಷಣೆಗೆ ನಿಯೋಜಿಸಿದ ಲೋಗನ್ ಕಮಿಷನ್‌ನ ಶಿಫಾರಸುಗಳ ಆಧಾರದಲ್ಲಿ 1929ರ ಮಲಬಾರು ಒಕ್ಕಲು ನಿಯಮದ ಜಾರಿಗೊಳಿಸುವಿಕೆಯು ಕೃಷಿಕರಿಗೆ ತಮ್ಮ ಭೂಮಿಯ ಮೇಲೆ ನಾಮ ಮಾತ್ರವಾದ ಒಡೆತನದ ಹಕ್ಕನ್ನು ನೀಡಿತು.

ತಿರುವಾಂಕೂರಿನಲ್ಲಿ ಮಾರ್ತಾಂಡವರ್ಮನ ಕಾಲದಿಂದಲೇ ಭೂಮಿಯ ವಿಷಯದಲ್ಲಿ ಬದಲಾವಣೆಯನ್ನು ತರಲಾಗಿತ್ತು. ಮಾಡಂಬಿಗಳ ಭೂಮಿಯನ್ನು ಭಂಡಾರ ಭೂಮಿಯಾಗಿ (ಸರಕಾರದ) ಬದಲಾಯಿಸಲಾಯಿತು. ಭಂಡಾರ ಭೂಮಿಯಲ್ಲಿರುವ ಒಕ್ಕಲುಗಳಿಗೆ ಅವರು ಕೃಷಿಮಾಡುವ ಭೂಮಿಯನ್ನು ಅವರಿಗೇ ನೀಡುವ ಪ್ರಧಾನವಾದ ಘೋಷಣೆಯನ್ನು 1865ರಲ್ಲಿ ಸರಕಾರವು ಹೊರಡಿಸಿತು. ಇದನ್ನು ಪಂಡಾರಪಾಟ್ಟ ಘೋಷಣೆ ಎಂದು ಕರೆಯುತ್ತಾರೆ. 1896ರಲ್ಲಿ ಅಂಗೀಕರಿಸಿದ ಜಮೀನ್ದಾರ ಒಕ್ಕಲು ನಿಯಮದಂತೆ ತಿರುವಾಂಕೂರಿನಲ್ಲಿ ಒಕ್ಕಲಿನ ಭೂಮಿಯ ಮೇಲಿನ ಹಕ್ಕನ್ನು ಅವರಿಗೇ ನೀಡಲಾಯಿತು. ಈ ರೀತಿಯಲ್ಲಿ ತಿರುವಾಂಕೂರಿನಲ್ಲಿ ಬಹುಪಾಲು ಒಕ್ಕಲುಗಳು ಭೂಮಿಯ ನಾಮ ಮಾತ್ರ ಮಾಲಿಕರಾಗಿ ಬದಲಾದರು. ಇದಕ್ಕೆ ಪ್ರತಿಫಲವಾಗಿ ಅವರು ಬೃಹತ್ ಪ್ರಮಾಣದಲ್ಲಿ ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸಬೇಕಾಗಿತ್ತು. ಒಟ್ಟಿನಲ್ಲಿ ತಿರುವಾಂಕೂರಿನ ಕೃಷಿಕರು ಅಧಿಕ ತೆರಿಗೆ ಭಾರದಿಂದ ಸಂಕಷ್ಟಕ್ಕೊಳಗಾದರು. 1914ರಲ್ಲಿ ಕೊಚ್ಚಿಯಲ್ಲಿಯೂ ಒಕ್ಕಲು ನಿಯಮವು ಜಾರಿಗೆ ಬಂತು.

| | | |
|---|---|---|
| • ತಿರುವಿದಾಂಕೂರು | 1865 | • ಪಂಡಾರಪಾಟ್ಟ ಘೋಷಣೆ |
| • ಕೊಚ್ಚಿ | 1914 | • ಒಕ್ಕಲು ನಿಯಮ |
| • ಮಲಬಾರ್ | 1929 | • ಮಲಬಾರ್ ಒಕ್ಕಲು ನಿಯಮ |

## ಕೃಷಿಕ್ಷೇತ್ರದ ವಾಣಿಜ್ಯೀಕರಣ

ಬ್ರಿಟಿಷರು ವಾಣಿಜ್ಯ ಕೇಂದ್ರೀಕೃತ ಕೃಷಿಯನ್ನು ಪ್ರೋತ್ಸಾಹಿಸಿದರು. ತೆಂಗಿನ ಉತ್ಪನ್ನಗಳಿಗೆ ವಿದೇಶಿ ಮಾರುಕಟ್ಟೆಗಳಲ್ಲಿ ಅಪಾರವಾದ ಬೇಡಿಕೆಯಿತ್ತು. ಆದ್ದರಿಂದ ಅವರು ಭತ್ತದ ಕೃಷಿಗೆ ಬದಲಾಗಿ ತೆಂಗನ್ನು ಬೃಹತ್ ಪ್ರಮಾಣದಲ್ಲಿ ಕೃಷಿ ಮಾಡಲು ಆರಂಭಿಸಿದರು. ಇದರಿಂದ ಭತ್ತದ ಉತ್ಪಾದನೆಯು ಕುಸಿಯುವುದರೊಂದಿಗೆ ಅನೇಕ ಪ್ರದೇಶಗಳಲ್ಲಿ ಆಹಾರ ಕ್ಷಾಮವು ತಲೆದೋರಿತು. ಅದನ್ನು ಪರಿಹರಿಸಲು ಕೇರಳದಾದ್ಯಂತ ಮರಗೆಣಸಿನ ಕೃಷಿಯನ್ನು ಆರಂಭಿಸಲಾಯಿತು.



ನಿಲಂಬೂರಿನ ಸಾಗುವಾನಿ ತೋಟ

ಬ್ರಿಟಿಷ್ ಅಧಿಕಾರಿಯಾದ ಕೋನೋಲಿ ಪ್ರಭುವಿನ ನೇತೃತ್ವದಲ್ಲಿ ನಿಲಂಬೂರಿನಲ್ಲಿ ಸಾಗುವಾನಿ ತೋಟವನ್ನು ಈ ಕಾಲದಲ್ಲಿ ಆರಂಭಿಸಲಾಯಿತು. ಈ ತೋಟದ ಹೆಚ್ಚಿನ ಭಾಗವೂ ಬ್ರಿಟಿಷರ ಆಧೀನದಲ್ಲಿತ್ತು. ಬೃಹತ್ ಪ್ರಮಾಣದಲ್ಲಿ ವನಭೂಮಿಯನ್ನು ಬ್ರಿಟಿಷರಿಗೆ ನೀಡಿ ತೋಟದೊಳಗೆ ಸಾರಿಗೆ ಸಂಪರ್ಕವನ್ನು ಕಲ್ಪಿಸುವ ಮೂಲಕ ತಿರುವಾಂಕೂರು ಮತ್ತು ಕೊಚ್ಚಿಯಲ್ಲಿನ ಆಡಳಿತಾಧಿಕಾರಿಗಳು ತೋಟದ ಕೃಷಿಯನ್ನು ಪ್ರೋತ್ಸಾಹಿಸಿದರು. ಈ ರೀತಿಯಲ್ಲಿ ಕೇರಳವು ವಾಣಿಜ್ಯ ಕೃಷಿಮಾಡುವ ಪ್ರದೇಶವಾಗಿ ಬದಲಾಯಿತು.

### ಕೋನೊಲಿ ಪ್ಲೋಟ್



ವ್ಯಾಪಾರಕ್ಕೆ ಅಗತ್ಯವಾದ ಹಡಗಿನ ನಿರ್ಮಾಣಕ್ಕೆ ಬೃಹತ್ ಪ್ರಮಾಣದಲ್ಲಿ ಸಾಗುವಾನಿ ಮರಗಳ ಅವಶ್ಯಕತೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಗಿತ್ತು. ಮಲಬಾರಿನಲ್ಲಿ ಸಾಗುವಾನಿಗೆ ಸೂಕ್ತವಾದ ಫಲವತ್ತಾದ ಮಣ್ಣು ಇರುವ ನಿಲಂಬೂರಿನಲ್ಲಿ ಸಾಗುವಾನಿ ಮರವನ್ನು ಬೆಳೆಸಲು ಕಂಪೆನಿಯು ಕಲೆಕ್ಟರ್ ಆದ ಹೆನ್ರಿ ವಾಲೆಂಟೈನ್ ಕೋನೊಲಿಯನ್ನು ನೇಮಿಸಿತು. ನಿಲಂಬೂರಿನಲ್ಲಿ 1500 ಎಕರೆ ಪ್ರದೇಶದಲ್ಲಿ ಕೋನೊಲಿ (1823-38) ಸಾಗುವಾನಿ ಗಿಡಗಳನ್ನು ಬೆಳೆಸಿದನು. ಇದು ಅನಂತರ ಕೋನೊಲಿ ಪ್ಲೋಟ್ ಎಂದು ಕರೆಯಲ್ಪಟ್ಟಿತು.

ಕೃಷಿಯ ವಾಣಿಜ್ಯೀಕರಣವು ಕೇರಳದ ಕೃಷಿ ಕ್ಷೇತ್ರದಲ್ಲಿ ಉಂಟುಮಾಡಿದ ಬದಲಾವಣೆಗಳನ್ನು ವಿಶ್ಲೇಷಿಸಿರಿ.



## ವಾಣಿಜ್ಯೋದ್ದಿಮೆಗಳು ಮತ್ತು ಪರಂಪರಾಗತ ಉದ್ದಿಮೆಗಳ ಬೆಳವಣಿಗೆ

ತೋಟಬೆಳೆ ಉತ್ಪನ್ನಗಳನ್ನು ಸಂಸ್ಕರಿಸುವುದಕ್ಕೆ ಮತ್ತು ರಫ್ತು ಮಾಡುವುದಕ್ಕೆ ಬ್ರಿಟಿಷ್ ಮೂಲಧನದೊಂದಿಗೆ ಕೇರಳದಲ್ಲಿ ವಾಣಿಜ್ಯ ಸಂಬಂಧೀ ಉದ್ದಿಮೆಗಳನ್ನು ಆರಂಭಿಸಲಾಯಿತು. ಚಾ ಕಂಪೆನಿಗಳು, ಕಾಫಿ ಬೀಜಗಳನ್ನು ಸಂಸ್ಕರಿಸುವ ಕಂಪೆನಿಗಳು, ರಬ್ಬರ್ ಕಂಪೆನಿಗಳು ವಾಣಿಜ್ಯ ಕೃಷಿಯನ್ನು ಕೇಂದ್ರೀಕರಿಸಿ ಸ್ಥಾಪಿಸಲ್ಪಟ್ಟವು. ಇದರೊಂದಿಗೆ ತೆಂಗಿನಕಾಯಿ, ಹುರಿಹಗ್ಗ, ಗೋಡಂಬಿ, ಬೀಡಿ, ಕೈಮಗ್ಗ ಮುಂತಾದವುಗಳಿಗೆ ಸಂಬಂಧಿಸಿದ ಪರಂಪರಾಗತ ಉದ್ದಿಮೆಗಳು ಬೆಳೆದು ಬಂದವು. ಎಣ್ಣೆಮಿಲ್ಲುಗಳು ಕೇರಳದಲ್ಲಿ ವ್ಯಾಪಕವಾಯಿತು. ಆಲಪ್ಪುಳವು ತೆಂಗಿನ ಎಣ್ಣೆ ಉದ್ದಿಮೆಯ ಕೇಂದ್ರವಾಗಿತ್ತು. 1859ರಲ್ಲಿ ಮೊದಲ ಹುರಿಹಗ್ಗ ಕಾರ್ಖಾನೆಯನ್ನೂ


ಫರೂಕಿನಲ್ಲಿರುವ ಹಂಚಿನ ಕಾರ್ಖಾನೆ


ಆಲಪ್ಪುಳದ ಹುರಿಹಗ್ಗ ನಿರ್ಮಾಣ ಕಾರ್ಖಾನೆ

ಆಲಪ್ಪುಳದಲ್ಲಿ ಹುರಿಹಗ್ಗ ನಿರ್ಮಾಣ ಉದ್ದಿಮೆಯನ್ನೂ ಸ್ಥಾಪಿಸಲಾಯಿತು. ಗೋಡಂಬಿಯನ್ನು ಹುರಿದು ಸಿಪ್ಪೆ ಸುಲಿದು ತಿರುಳನ್ನು ರಫ್ತು ಮಾಡುವ ಕಾರ್ಖಾನೆಗಳು ಕೊಲ್ಲಂ ಕೇಂದ್ರೀಕರಿಸಿ ಆರಂಭಗೊಂಡವು. ಫರೂಕ್, ಕೊಲ್ಲಂ, ಒಲ್ಲೂರ್ (ತ್ರಿಶೂರ್) ಮುಂತಾದ ಪ್ರದೇಶಗಳಲ್ಲಿ ಹಂಚಿನ ಕಾರ್ಖಾನೆಗಳು ಹಾಗೂ ಕಣ್ಣೂರು, ಕಲ್ಲಿಕೋಟೆಗಳಲ್ಲಿ ಕೈಮಗ್ಗ ಬಟ್ಟೆ ನಿರ್ಮಾಣ ಶಾಲೆಗಳೂ ಆರಂಭವಾಯಿತು. ಹೊಗೆಸೊಪ್ಪು ವ್ಯಾಪಕವಾಗುವುದರೊಂದಿಗೆ ಬೀಡಿ ಕಂಪೆನಿಯು ಕಣ್ಣೂರು ಕೇಂದ್ರವಾಗಿ ಬೆಳೆದುಬಂತು.



**ಬ್ರಿಟಿಷ್ ಆಡಳಿತ ಕಾಲದಲ್ಲಿ ಕೇರಳದಲ್ಲಿ** ವಾಣಿಜ್ಯ ಮತ್ತು ಪರಂಪರಾಗತ ಉದ್ದಿಮೆಗಳಲ್ಲುಂಟಾದ ಬದಲಾವಣೆಯ ಕುರಿತು ಟಿಪ್ಪಣಿ ತಯಾರಿಸಿರಿ.

ಕೇರಳದ ತೋಟಗಳು ಮತ್ತು ಪರಂಪರಾಗತ ಕೈಗಾರಿಕೆಗಳೆಲ್ಲಾ ನಿಮ್ಮೂರಲ್ಲಿದೆ ಎಂದು ಊಹಿಸುವ. ಅಲ್ಲಿನ ಕೆಲಸಗಾರರಿಗೆ ಇರಬೇಕಾದ ಸಾಮರ್ಥ್ಯಗಳೇನು?


ಪಳ್ಳಿವಾಸಲ್ ವಿದ್ಯುತ್ ಘಟಕ

## ಆಧುನಿಕ ಕೈಗಾರಿಕೆಗಳ ಉದಯ

20ನೇ ಶತಮಾನದ ಮಧ್ಯಭಾಗದಲ್ಲಿ ಕೇರಳದಲ್ಲಿ ಆಧುನಿಕ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟುವು. ಅವುಗಳಲ್ಲಿ ಬಹುಭಾಗವೂ ತಿರುವಾಂಕೂರು ಮತ್ತು ಕೊಚ್ಚಿಯಲ್ಲಿ ಸ್ಥಾಪನೆಗೊಂಡುವು. ತಿರುವಾಂಕೂರಿನ ಆಡಳಿತಾಧಿಕಾರಿಗಳು ಆಧುನಿಕ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಧೋರಣೆಗಳನ್ನು ತಳೆದರು. ಬ್ರಿಟಿಷರು ಕೈಗಾರಿಕೆಗಳಿಗೆ ಅಗತ್ಯವಾದ ತಂತ್ರಜ್ಞಾನ ಮತ್ತು ಆರ್ಥಿಕ ಸಹಾಯವನ್ನು ನೀಡಿದರು. ಪಳ್ಳಿವಾಸಲ್ ವಿದ್ಯುತ್ ಘಟಕದ ಸ್ಥಾಪನೆಯು ಆಧುನಿಕ ಕೈಗಾರಿಕೆಗಳ ತ್ವರಿತ ಬೆಳವಣಿಗೆಗೆ ಕಾರಣವಾಯಿತು. ಆ ಕಾಲದಲ್ಲಿ ಸ್ಥಾಪನೆಗೊಂಡ ಪ್ರಮುಖವಾದ ಕೆಲವು ಕೈಗಾರಿಕೆಗಳನ್ನು ಕೆಳಗೆ ನೀಡಲಾಗಿದೆ.

ಬ್ರಿಟೀಷರ ಆಡಳಿತ ಕಾಲದಲ್ಲಿ ಕೇರಳದಲ್ಲಿ ಬೆಳೆದುಬಂದ ಕೈಗಾರಿಕೆಗಳ ಕುರಿತು ಸ್ಲೈಡ್ ತಯಾರಿಸಿರಿ.



- ಪುನಲೂರು ಪೇಪರ್ ಮಿಲ್ – ಕೊಲ್ಲಂ
- ಕಳಮಶ್ಶೇರಿಯಲ್ಲಿನ ಫ್ಯಾಕ್ಟ್ (FACT) – ಎರ್ನಾಕುಳ
- ಕುಂಡರ ಸಿರಾಮಿಕ್ಸ್ – ಕೊಲ್ಲಂ
- ರಬ್ಬರ್‌ವರ್ಕ್ಸ್ – ತಿರುವನಂತಪುರ
- ಟಾಟಾ ಓಯಿಲ್ ಮಿಲ್ಸ್ – ಕೊಚ್ಚಿ
- ಅಳಗಪ್ಪ ಬಟ್ಟೆ ಮಿಲ್ – ಕೊಚ್ಚಿ

ಬಂಡವಾಳ ಕ್ರೋಢೀಕರಣಕ್ಕೆ ಹಣಕಾಸು ಸಂಸ್ಥೆಗಳಾಗಿ ಬ್ಯಾಂಕುಗಳು ಈ ಕಾಲದಲ್ಲಿ ಕೇರಳದಲ್ಲಿ ಬೆಳೆದುಬಂದುವು. ನೆಡುಂಗಾಡಿಬ್ಯಾಂಕ್ ಕೇರಳದ ಮೊದಲ ಖಾಸಗಿ ಬ್ಯಾಂಕಾಗಿತ್ತು. ಅನಂತರ ಇಂಪೀರಿಯಲ್‌ಬ್ಯಾಂಕ್, ಇಂಡಿಯನ್‌ನ್ಯಾಶನಲ್‌ಬ್ಯಾಂಕ್, ಚಾರ್ಟೆಡ್‌ಬ್ಯಾಂಕ್ ಇತ್ಯಾದಿಗಳು ಸ್ಥಾಪಿಸಲ್ಪಟ್ಟವು.

**ಬ್ರಿಟಿಷ್ ಆಡಳಿತ ಕಾಲದಲ್ಲಿ ಕೇರಳದಲ್ಲಿ ಉಂಟಾದ ಕೈಗಾರಿಕಾ ಬೆಳವಣಿಗೆಯನ್ನು ಸೂಚಿಸುವ ಫ್ಲೋಚಾರ್ಟನ್ನು ತಯಾರಿಸಿರಿ.**



## ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷ್ ಆಡಳಿತದ ಪ್ರಭಾವ



*ಹರ್‌ಮೆನ್ ಗುಂಡರ್ಟ್*

ಯುರೋಪಿಯನರ ಆಗಮನದೊಂದಿಗೆ ಕೇರಳದಲ್ಲಿ ಮುದ್ರಣವು ಆರಂಭವಾಯಿತು. ಮಲಯಾಳದಲ್ಲಿ ವ್ಯಾಕರಣ ಗ್ರಂಥಗಳನ್ನೂ ನಿಘಂಟುಗಳನ್ನೂ ತಯಾರಿಸಲು ಜೆಸ್ಯೂಟ್ ಮಿಶನರಿಗಳು ವಿಶೇಷ ಆಸಕ್ತಿಯನ್ನು ವಹಿಸಿದುವು. ಡಾ.ಎಂಜಲೋಸ್ ಫ್ರಾನ್ಸಿಸ್ ಮಲೆಯಾಳದ ಮೊದಲ ವ್ಯಾಕರಣ ಗ್ರಂಥವನ್ನು ಸಿದ್ಧಪಡಿಸಿದನು. ಅರ್ನೋಸ್ ಪಾದ್ರಿ ಮಲೆಯಾಳದಲ್ಲಿ ಮೊದಲ ನಿಘಂಟನ್ನು ರಚಿಸಿದನು. 'ಸಂಕ್ಷೇಪ ವೇದಾರ್ಥಂ' ಎಂಬುದು ಮಲೆಯಾಳ ಭಾಷೆಯಲ್ಲಿ ಮುದ್ರಣಗೊಂಡ ಮೊದಲ ಸಮಗ್ರ ಗ್ರಂಥವಾಗಿದೆ. ಮಿಶನರಿಯವರಾದ ಬೆಂಜಮಿನ್ ಬೈಲಿ ಇಂಗ್ಲಿಷ್-ಮಲೆಯಾಳ ನಿಘಂಟನ್ನೂ ಡಾ.ಹರ್‌ಮನ್ ಗುಂಡರ್ಟ್ ಮಲೆಯಾಳಂ-ಇಂಗ್ಲಿಷ್ ನಿಘಂಟನ್ನೂ ತಯಾರಿಸಿದರು. ಡಾ.ಹರ್‌ಮನ್ ಗುಂಡರ್ಟ್ ತಲಶ್ಶೇರಿಯಿಂದ ಪ್ರಕಟಿಸಿದ ರಾಜ್ಯ ಸಮಾಚಾರ, ಪಶ್ಚಿಮೋದಯಂ ಎಂಬಿವುಗಳು ಮಲೆಯಾಳದ ಮೊದಲ ಪತ್ರಿಕೆಗಳಾಗಿವೆ.

| ಮಿಶನರಿಗಳು | ಕಾರ್ಯಕ್ಷೇತ್ರದ ವಲಯ |
|---|---|
| • ಲಂಡನ್ ಮಿಶನ್ ಸೊಸೈಟಿ (ಎಲ್.ಎಂ.ಎಸ್) | • ತಿರುವಾಂಕೂರು |
| • ಚರ್ಚ್ ಮಿಶನ್ ಸೊಸೈಟಿ (ಸಿ. ಎಂ. ಎಸ್) | • ಕೊಚ್ಚಿ, ತಿರುವಾಂಕೂರು |
| • ಬಾಸಲ್ ಇವಾಂಜಲಿಕಲ್ ಮಿಶನ್ (ಬಿ.ಇ.ಎಂ.) | • ಮಲಬಾರು |



*ಗೌರಿ ಪಾರ್ವತೀಬಾಯಿ*

ಜಾತಿಮತ ಬೇಧವಿಲ್ಲದೆ ಎಲ್ಲರಿಗೂ ಶಿಕ್ಷಣ ಎಂಬ ಆಶಯವನ್ನು ಕೇರಳದಲ್ಲಿ ಮಿಶನರಿಗಳು ಆರಂಭಿಸಿದುವು. ತಿರುವಾಂಕೂರು ಮತ್ತು ಕೊಚ್ಚಿಯ ಆಡಳಿತಾಧಿಕಾರಿಗಳು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಲು ಮಿಶನರಿಗಳಿಗೆ ಭೂಮಿಯನ್ನು ನೀಡಿದರು.

ತಿರುವಾಂಕೂರಿನಲ್ಲಿಯೂ ಕೊಚ್ಚಿಯಲ್ಲಿಯೂ ದೇಶೀಯ ರಾಜರು ಶೈಕ್ಷಣಿಕ ರಂಗದಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದರು. ತಿರುವಾಂಕೂರಿನ ಆಡಳಿತಾಧಿಕಾರಿಯಾಗಿದ್ದ ಗೌರಿ ಪಾರ್ವತೀಬಾಯಿ 1817ರಲ್ಲಿ ಉಚಿತ ಪ್ರಾಥಮಿಕ ಶಿಕ್ಷಣವನ್ನು ಖಾತರಿಪಡಿಸಿ ಹೊರಡಿಸಿದ ಘೋಷಣೆಯು ಗಮನಾರ್ಹವಾಗಿದೆ. .

ಕೇರಳದ ಶಿಕ್ಷಣ ರಂಗದಲ್ಲಿ ಆರಂಭಕಾಲದ ಮಿಷನರಿಗಳ ಪಾತ್ರವನ್ನು ಸ್ಪಷ್ಟಪಡಿಸಿರಿ.



ಬ್ರಿಟಿಷರ ಆಗಮನಕ್ಕಿಂತ ಮೊದಲು ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಶಿಕ್ಷಾವಿಧಾನದ ಕುರಿತು ಹಿಂದಿನ ತರಗತಿಯಲ್ಲಿ ಚರ್ಚಿಸಿರುವಿರಲ್ಲವೇ. ಆ ಕಾಲದಲ್ಲಿ ಅಪರಾಧಿಯ ಜಾತಿಯ ಆಧಾರದಲ್ಲಿ ಅವನಿಗೆ ಶಿಕ್ಷೆಯೂ ವಿಚಾರಣೆಯೂ ನಡೆಯುತ್ತಿತ್ತು. ಈ ನ್ಯಾಯ ವ್ಯವಸ್ಥೆಯನ್ನು ಬ್ರಿಟಿಷರು ಪರಿಷ್ಕರಿಸಿದರು. ಅಪರಾಧಿಯ ವಾದವನ್ನು ಕೇಳಿದ ನಂತರ ಅಪರಾಧದ ಸ್ವಭಾವಕ್ಕನುಸಾರವಾಗಿ ಏಕೀಕೃತವಾದ ಶಿಕ್ಷಾವಿಧಾನವನ್ನು ಜಾರಿಗೆ ತರುವ ಸಂಪ್ರದಾಯವು ಬೆಳೆಯಿತು. ಇದರಿಂದ ಜಾತಿಗಳಿಗೆ ಅತೀತರಾಗಿ ಎಲ್ಲ ಅಪರಾಧಿಗಳೂ ಕಾನೂನಿನ ಮುಂದೆ ಸಮಾನರಾದರು. ಅಪರಾಧಿಗಳ ವಿಚಾರಣೆಗಾಗಿ ಹಲವು ಸ್ಥಳಗಳಲ್ಲಿ ನ್ಯಾಯಾಲಯಗಳು ಸ್ಥಾಪಿಸಲ್ಪಟ್ಟುವು.

ಬ್ರಿಟಿಷರ ಆಡಳಿತಕಾಲದಲ್ಲಿ ಕೇರಳದಲ್ಲಿದ್ದ ಪಂರಂಪರಾಗತ ಆಯುರ್ವೇದ ಚಿಕಿತ್ಸಾ ಪದ್ಧತಿಯ ಸ್ಥಾನದಲ್ಲಿ ಆಧುನಿಕ ವೈದ್ಯಶಾಸ್ತ್ರ ಪದ್ಧತಿಯು ಪ್ರಾಧಾನ್ಯವನ್ನು ಪಡೆಯಿತು. ಸಿಡುಬನ್ನು ತಡೆಯುವುದಕ್ಕಿರುವ ಚುಚ್ಚುಮದ್ದನ್ನು ಮೊದಲು ಮಲಬಾರಿನಲ್ಲಿ ಆರಂಭಿಸಲಾಯಿತು. ಆ ಕಾಲದಲ್ಲಿ ತಿರುವಾಂಕೂರಿನ ರಾಜ ಇಂಗ್ಲೆಂಡಿನಿಂದ ಮದ್ದನ್ನು ತರುವುದಕ್ಕಾಗಿ ಕಂಪನಿಯೊಂದನ್ನು ನಿಯೋಜಿಸಿದ್ದರು. ಮಲಬಾರು, ತಿರುವಾಂಕೂರು ಮತ್ತು ಕೊಚ್ಚಿಯಲ್ಲಿ ಸರಕಾರಿ ಆಸ್ಪತ್ರೆಯನ್ನು ಆರಂಭಿಸಲಾಯಿತು.

ಕೇರಳದ ಕೆಲವು ಸಮುದಾಯಗಳಲ್ಲಿ ಪರಂಪರಾಗತ ಹಕ್ಕಿನ ವಿಧಾನವು ಮಾತೃಪ್ರಧಾನವಾದ ಅಳಿಯಕಟ್ಟು ಸಂಪ್ರದಾಯವಾಗಿತ್ತು. ಇಂಗ್ಲೀಷ್ ವಿದ್ಯಾಭ್ಯಾಸವನ್ನು ಪಡೆದ ಯುವಜನಾಂಗವು ಈ ವಿಧಾನವನ್ನು ಪ್ರಬಲವಾಗಿ ವಿರೋಧಿಸಿದ್ದಲ್ಲದೆ, ನ್ಯಾಯಾಲಯದಲ್ಲಿ ಈ ಕುರಿತು ಅಪೀಲು ಸಲ್ಲಿಸಿದರು. ಇದರಿಂದಾಗಿ ತಿರುವಾಂಕೂರು, ಕೊಚ್ಚಿ ಮತ್ತು ಮಲಬಾರಿನಲ್ಲಿ ಅಳಿಯಕಟ್ಟು ಸಂಪ್ರದಾಯಕ್ಕೆದುರಾಗಿ ಕಾನೂನುಗಳು ಜಾರಿಗೊಂಡುವು. ಈ ಕಾನೂನು ವ್ಯವಸ್ಥೆ ಮಕ್ಕಳ ಕಟ್ಟು ಸಂಪ್ರದಾಯಕ್ಕೆ ಪ್ರಾಧಾನ್ಯ ನೀಡಿತು. ಇದರಂತೆ ತರವಾಡಿನ ಎಲ್ಲಾ ಸದಸ್ಯರಿಗೂ ಆಸ್ತಿಯ ಮೇಲಿನ ಹಕ್ಕು ಸಿಗುವಂತಾಯಿತು. ಇದು ತರವಾಡು, ಅವಿಭಕ್ತ ಕುಟುಂಬ ಎಂಬಿವುಗಳ ಶಿಥಿಲೀಕರಣಕ್ಕೆ ಕಾರಣವಾಯಿತು.

ಕೇರಳದ ಪ್ರಾಕೃತಿಕ ಸಂಪನ್ಮೂಲಗಳನ್ನು ಶೋಷಣೆಮಾಡಲು ಮತ್ತು ಆಡಳಿತವನ್ನು ಸುಗಮಗೊಳಿಸಲು ಹಮ್ಮಿಕೊಂಡ ಕ್ರಮಗಳ ಭಾಗವಾಗಿ ಈ ಪರಿಷ್ಕಾರಗಳು ನಡೆಯುವುದರೊಂದಿಗೆ ಕೇರಳೀಯ ಸಮಾಜದ ಆಧುನೀಕರಣಕ್ಕೆ ಇದು ಸಹಾಯಕವಾಯಿತು.



**ಬ್ರಿಟಿಷರ ಆಗಮನದೊಂದಿಗೆ ಕೇರಳದ ಕಾನೂನು ಕ್ಷೇತ್ರದಲ್ಲಿಯೂ ಆರೋಗ್ಯ ಕ್ಷೇತ್ರದಲ್ಲಿಯೂ ಉಂಟಾದ ಬದಲಾವಣೆಗಳನ್ನು ಚರ್ಚಿಸಿರಿ.**

## ಸುಧಾರಣಾ ಚಳವಳಿಗಳು ಮತ್ತು ಸಾಮಾಜಿಕ ಬದಲಾವಣೆಗಳು



**ಕೇರಳ ಒಂದು ಹುಚ್ಚರ ನಾಡು**

*"ಮಲಬಾರಿನಲ್ಲಿ (ಕೇರಳ) ನಾನು ಕಂಡದ್ದಕ್ಕಿಂತ ಹೆಚ್ಚಿನ ಮೂರ್ಖತನವನ್ನು ಈ ಮೊದಲು ನಾನೆಲ್ಲೂ ಕಂಡಿಲ್ಲ... ಸವರ್ಣೀಯರು ನಡೆಯುವ ಹಾದಿಯಲ್ಲಿ ಅವರ್ಣೀಯರು ನಡೆಯಬಾರದು... ಈ ಮಲಬಾರಿನವರೆಲ್ಲಾ ಹುಚ್ಚರು.. ಅವರ ಮನೆಗಳು ಹುಚ್ಚಾಸ್ಪತ್ರೆಗಳಾಗಿವೆ.*

***ಸ್ವಾಮಿ ವಿವೇಕಾನಂದ – 1897 ಮದ್ರಾಸ್***

ಹತ್ತೊಂಬತ್ತನೆಯ ಶತಮಾನದಲ್ಲಿನ ಕೇರಳದ ಸಾಮಾಜಿಕ ಸ್ಥಿತಿಗತಿಗಳ ಕುರಿತಾದ ಸ್ವಾಮಿ ವಿವೇಕಾನಂದರ ವಿಮರ್ಶೆಯನ್ನು ಗಮನಿಸಿದಿರಲ್ಲವೇ.

ಜಾತಿವ್ಯವಸ್ಥೆಯ ಕಠೋರತೆಯು ಆ ಕಾಲದಲ್ಲಿ ಕೇರಳದಲ್ಲಿ ಪ್ರಬಲವಾಗಿತ್ತು. ಕೆಳಗಿನ ಜಾತಿಯವರನ್ನು ಮುಟ್ಟಬಾರದವರು, ಸ್ಪರ್ಶಿಸಬಾರದವರು ಎಂದು ಪರಿಗಣಿಸಲಾಗುತ್ತಿತ್ತು. ಸಮಾಜದಲ್ಲಿ ವ್ಯಕ್ತಿಯೋರ್ವನ ಸ್ಥಾನಮಾನವನ್ನು ಅವನ ಜಾತಿಯ ಆಧಾರದಲ್ಲಿ ನಿಶ್ಚಯಿಸಲಾಗುತ್ತಿತ್ತು. ಪ್ರತಿಯೊಂದು ಜಾತಿಯಲ್ಲಿಯೂ ಮೂಢನಂಬಿಕೆಗಳೂ ಅನಾಚಾರಗಳೂ ಧಾರಾಳವಾಗಿ ತುಂಬಿಕೊಂಡಿದ್ದುವು. ಆಧುನಿಕ ಶಿಕ್ಷಣದ ಪ್ರಚಾರ ಹಾಗೂ ಪಾಶ್ಚಾತ್ಯ ಆಶಯಗಳ ಸಂಪರ್ಕವು ಜಾತಿವ್ಯವಸ್ಥೆಯ ಮತ್ತು ಮೂಢನಂಬಿಕೆಯ ವಾಸ್ತವಿಕತೆಯನ್ನು ಕೇರಳೀಯರಿಗೆ ತಿಳಿಸಿತು. ಸಮಾಜದಲ್ಲಿದ್ದ ಅಸಮತ್ವ, ಅನಾಚಾರಗಳನ್ನು ನಿವಾರಿಸಲು ಸುಧಾರಣಾ ಚಳವಳಿಗಳು ರೂಪುಗೊಂಡುವು.

*ಕೇರಳದ ಸಮಾಜ ಸುಧಾರಕರ ಚಿತ್ರಗಳನ್ನೂ ಜೀವನ ಚರಿತ್ರೆಯ ಕುರಿತಾದ ಡಿಜಿಟಲ್ ಮ್ಯಾಗಸಿನ್ ತಯಾರಿಸಿರಿ.*



FEIBAH

**ಕೇರಳದಲ್ಲಿ ಸಾಮಾಜಿಕ ಸುಧಾರಕರ ದೃಷ್ಟಿಕೋನಗಳನ್ನು, ಆಶಯಗಳನ್ನು ಕೇರಳೀಯ ಸಮಾಜ ಎಷ್ಟರವರೆಗೆ ಒಪ್ಪಿಕೊಂಡಿದೆ ಎಂದು ಚರ್ಚಿಸಿರಿ.**




| ಸಮಾಜ ಸುಧಾರಕರು | ಸಂಸ್ಥೆಗಳು/ಚಟುವಟಿಕೆಗಳು |
|---|---|
| • ವೈಕುಂಠ ಸ್ವಾಮಿಗಳು | • ಸಮತ್ವ ಸಮಾಜ |
| • ಚಟ್ಟಂಬಿ ಸ್ವಾಮಿಗಳು | • ಅವಿಭಕ್ತ ಕುಟುಂಬ, ಸಂಬಂಧ, ಅಳಿಯಕಟ್ಟು ಸಂಪ್ರದಾಯದ ವಿರುದ್ಧ ಹೋರಾಡಿದರು. |
| • ಶ್ರೀ ನಾರಾಯಣಗುರು | • ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ |
| • ಕುರ್ಯಾಕೋಸ್ ಎಲಿಯಾಸ್ ಚಾವರ | • ಅನಾಥಾಲಯ ಮತ್ತು ವಿದ್ಯಾಲಯಗಳ ಸ್ಥಾಪನೆ |
| • ಅಯ್ಯಂಕಾಳಿ | • ಸಾಧುಜನ ಪರಿಪಾಲನಾ ಸಂಘಂ |
| • ವಕ್ಕಂ ಅಬ್ದುಲ್ ಖಾದರ್ ಮೌಲವಿ | • ತಿರುವಾಂಕೂರು ಮುಸ್ಲಿಂ ಮಹಾಜನ ಸಭೆ |
| • ವಾಗ್ಭಟಾನಂದ | • ಆತ್ಮ ವಿದ್ಯಾಸಂಘ |
| • ಸಹೋದರನ್ ಅಯ್ಯಪ್ಪನ್ | • ಸಹೋದರ ಚಳವಳಿ |
| • ಪಂಡಿತ್ ಕೆ.ಪಿ. ಕರುಪ್ಪನ್ | • ಅರಯ ಸಮಾಜ |
| • ಮನ್ನತ್ ಪದ್ಮನಾಭನ್ | • ನಾಯರ್ ಸರ್ವೀಸ್ ಸೊಸೈಟಿ |
| • ವಿ.ಟಿ. ಭಟ್ಟತ್ತಿರಿಪಾಡ್ | • ಯೋಗಕ್ಷೇಮ ಸಭೆ |
| • ಕುಮಾರ ಗುರುದೇವ | • ಪ್ರತ್ಯಕ್ಷ ರಕ್ಷಾದೈವ ಸಭೆ |

NT-911-5-SOC.SCI.-I-10-K-VOL.2



**ದೈವೋಪದೇಶ ಮತ್ತು ಆತ್ಮೋಪದೇಶ**



*'ಆಳಮೇರುಂನಿನ್ ಮಹಸ್ಸಾ*
*ಮೂಾಯಿಯಿಲ್ ಞಙಳಾಕವೇ*
*ಆಳಣಂ ವಾಣಣಂ ನಿತ್ಯಂ*
*ವಾಳಣಂ ವಾಳಣಂ ಸುಖಂ'*


ಇವು ಶ್ರೀ ನಾರಾಯಣಗುರು ನೂರು ವರ್ಷ ಮೊದಲು ರಚಿಸಿದ ಪ್ರಾರ್ಥನ ಗೀತೆಯಾದ ದೈವೋಪದೇಶದಲ್ಲಿನ ಸಾಲುಗಳಾಗಿವೆ.

*'ಅವನಿವನೆನ್ನದೆನ್ನದೊಕೆಯೊರ್ತ್ತಾ-*
*ಲವನೀಯಿಲಾದಿಮಮಾಯೋರು ಆತ್ಮರೂಪಂ*
*ಅವನವನಾತ್ಮಸುಖತ್ತಿನಾ ಚರಿಕ್ಕು-*
*ನ್ನವಯವರನ್ನುಂ ಸುಖತ್ತಿನಾಯ್ ವರೇಣಂ*


(ಆತ್ಮೋಪದೇಶ ಶತಕಂ - 24ನೇ ಶ್ಲೋಕ)

ಸಮಾಜ ಸುಧಾರಣಾ ಚಳವಳಿಗಳು ಸಾಮಾಜಿಕ ಬದಲಾವಣೆಗಿರುವ ಹೋರಾಟಗಳಿಗೆ ಪ್ರೇರಣೆಯಾದುವು. ಮೇಲುಡೆಗೆಯನ್ನು ಧರಿಸುವ ಹಕ್ಕಿಗಾಗಿ ದಕ್ಷಿಣ ತಿರುವಾಂಕೂರಿನ ಚನ್ನಾರ್ ಮಹಿಳೆಯರು ಹೋರಾಟ ನಡೆಸಿದರು. ಇದಕ್ಕೆ ಸಂಬಂಧಿಸಿ 1859ರಲ್ಲಿ ಕುಪ್ಪಸ ಮತ್ತು ಮೇಲುಡೆಗೆಯನ್ನು ಧರಿಸಲು ಚನ್ನಾರ್ ಮಹಿಳೆಯರಿಗೆ ಅನುಮತಿ ನೀಡುವ ಆದೇಶವನ್ನು ಕೊಡಲು ಉತ್ರಂ ತಿರುನಾಳ್ ಮಹಾರಾಜರು ಬದ್ಧರಾದರು.

ಶ್ರೀ ನಾರಾಯಣಗುರು 1888ರಲ್ಲಿ ನಡೆಸಿದ ಅರುವಿಪ್ಪುರ ಶಿವಪ್ರತಿಷ್ಠೆಯು ಸಾಮಾಜಿಕ ವಲಯದಲ್ಲಿ ಹೊಸ ಚಲನೆಯನ್ನು ಸೃಷ್ಟಿಸಿತು. ಕ್ಷೇತ್ರ ಕಾರ್ಯಗಳನ್ನೂ ಪೂಜೆಗಳನ್ನೂ ನಡೆಸುವ ಹಕ್ಕು ಅವರ್ಣೀಯ ಜನವಿಭಾಗಕ್ಕೆ ಇದರಿಂದ ಸಿಗುವಂತಾಯಿತು. 'ಜಾತಿಬೇಧ, ಮತೀಯ ದ್ವೇಷವಿಲ್ಲದೆ ಎಲ್ಲರೂ ಸಹೋದರತೆಯಿಂದ ಬಾಳುವ ಮಾದರಿ ಸ್ಥಾನಮಾನ ಇದಾಗಿದೆ' ಎಂದು ಅರುವಿಪ್ಪುರ ದೇವಾಲಯದ ಮುಂದೆ ನಾರಾಯಣಗುರುಗಳು ಹೇಳಿದರು.



ಟಿ.ಕೆ. ಮಾಧವನ್



ಮನ್ನತ್ ಪದ್ಮನಾಭನ್

ವಿಜ್ಞಾನಕ್ಕೆ ಪ್ರಾಧಾನ್ಯ ನೀಡಿರುವ ಗುರುಗಳು ಕ್ಷೇತ್ರಕ್ಕೆ ಹೊಂದಿಕೊಂಡು ವಿದ್ಯಾಲಯಗಳನ್ನೂ ವಾಚನಾಲಯಗಳನ್ನೂ ಸ್ಥಾಪಿಸಿದರು. ವಿದ್ಯೆಯಿಂದ ಪ್ರಬುದ್ಧರಾಗಲು ಸಂಘಟನೆಯಿಂದ ಶಕ್ತರಾಗಲು ಅವರು ಭೋದಿಸಿದರು. 'ವಾದಿಸಲೋ ಗೆಲ್ಲಲೋ ಅಲ್ಲ, ತಿಳಿಯಲು ತಿಳಿಸಲು' ಎಂಬ ಘೋಷಣೆಯೊಂದಿಗೆ ಆಲುವಾದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಸಂಘಟಿಸಿದರು. ಶ್ರೀ ನಾರಾಯಣಗುರುಗಳ ಚಟುವಟಿಕೆಗಳ ಸಂದೇಶವು ಉದಾತ್ತವಾದ ಮಾನವ ಸ್ನೇಹದಿಂದಲೂ ಸರ್ವಧರ್ಮ ಸಹೋದರತೆಯಿಂದಲೂ ಕೂಡಿತ್ತು.



ಕೆ. ಕೇಳಪ್ಪನ್



ಎ.ಕೆ. ಗೋಪಾಲನ್

1924ರಲ್ಲಿ ನಡೆದ ವೈಕ್ಕಂ ಸತ್ಯಾಗ್ರಹವು ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುವ ಸ್ವಾತಂತ್ರ್ಯಕ್ಕಾಗಿ ಕೇರಳದಲ್ಲಿ ನಡೆದ ಪ್ರಧಾನ ಚಳವಳಿಯಾಗಿತ್ತು. ಟಿ.ಕೆ. ಮಾಧವನ್‌ರ ನೇತೃತ್ವದಲ್ಲಿ ನಡೆದ ಈ ಹೋರಾಟವನ್ನು ಬೆಂಬಲಿಸಿ ಮನ್ನತ್ ಪದ್ಮನಾಭನ್ ಸವರ್ಣ ಜಾಥಾವನ್ನು ಸಂಘಟಿಸಿದರು. ಈ ಸತ್ಯಾಗ್ರಹದ ನಂತರ ವೈಕ್ಕಂ ದೇವಾಲಯ ಮತ್ತು ಸುತ್ತುಮುತ್ತಲಿನ ನಿಷೇಧಿತ ಸ್ಥಳಗಳಲ್ಲಿ ಅವರ್ಣೀಯರಿಗೂ ಸಂಚಾರಿಸುವ ಹಕ್ಕನ್ನು ನೀಡಲಾಯಿತು. ಗುರುವಾಯೂರು ದೇವಾಲಯಕ್ಕೆ ಹಿಂದೂ ಧರ್ಮದಲ್ಲಿರುವ ಎಲ್ಲಾ ಜಾತಿಗಳಿಗೆ ಪ್ರವೇಶದ ಹಕ್ಕನ್ನು ನೀಡಬೇಕೆಂದು ಕೆ. ಕೇಳಪ್ಪನ್ ನೇತೃತ್ವದಲ್ಲಿ 1931ರಲ್ಲಿ ಗುರುವಾಯೂರು ಸತ್ಯಾಗ್ರಹ ನಡೆಯಿತು. ಎ.ಕೆ. ಗೋಪಾಲನ್ ಈ ಚಳವಳಿಯ ಸ್ವಯಂ ಸೇವಕ ನೇತಾರರಾಗಿದ್ದರು. ಈ ಸತ್ಯಾಗ್ರಹದಲ್ಲಿ ಪಿ. ಕೃಷ್ಣಪಿಳ್ಳೆ ಕ್ರೂರವಾಗಿ ಆಕ್ರಮಿಸಲ್ಪಟ್ಟರು. ಈ ಜನಪರ ಚಳವಳಿಯ ಪರಿಣಾಮವಾಗಿ 1936 ನವೆಂಬರ್ 12ರಂದು ತಿರುವಾಂಕೂರಿನಲ್ಲಿ ಕ್ಷೇತ್ರಪ್ರವೇಶಘೋಷಣೆಯನ್ನು ಹೊರಡಿಸಲಾಯಿತು. ಅನಂತರ ಮದ್ರಾಸ್ ಕ್ಷೇತ್ರ ಪ್ರವೇಶ ಘೋಷಣೆ ಕಾನೂನಿನ ಪ್ರಕಾರ ಕೊಚ್ಚಿಯ ಮಲಬಾರಿನಲ್ಲಿ ಮತ್ತು ಕೊಚ್ಚಿಯ ರಾಜನ ಆಜ್ಞೆಯ ಪ್ರಕಾರ ಕೊಚ್ಚಿಪ್ರಾಂತ್ಯದಲ್ಲಿ ಎಲ್ಲ ಜನ ವಿಭಾಗಗಳಿಗೂ ಆರಾಧನಾ ಸ್ವಾತಂತ್ರ್ಯ ಲಭಿಸಿತು.



ಪಿ. ಕೃಷ್ಣ ಪಿಳ್ಳೆ

ಕೇರಳದಲ್ಲಿ ನಡೆದ ಸಾಮಾಜಿಕ ಸುಧಾರಣೆಯಲ್ಲಿ ಚನ್ನಾರ್ ಚಳವಳಿ, ವೈಕ್ಕಂ ಸತ್ಯಾಗ್ರಹ ಮತ್ತು ಗುರುವಾಯೂರು ಸತ್ಯಾಗ್ರಹ ವಹಿಸಿದ ಪಾತ್ರವೇನು?



## ಕೇರಳದಲ್ಲಿ ರಾಷ್ಟ್ರೀಯ ಚಳವಳಿ

ಆಡಳಿತಾತ್ಮಕವಾಗಿ ಏಕೀಕರಣಗೊಂಡಿಲ್ಲ ಎಂಬ ಕಾರಣದಿಂದ ಕೇರಳದ ರಾಷ್ಟ್ರೀಯ ಚಳವಳಿಗೆ ಏಕೀಕೃತ ರೂಪವಿರಲಿಲ್ಲ. ಮಲಬಾರಿನಲ್ಲಿ ಬ್ರಿಟಿಷರ ನೇರವಾದ ಆಡಳಿತವಿದ್ದರೆ ಕೊಚ್ಚಿ ಮತ್ತು ತಿರುವಾಂಕೂರು ರೆಸಿಡೆಂಟರ ಮೂಲಕ ಬ್ರಿಟಿಷರ ಪರೋಕ್ಷ ಆಡಳಿತಕ್ಕೊಳಪಟ್ಟಿತ್ತು. ಆದ್ದರಿಂದ ಮಲಬಾರಿನಂತೆ ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ರಾಷ್ಟ್ರೀಯ ಚಳವಳಿ ಪ್ರಬಲವಾಗಿರಲಿಲ್ಲ.



ಕೆ.ಪಿ. ಕೇಶವ ಮೆನೋನ್

### ಮಲಬಾರು

ಒಂದನೇ ಜಾಗತಿಕ ಯುದ್ಧದ ಸಮಯದಲ್ಲಿ ಮಲಬಾರಿನಲ್ಲಿ ರಾಷ್ಟ್ರೀಯ ಚಳವಳಿಯು ಶಕ್ತವಾಯಿತು. ಮಲಬಾರು ಜಿಲ್ಲಾ ಕಾಂಗ್ರೆಸ್‌ನ ಪ್ರಥಮ ಸಮ್ಮೇಳನವು 1916ರಲ್ಲಿ ಅನಿಬೆಸೆಂಟ್‌ರ ಅಧ್ಯಕ್ಷತೆಯಲ್ಲಿ ಪಾಲ್ಘಾಟ್‌ನಲ್ಲಿ ನಡೆಯಿತು. ಕೆ.ಪಿ. ಕೇಶವಮೆನೋನ್, ಕೆ.ಪಿ. ರಾಮನ್ ಮೆನೋನ್, ಮುಹಮ್ಮದ್ ಅಬ್ದುರಹಿಮಾನ್ ಸಾಹೇಬ್, ಕೆ. ಮಾಧವನ್ ನಾಯರ್, ಇ. ಮೊಯ್ದು ಮೌಲವಿ, ಎಂ. ಪಿ. ನಾರಾಯಣ ಮೆನೋನ್ ಮುಂತಾದವರು ಆ ಸಮಯದಲ್ಲಿ ಮಲಬಾರಿನಲ್ಲಿ ಕಾಂಗ್ರೆಸ್‌ನ ಚಟುವಟಿಕೆಗಳಿಗೆ ನೇತೃತ್ವವನ್ನು ನೀಡಿದರು.




ಇ. ಮೊಯ್ದು ಮೌಲವಿ

1920 ರಲ್ಲಿ ಮಂಜೇರಿ ಯಲ್ಲಿ ನಡೆದ ಕೊನೆಯ ಮಲಬಾರು ರಾಷ್ಟ್ರೀಯ ಸಮ್ಮೇಳನದಲ್ಲಿ ಆಡಳಿತ ಸುಧಾರಣೆ, ಒಕ್ಕಲುಗಳ ಸಮಸ್ಯೆ, ಖಿಲಾಫತ್ ಮುಂತಾದ ವಿಷಯಗಳನ್ನು ಚರ್ಚಿಸಲಾಯಿತು. 1920ರಲ್ಲಿ ಗಾಂಧೀಜಿ ಮತ್ತು ಶೌಕತ್ ಅಲಿಯವರು ಕಲ್ಲಿಕೋಟೆಗೆ ಆಗಮಿಸಿ, ಖಿಲಾಫತ್ ಚಳವಳಿಗೆ ಬೆಂಬಲವನ್ನು ವ್ಯಕ್ತಪಡಿಸಿದರು. ಕಾಟಿಲಶ್ಶೇರಿ ಮುಹಮ್ಮದ್ ಮೌಲವಿ ಅಧ್ಯಕ್ಷನಾಗಿಯೂ ಮುಹಮ್ಮದ್ ಅಬ್ದುರಹಿಮಾನ್‌ಸಾಹಿಬ್ ಕಾರ್ಯದರ್ಶಿಯಾಗಿಯೂ ಖಿಲಾಫತ್ ಸಮಿತಿಯೊಂದನ್ನು ರೂಪಿಸಲಾಯಿತು. ಈ ಮೂಲಕ ಮಲಬಾರಿನಲ್ಲಿ ಖಿಲಾಫತ್ ಚಳವಳಿಯು ಪ್ರಬಲವಾಯಿತು. ಇದರ ನಂತರ ಮಲಬಾರಿನ ಅನೇಕ ಸ್ಥಳಗಳಲ್ಲಿ ಬ್ರಿಟಿಷರೊಂದಿಗೆ ಗಲಭೆಗಳು ನಡೆದವು. ಏರನಾಡ್, ವಳ್ಳುವನಾಡ್, ಪೊನ್ನಾನಿ ತಾಲೂಕುಗಳಲ್ಲಿ ಮಲಬಾರಿನ ಕೃಷಿಕರಾದ ಮಾಪಿಳ್ಳೆಗಳು ಪ್ರಬಲವಾದ ಹೋರಾಟಗಳಿಗೆ ನೇತೃತ್ವ ನೀಡಿದರು. ಈ ಹೋರಾಟಗಳನ್ನು ಮಲಬಾರು ದಂಗೆ (1921) ಎಂದು ಕರೆಯುತ್ತಾರೆ.



ಮುಹಮ್ಮದ್ ಅಬ್ದುರಹಿಮಾನ್




1930ರಲ್ಲಿ ನಿಯಮೋಲ್ಲಂಘನ ಚಳವಳಿಯು ಮಲಬಾರಿನಲ್ಲಿ ನಡೆಯಿತು. ಕೆ. ಕೇಳಪ್ಪನ್ ನೇತೃತ್ವದಲ್ಲಿ ಪಯ್ಯನ್ನೂರಿನಲ್ಲಿಯೂ ಮುಹಮ್ಮದ್ ಅಬ್ದುರಹಿಮಾನ್‌ರ ನೇತೃತ್ವದಲ್ಲಿ ಕಲ್ಲಿಕೋಟೆಯಲ್ಲಿಯೂ ಉಪ್ಪಿನ ನಿಯಮವನ್ನು ಉಲ್ಲಂಘಿಸಿ ಉಪ್ಪನ್ನು ತಯಾರಿಸಲಾಯಿತು. ಉಪ್ಪಿನ ನಿಯಮವನ್ನು ಉಲ್ಲಂಘಿಸಿದ ಸತ್ಯಾಗ್ರಹಿಗಳನ್ನು

### ಪೂಕೋಟ್ಟೂರ್ ದಂಗೆ

ಅಸಹಕಾರ ಚಳವಳಿ ಮತ್ತು ಖಿಲಾಫತ್ ಚಳವಳಿಯು ಪ್ರಬಲವಾಗಿದ್ದ ಮಲಬಾರ್‌ನಲ್ಲಿ 1921ರ ಮಲಬಾರು ದಂಗೆಯ ಭಾಗವಾಗಿ ನಡೆದ ಘಟನೆಯು ಪೂಕೋಟ್ಟೂರ್ ದಂಗೆಯಾಗಿದೆ. ಪೂಕೋಟ್ಟೂರ್‌ನ ಖಿಲಾಫತ್ ಸಮಿತಿಯ ಕಾರ್ಯದರ್ಶಿಯಾದ ವಡಕ್ಕೇವೀಟಿಲ್ ಮುಹಮ್ಮದ್‌ರನ್ನು ಕಳ್ಳತನದ ಆರೋಪದಲ್ಲಿ ಬ್ರಿಟಿಷ್ ಪೋಲೀಸರು ಬಂಧಿಸಲು ಪ್ರಯತ್ನಿಸುವುದರೊಂದಿಗೆ ದಂಗೆ ಆರಂಭಗೊಂಡಿತು. ಮೂರುಸಾವಿರಕ್ಕಿಂತಲೂ ಹೆಚ್ಚು ಜನರು ಭಾಗವಹಿಸಿದ ದಂಗೆಯನ್ನು ನಿಯಂತ್ರಿಸಲು ಬ್ರಿಟಿಷ್ ಸರಕಾರವು ಹರ ಸಾಹಸ ಪಡಬೇಕಾಯಿತು. ದಂಗೆಯಲ್ಲಿ ನೂರಕ್ಕಿಂತಲೂ ಅಧಿಕ ಜನರು ಕೊಲ್ಲಲ್ಪಟ್ಟರು.

### ಚೇಟ್ಟೂರ್ ಶಂಕರನ್ ನಾಯರ್

ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಅಧ್ಯಕ್ಷನಾದ ಏಕೈಕ ಮಲೆಯಾಳಿ ಪಾಲ್ಘಾಟ್‌ನ ಚೇಟ್ಟೂರ್ ಶಂಕರನ್ ನಾಯರ್ ಆಗಿದ್ದರು. 1897ರ ಅಮರಾವತಿ ಸಮ್ಮೇಳನದಲ್ಲಿ ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಜಲಿಯನ್‌ವಾಲಾಬಾಗ್ ದುರಂತವನ್ನು ವಿರೋಧಿಸಿ ಅವರು ವೈಸರಾಯಿಯ ಎಕ್ಸಿಕ್ಯೂಟಿವ್ ಸಮಿತಿಯ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಗಾಂಧೀಜಿಯ ಹೋರಾಟದ ವಿಧಾನಗಳನ್ನು ಕಟುವಾಗಿ ವಿಮರ್ಶಿಸಿದ ಅವರು "ಗಾಂಧಿಯೂ ಅರಾಜಕತೆಯೂ" (Gandhi and Anarchy) ಎಂಬ ಗ್ರಂಥವನ್ನು ರಚಿಸಿದರು.

ಬ್ರಿಟಿಷ್ ಸೈನ್ಯವು ಕ್ರೂರವಾಗಿ ಥಳಿಸಿದ್ದಲ್ಲದೆ ಅದರ ನೇತಾರರನ್ನು ಬಂಧಿಸಿತು. ವಿದೇಶಿವಸ್ತುಗಳ ಬಹಿಷ್ಕಾರ, ಮದ್ಯ ದಂಗಡಿಗಳೆದುರು ಪಿಕೆಟಿಂಗ್, ಖಾದಿಪ್ರಚಾರ ಇತ್ಯಾದಿಗಳು ಈ ಚಳವಳಿಯ ಭಾಗವಾಗಿ ಸಂಘಟಿಸಲ್ಪಟ್ಟವು. 1934ರಲ್ಲಿ ಗಾಂಧೀಜಿಯು ನಿಯಮೋಲ್ಲಂಘನ ಚಳವಳಿಯನ್ನು ಹಿಂತೆಗೆದುಕೊಂಡಿದ್ದನ್ನು ವಿರೋಧಿಸಿ ಕೇರಳದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಒಂದು ವಿಭಾಗದವರು ಸೋಶಿಯಲಿಸ್ಟ್ ಪಾರ್ಟಿಯವರಾಗಿ ಬದಲಾದರು. ಈ ಕಾಂಗ್ರೆಸ್‌ಸೋಶಿಯಲಿಸ್ಟ್ ಪಾರ್ಟಿಯು 1939ರಲ್ಲಿ ಕಮ್ಯೂನಿಸ್ಟ್ ಪಾರ್ಟಿಯಾಗಿ ಬದಲಾಯಿತು. ಇ.ಎಂ.ಎಸ್, ಎ.ಕೆ.ಗೋಪಾಲನ್, ಪಿ.ಕೃಷ್ಣಪಿಳ್ಳೆ ಮುಂತಾದವರು ಪ್ರಮುಖ ಕಮ್ಯೂನಿಸ್ಟ್ ನೇತಾರರಾಗಿದ್ದರು. ಅವರು ಕೃಷಿಕರನ್ನು ಮತ್ತು ಕಾರ್ಮಿಕರನ್ನು ಸಂಘಟಿಸಿ ಜಮೀನ್ದಾರಿ ವ್ಯವಸ್ಥೆ, ಬ್ರಿಟಿಷ್ ಸಾಮ್ರಾಜ್ಯಶಾಹಿತ್ವಕ್ಕೆದುರಾಗಿ ಅವರನ್ನು ಹೋರಾಟಕ್ಕೆ ಸಜ್ಜುಗೊಳಿಸಿದರು. ಕೃಷಿ ಸಂಘಟನೆಯ ನೇತೃತ್ವದಲ್ಲಿ ಕಯ್ಯೂರ್, ಮೊರಾಯ, ಕರಿವೆಳ್ಳೂರ್ ಮುಂತಾ ದೆಡೆಗಳಲ್ಲಿ ಹೋರಾಟಗಳು ನಡೆದುವು. ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಸರಕಾರಿ ಕಟ್ಟಡಗಳು, ಸೇತುವೆ ಗಳು, ಟೆಲಿಗ್ರಾಫ್ ಕಂಬಗಳು ಇತ್ಯಾದಿಗಳನ್ನು ನಾಶಗೊಳಿ ಸುವಂತಹ ಘಟನೆಗಳು ಮಲಬಾರಿನಲ್ಲಿ ನಡೆದುವು. ಕಿಳರಿ ಯೂರ್ ಬಾಂಬ್ ಪ್ರಕರಣ ಇದರಲ್ಲಿ ಪ್ರಧಾನವಾದುದ್ದಾಗಿದೆ. ಫರೂಕ್ ಸೇತುವೆಯನ್ನು ನಾಶಮಾಡಲು ಕೆ.ಬಿ. ಮೆನೋನ್, ಕುಂಞರಾಮಕಿಡಾವ್ ಎಂಬವರ ನೇತೃತ್ವ ದಲ್ಲಿ ಗೂಢಾಲೋಚನೆ ನಡೆಯಿತು ಎಂದು ಆರೋಪಿಸಿ 27 ಜನರನ್ನು ಅಪರಾಧಿಗಳೆಂದು ಕೇಸು ದಾಖಲಿಸಲಾಯಿತು.

### ಮಲಬಾರು ದಂಗೆಯ ಕುರಿತಾದ ಕವಿತೆಗಳು

'ಅನ್ನಿರುವತೊನ್ನಿಲ್ ನಮ್ಮಳ್ ಈ ಮಲೆಯಾಳತ್ತಿಲ್
ಒನ್ನುಚೇರುನೆವಾನ್ನು ವೆಳ್ಳಯೋಡೆದೆರೆತ್ ನಲ್ಲೆ ಮೆಟ್ಟಿಲ್
ಏರನಾಟ್ಟಿಲ್ ಧೀರಮಕ್ಕಳ್ ಚೋರ ಚೇಂದಿಯ ನಾಡಿದಿಲ್
ಚೀರಿಡು ಪಿರಂಗಿಗಳ್, ಮಾರುಕಾಟ್ಟಿಯ ನಾಡಿದಿಲ್
ವಾರಿಯಂ ಕುನ್ನತ್ ವೀರ ಕುಞ್ಞಹಮ್ಮದಾಜಿಯುಂ
ವಾಶಿಮೂತ್ತೇ ಮೊಪ್ಪರುಡೆ ಕೂಡೆ ಕೂಟ್ಟುಮಾಯಿಟ್ಟುಂ.

* * * *

ನಮ್ಮಳುಂಡಾಕ್ಕುನ ನೆಲ್ಲಿ ಜಮ್ಮಿಮಾರೆ ತೀಟ್ಟುವಾನ್
ಸಮ್ಮದಿಕ್ಕಿಲ್ಲೆನ್ನದಾಣ್ ಹೇತು ಏಟ್ಟ್ ಮುಟ್ಟುವಾನ್
ನಮ್ಮಳುಡೆ ಕಾಶ್ ವಾಜ ಇಂಗ್ಲೇಂಡಿಲೇಕ್ಕಯಕ್ಕುವಾನ್
ಸಮ್ಮದಿಕ್ಕಿಲ್ಲೆನ್ನದಾಣ್ ಹೇತು ಏಟ್ಟ್ ಮುಟ್ಟುವಾನ್

* * * *

ನಮ್ಮಳುಡೆ ನೆಂಜಿಲಾಣೊ ಕಲ್ಲುಕೇಟ್ಟಿ ವೆಚ್ಚದ್
ನಮ್ಮಳುಡೆ ಕೂಟ್ಟರೆಯಾಣೊ ಸುಬರ್ ಕೊನ್ನದ್
ಮಂಜೇರಿನಿನ್ನಂಜಾರ್ ಮೈಲಿದೂರವೇ ಮೋಜತ್ತಿಲ್
ಸಂಜರಿಕ್ಕುನ್ನೋರ್ಕ್ಕ್ ಕಾಣರಾಗುಮೊ ನಿರತ್ತಿಲ್
ಚತ್ತ್ ಪೋಯ ಹಿಚ್ ಕೋಕ್ ಸಾಹೀಬಿಂದೆ ಸ್ಮಾರಕಂ
ಚಾತ್ತನೆ ಕುಡಿವೆಚ್ಚಪೋಲೆ
ಆಬಲಾಲಿನ್ ಸ್ಮಾರಕಂ

* * * *

ರಾಜ್ಯ ಸ್ನೇಹಂ ವೀರ್ ಕೊಂಡೆ ಧೀರರುಂಡೀ ನಾಟ್ಟಿಲ್
ರಕ್ತವೇಣಂಗಿಲ್ ಮಂಡಿಕ್ಕೊಟ್ಟವರ್ ಇಂಗ್ಲೇಂಡಿಲ್"

(ಮಲಬಾರು ದಂಗೆಯನ್ನು ದಮನಿಸಿದ ಜಿಲ್ಲಾ ಪೋಲಿಸ್ ಉನ್ನತಾಧಿಕಾರಿ ಹಚ್‌ಕೋಕ್‌ನನ್ನು ಹೋರಾಟಗಾರರು ಕೊಂದುಹಾಕಿದರು.ಬ್ರಿಟಿಷ್ ಸರಕಾರವು ಅವರ ಹೆಸರಿನಲ್ಲಿ ಸ್ಮಾರಕವೊಂದನ್ನು ನಿರ್ಮಿಸಿತು. ಇದನ್ನು ನಾಶಮಾಡಬೇಕೆಂದು ಆಗ್ರಹಿಸಿ ನಡೆದ ಹೋರಾಟದಲ್ಲಿ ಭಾಗವಹಿಸಿದ ಕಂಬಳತ್ ಗೋವಿಂದನ್‌ನಾಯರ್ ಬರೆದ ಕವಿತೆ)

## ತಿರುವಾಂಕೂರು

1891ರಲ್ಲಿ ಮಲೆಯಾಳ ಮೆಮೋರಿಯಲ್‌ನೊಂದಿಗೆ ತಿರುವಾಂಕೂರಿನಲ್ಲಿ ರಾಷ್ಟ್ರೀಯ ಚಳವಳಿಯು ಆರಂಭವಾಯಿತು. ಸರಕಾರಿ ಉದ್ಯೋಗದಲ್ಲಿ ಅಗತ್ಯವಾದ ಪ್ರಾತಿನಿಧ್ಯವನ್ನು ತಿರುವಾಂಕೂರಿನವರಿಗೂ ಕೊಡಬೇಕೆಂದು ಬ್ಯಾರಿಸ್ಟರ್ ಜಿ.ಪಿ.ಪಿಳ್ಳೆಯ ನೇತೃತ್ವದಲ್ಲಿ ಹತ್ತು ಸಾವಿರಕ್ಕಿಂತಲೂ ಅಧಿಕ ಜನರು ಸಹಿಹಾಕಿದ ಮನವಿಯನ್ನು ಮಹಾರಾಜರಿಗೆ ಸಮರ್ಪಿಸಿದರು. ಇದನ್ನು ಮಲೆಯಾಳಿ ಮೆಮೋರಿಯಲ್ ಎಂದು ಕರೆಯುತ್ತಾರೆ. 1896ರಲ್ಲಿ ಡಾ. ಪಲ್ಪು ಈಳವರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಉಲ್ಲೇಖಿಸಿದ ಮನವಿಯಾದ ಈಳವ ಮೆಮೋರಿಯಲನ್ನು ಮಹಾರಾಜರಿಗೆ ಸಮರ್ಪಿಸಿದರು. ತಿರುವಾಂಕೂರು ದಿವಾನರನ್ನು ವಿಮರ್ಶಿಸಿದುದಕ್ಕೆ 'ಸ್ವದೇಶಾಭಿಮಾನಿ' ಪತ್ರಿಕೆಯ ಪ್ರಧಾನ ಸಂಪಾದಕರಾದ ರಾಮಕೃಷ್ಣ ಪಿಳ್ಳೆಯವರನ್ನು ಗಡೀಪಾರು ಮಾಡಿದ್ದು ರಾಜಕೀಯ ವಲಯದಲ್ಲಿ ದೊಡ್ಡ ರಾಜಕೀಯ ಸಂಚಲನೆಯನ್ನುಂಟುಮಾಡಿತು. ತಿರುವಾಂಕೂರಿನಾದ್ಯಂತ ವಿದ್ಯಾರ್ಥಿಗಳ ಹೋರಾಟಗಳು ಬೆಳೆದು ಬಂದುವು. ಸರಕಾರಿ ಉದ್ಯೋಗಗಳಲ್ಲಿಯೂ ವಿಧಾನಸಭೆಯಲ್ಲಿಯೂ ಜನಸಂಖ್ಯೆಗೆ ಆನುಪಾತಿಕವಾಗಿ ಮೀಸಲಾತಿ ಬೇಕು ಎಂಬ ಬೇಡಿಕೆಯೊಂದಿಗೆ ಕ್ರೈಸ್ತ, ಮುಸ್ಲಿಂ, ಈಳವ ಸಮುದಾಯದವರು 1932ರಲ್ಲಿ ನಿವರ್ತನಾ ಆಂದೋಲನವನ್ನು ಪ್ರಾರಂಭಿಸಿದರು. ಎನ್. ವಿ. ಜೋಸೆಫ್, ಪಿ.ಕೆ. ಕುಂಞ, ಸಿ. ಕೇಶವನ್ ಮುಂತಾದವರ ನೇತೃತ್ವದಲ್ಲಿ ಜವಾಬ್ದಾರಿಯುತ ಆಡಳಿತಕ್ಕಾಗಿರುವ ಈ ಹೋರಾಟವು ನಡೆಯಿತು. 1938ರಲ್ಲಿ ಪಟ್ಟಂತಾಣುಪಿಳ್ಳೆಯವರು ಅಧ್ಯಕ್ಷರಾಗಿ ತಿರುವಾಂಕೂರು ಸ್ಟೇಟ್‌ಕಾಂಗ್ರೆಸ್ ರೂಪುಗೊಳ್ಳುವುದರೊಂದಿಗೆ ತಿರುವಾಂಕೂರಿನಲ್ಲಿ ರಾಜಕೀಯ ಚಟುವಟಿಕೆಗಳು ಸಕ್ರಿಯವಾದುವು. ದಿವಾನರಾಗಿದ್ದ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್‌ರವರ ಆಡಳಿತ ಸುಧಾರಣೆಗಳಿಗೆದುರಾಗಿ 1946ರಲ್ಲಿ ನಡೆದ ಪುನಪ್ರ ವಯಲಾರ್ ಹೋರಾಟದ ಮೂಲಕ ಕಾರ್ಮಿಕರೂ ರಾಷ್ಟ್ರೀಯ ಚಳುವಳಿಗೆ ಪ್ರವೇಶಿಸಿದರು.

### ಪುನ್ನಪ್ರ ವಯಲಾರ್

"ತಿರುವಾಂಕೂರು ಪೌರ ಸ್ವಾತಂತ್ರ್ಯವನ್ನು ಪಡೆಯುವ ಹೋರಾಟವು ಆರಂಭವಾಗಿ ಹಲವು ಕಾಲವಾಯಿತು. ನಾಗರಿಕ ಸ್ವಾತಂತ್ರ್ಯ ಮತ್ತು ಜನಪರ ಆಡಳಿತವನ್ನು ಆಗ್ರಹಿಸಿ ಪುನ್ನಪ್ರ ಮತ್ತು ವಯಲಾರಿನಲ್ಲಿ ಕಾರ್ಮಿಕರು ಚಳವಳಿ ನಡೆಸಿದರು. 1938ರಲ್ಲಿ ಕಡಯ್‌ಕಲುಂ, ಪಾಂಗೋಡು, ಆಲಪ್ಪುಳ, ಕೊಲ್ಲಂನಲ್ಲಿರುವ ಚಳವಳಿಗಳು ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸುವುದರೊಂದಿಗೆ ಪುನ್ನಪ್ರದಲ್ಲಿಯೂ ವಯಲಾರಿನಲ್ಲಿಯೂ ನಡೆದ ಸಾಮೂಹಿಕ ಕಗ್ಗೊಲೆಗಳು ಸ್ವಾತಂತ್ರ್ಯದ ವೇಗವನ್ನು ತೀವ್ರಗೊಳಿಸಿದುವು".

**ಸಿ. ಕೇಶವನ್ (ಆಧಾರ: ಸಿ. ಕೇಶವನ್‌ನ ಭಾಷಣಗಳು)**




ಪಟ್ಟಂ ವಿ. ತಾಣುಪಿಳ್ಳೆ

ಎಂಡೆ ದೈವಂ ಕಲ್ಲು ಮರವುಮಲ್ಲ;
ಎಂಡೆ ರಾಜವ್ ಅಳಿಮತಿಕ್ಕಾರಾಯ ರಾಜಸೇವಕನ್ಮಾರುಮಲ್ಲ
ಎಂಡೆ ನಾಡುಕಡಕ್ಕುನ ರಾಜ ಸೇವಕನ್ಮಾರುಡೆ ಪೇರಿಲ್
ಭಕ್ತಿಯಿಲ್ಲೆನ ಕುಟ್ಟತ್ತಿನಾಣೆಂಗಿಲ್ ಆ ಶಿಕ್ಷಾನಿಯಮಂ
ಆ ಸೇವನ್ಮಾರುಡೆ ಮನೋರಾಜ್ಯತ್ತಿಲ್
ನಡಪ್ಪಾಕ್ಕ ಪೆಟ್ಟಿಟ್ಟುಳ್ಳ ವಗೆಯಾಯಿರಿಕ್ಕಾಂ
ತಿರುವಿದಾಂಕೂರ್ ರಾಜ್ಯತ್ತಿಲೇ ಶಿಕ್ಷಾನಿಯಮ ಪ್ರಕಾರಮಾಯಿರಿಕ್ಕಯಿಲ್ಲ
ಅಲ್ಲಂಗಿಲ್‌ತ್ತನೆ ನಾಡುಕಡತ್ತಲ್, ಕಾರಗ್ರಹಂ ಮುದಲಾಯ
ಶಿಕ್ಷಗಳೆ ಭಯಪಡೆಂಡ ಆವಶ್ಯಂ ಎನಿಕ್ಕಿಲ್ಲ.
ಞಾನ್ ಎಂದೆ ರಾಜ್ಯತ್ತಿಲೆ ನಿಯಮತ್ತೆಲಂಗಿಕ್ಕುನಿಲ್ಲ
ಆ ಶಿಕ್ಷಗಳೆ ಭಯಪಡೆಂಡವರ್, ಕೊಟ್ಟಾರಂಜಳಿಲ್
ಕೊಲಪಾತಕಮ್ ಚೈದು ಸಾದು ಜನಂಗಳೊಳುಡೆ
ಧನಾಪಹಾರಂ ಚೈದು, ಯಜಮಾನನ್ ಮಾರೆ ದ್ರೋಹಿಚ್ಚು
ಈಶ್ವರ ಸಂಕಲ್ಪತ್ತಿನು ವಿರುದ್ಧಮಾಯ ಮಟ್ಟು ಆಕೃತ್ಯಂಜಳ್
ಪ್ರವರ್ತಿಚುಮ್ ಪಾಪಕುಂಡಿಲ್ ಪದಿಚ್ಚಿರುಕ್ಕುನವರಾಣ್



ಕೆ. ರಾಮಕೃಷ್ಣ ಪಿಳ್ಳೆ

## ಕೊಚ್ಚಿ


ಇ. ಇಕ್ಕಂಡವಾರ್ಯರ್

ದಿವಾನ ಷಣ್ಮುಖಂ ಚೆಟ್ಟಿ ವಿದ್ಯುತ್ ವಿತರಣೆಯ ಜವಾಬ್ದಾರಿಯನ್ನು ಖಾಸಗಿ ಕಂಪೆನಿಗೆ ವಹಿಸಿದ್ದರ ವಿರುದ್ಧವಾಗಿ ನಡೆದ ಇಲೆಕ್ಟ್ರಿಸಿಟಿ ಚಳವಳಿ(1936)ಯ ಮೂಲಕ ಕೊಚ್ಚಿಯಲ್ಲಿ ಜವಾಬ್ದಾರಿಯುತ ಆಡಳಿತಕ್ಕಾಗಿ ಪ್ರತಿಭಟನೆಗಳು ಆರಂಭಗೊಂಡುವು. ಆದರೆ ತಿರುವಾಂಕೂರಿನಂತೆ ಕೊಚ್ಚಿಯಲ್ಲಿ ಪ್ರತಿಭಟನೆಯು ಪ್ರಬಲವಾಗಿರಲಿಲ್ಲ. 1941ರಲ್ಲಿ ಎಸ್.ನೀಲಕಂಠ ಐಯರ್, ವಿ.ಆರ್.ಕೃಷ್ಣನೆಳುತ್ತಚ್ಚನ್ ಎಂಬಿವರ ನೇತೃತ್ವದಲ್ಲಿ ಕೊಚ್ಚಿ ರಾಜ್ಯ ಪ್ರಜಾಮಂಡಲ ರೂಪುಗೊಂಡ ಮೇಲೆ ರಾಷ್ಟ್ರೀಯ ಚಳವಳಿಯು ಪ್ರಬಲವಾಯಿತು. ಇ.ಇಕ್ಕಂಡವಾರ್ಯರ್, ಪನಂಬಿಳ್ಳಿ ಗೋವಿಂದಮೆನೋನ್, ಕೆ. ಅಯ್ಯಪ್ಪನ್ ಮೊದಲಾದವರು ಕೊಚ್ಚಿ ರಾಜ್ಯ ಪ್ರಜಾಮಂಡಲದ ಚಟುವಟಿಕೆಗಳಿಗೆ ನೇತೃತ್ವ ವಹಿಸಿದರು.



**ಮಲಬಾರು, ತಿರುವಾಂಕೂರು, ಕೊಚ್ಚಿ ಮುಂತಾದೆಡೆಗಳಲ್ಲಿ ನಡೆದ ಪ್ರಧಾನ ರಾಷ್ಟ್ರೀಯ ಚಳವಳಿಗಳನ್ನು ಒಳಗೊಂಡ ಚಾರ್ಟನ್ನು ತಯಾರಿಸಿರಿ.**

*ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯೂ ತೀರಾ ಹದಗೆಟ್ಟಿದೆ. ಒಂದು ಬದಿಯಲ್ಲಿ ಕುಬೇರರು ಸುಖವನ್ನು ಅನುಭವಿಸುತ್ತಿರುವಾಗ ಮತ್ತೊಂದು ಬದಿಯಲ್ಲಿ 80 ಶೇಕಡಾ ಜನರು ಬಡತನವನ್ನು ಅನುಭವಿಸುತ್ತಿದ್ದಾರೆ. ಈ ಆರ್ಥಿಕ ವ್ಯವಸ್ಥೆಯಿಂದಾಗಿ ನಮ್ಮ ಜನರು ಹಸಿವೆಯಿಂದಲೂ ಬಡತನದಿಂದಲೂ ದಿನಕಳೆಯುತ್ತಿದ್ದಾರೆ. ಈ ಆರ್ಥಿಕ ಸ್ಥಿತಿಗತಿಯು ಬದಲಾಗದೆ ತಿರುವಾಂಕೂರಿನಲ್ಲಿ ಆಡಳಿತ ಮಾಡುವುದು ಸಾಧ್ಯವಿಲ್ಲ. ಸರಿಯಾದ ವ್ಯವಸ್ಥೆಯ ಮೂಲಕ ಮಾತ್ರವೇ ಆರ್ಥಿಕ ವ್ಯವಸ್ಥೆಯು ಬದಲಾವಣೆಗೊಳ್ಳಬಹುದು. ಭಾವೀ ತಿರುವಾಂಕೂರು ಒಂದು ಸೋಶಿಯಲಿಸ್ಟ್ ತಿರುವಾಂಕೂರು ಆದರೆ ಮಾತ್ರವೇ ಅದು ನೆಲೆಗೊಳ್ಳಲು ಸಾಧ್ಯವಾಗಬಹುದು. ರಕ್ತಪಾತದಿಂದ ಅದು ಬದಲಾಗಬೇಕೆಂದು ನಾನು ಭಾವಿಸುವುದಿಲ್ಲ. ಯಾವುದೇ ಆರ್ಥಿಕ ನೀತಿಯೂ ಶಾಂತಿಯುತವಾಗಿರಬೇಕು.*

***ಆಧಾರ: ವರ್ಕಲದ ಕ್ಷೇತ್ರ ಮೈದಾನದಲ್ಲಿ ಸೇರಿದ ಪ್ರಾಂತ್ಯ ಕಾಂಗ್ರೆಸ್ ಸಮ್ಮೇಳನದಲ್ಲಿ ಮಿಸ್. ಅನಿಮಸ್ಕ್ರೀನ್‌ನವರ ಭಾಷಣ (ಸ್ವಾತಂತ್ರ್ಯ ಹೋರಾಟಗಾರರ ಆಯ್ದ ಭಾಷಣಗಳು, ರಾಜ್ಯ ಪುರಾತತ್ವ ಇಲಾಖೆ)***

## ರಾಷ್ಟ್ರೀಯ ಚಳವಳಿ ಮತ್ತು ಮಹಿಳೆಯರು



ಎ.ವಿ. ಕುಟ್ಟಿಮಾಳು ಅಮ್ಮ

ಮೇಲೆ ನೀಡಿರುವ ಭಾಷಣದ ಭಾಗವನ್ನು ಓದಿದಿರಲ್ಲವೇ. ಕೇರಳದಾದ್ಯಂತ ಅನೇಕ ಮಹಿಳೆಯರು ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸುವುದರೊಂದಿಗೆ ಕೇರಳದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ವ್ಯಕ್ತಪಡಿಸಿದರು. ವಿದೇಶಿ ಬಟ್ಟೆ ಬಹಿಷ್ಕಾರ, ಮದ್ಯದ ಅಂಗಡಿಗಳ ಪಿಕೆಟಿಂಗ್, ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ, ಖಾದಿ ಪ್ರಚಾರ ಇತ್ಯಾದಿಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಕಾಣಬಹುದಿತ್ತು. 1931ರಲ್ಲಿ ಕಾಂಗ್ರೆಸ್‌ನ ವಡಗರ ಸಮ್ಮೇಳನದ ಭಾಗವಾಗಿ


ಅಕ್ಕಮ್ಮ ಚೆರಿಯಾನ್


ಅನಿಮಸ್ಕ್ರೀನ್

ಮಹಿಳಾ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಅದು ಕೇರಳದ ಪ್ರಪ್ರಥಮ ಮಹಿಳಾ ಸಮ್ಮೇಳನವಾಗಿತ್ತು. ಮಲಬಾರಿನಲ್ಲಿ ಎ.ವಿ.ಕುಟ್ಟಿಮಾಳುಅಮ್ಮ, ತಿರುವಾಂಕೂರಿನಲ್ಲಿ ಅಕ್ಕಮ್ಮ ಚೆರಿಯಾನ್, ಅನಿಮಸ್ಕ್ರೀನ್ ಮುಂತಾದವರು ರಾಷ್ಟ್ರೀಯ ಚಳವಳಿಗೆ ನೇತೃತ್ವವಹಿಸಿದ ಮಹಿಳೆಯರಾಗಿದ್ದರು.



**ಕೌಮುದಿಯ ಕುರಿತು ಗಾಂಧೀಜಿ**



"ಹರಿಜನೋದ್ಧಾರದ ಭಾಗವಾಗಿ ನಾನು ವಡಗರದಲ್ಲಿ ಮಾತನಾಡುವಾಗ ಆಭರಣಗಳನ್ನು ದಾನ ಮಾಡಬೇಕೆಂದು ಮಹಿಳೆಯರೊಂದಿಗೆ ಭಿನ್ನವಿಸಿಕೊಂಡೆನು". ಭಾಷಣವು ಮುಗಿದ ತಕ್ಷಣ 16ರ ಪ್ರಾಯದ ಕೌಮುದಿ ಎಂಬ ಹುಡುಗಿ ವೇದಿಕೆಯನ್ನು ಹತ್ತಿ ಬಂದಳು. ಅವಳು ತನ್ನ ಕೈಯಲ್ಲಿನ ಚಿನ್ನದ ಬಳೆಯನ್ನು ಕಳಚಿ ನನಗೆ ನೀಡಿ ಆಟೋಗ್ರಾಫ್ ಬರೆಸಿಕೊಂಡಳು. ನಾನು ಆಟೋಗ್ರಾಫ್ ಕೊಡಲು ಸಿದ್ಧವಾಗುವಷ್ಟರಲ್ಲಿ ಅವಳು ಮತ್ತೊಂದು ಕೈಯಲ್ಲಿನ ಬಳೆಯನ್ನೂ ಕಳಚಿ ನೀಡಿದಳು. "ನೀನು ಎರಡು ಬಳೆಗಳನ್ನು ನೀಡಬೇಕಾಗಿಲ್ಲ" ನಾನೆಂದೆನು. ಅದಕ್ಕೆ ಉತ್ತರವಾಗಿ ಅವಳು ತನ್ನ ಚಿನ್ನದ ನೆಕ್ಲೇಸನ್ನು ಕುತ್ತಿಗೆಯಿಂದ ತೆಗೆದು ನೀಡಿದಳು. ಸೇರಿದವರ ಆನಂದೋತ್ಸಾಹದ ಘೋಷಣೆಯ ನಡುವೆ ಅವಳು ತನ್ನ ಕಿವಿಯೋಲೆಗಳನ್ನೂ ಕಳಚಿ ನೀಡಿದಳು. ಈ ಆಭರಣಗಳಿಗೆ ಬದಲಾಗಿ ಹೊಸ ಆಭರಣಗಳನ್ನು ಖರೀದಿಸಿ ಧರಿಸಬೇಕಾಗಿಲ್ಲ ಎಂದು ನಾನು ಸೂಚಿಸಿದೆನು. "ನೀನು ಉಪೇಕ್ಷಿಸಿದ ಆಭರಣಗಳಿಗಿಂತಲೂ ನಿನ್ನ ತ್ಯಾಗವು ಸತ್ಯಸಂಧತೆಯಿಂದ ಕೂಡಿದ ಬಹುದೊಡ್ಡ ಆಭರಣ".

## ಐಕ್ಯ ಕೇರಳದ ಕಡೆಗೆ

ಒಂದೇ ಭಾಷೆಯನ್ನು ಮಾತನಾಡುವುದಾದರೂ ಮಲೆಯಾಳಿಗಳು ಮೂರು ವಿಭಿನ್ನ ಆಡಳಿತ ವಲಯಗಳಲ್ಲಿ ಸೇರಿಕೊಂಡಿದ್ದರು. 1920ರಲ್ಲಿ ನಾಗಪುರದಲ್ಲಿ ಸೇರಿದ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಷೆಯ ಆಧಾರದಲ್ಲಿ ರಾಜ್ಯ ಕಾಂಗ್ರೆಸ್ ಸಮಿತಿಗಳನ್ನು ರೂಪಿಸಲು ತೀರ್ಮಾನಿಸಿತು. ಇದರ ಆಧಾರದಲ್ಲಿ 1921 ಎಪ್ರಿಲ್ 23ರಿಂದ 26ರವರೆಗೆ ಒಟ್ಟಪಾಲಂನಲ್ಲಿ ಪ್ರಥಮ ಕೇರಳ ಪ್ರಾಂತ್ಯ ರಾಜಕೀಯ ಸಮ್ಮೇಳನ ನಡೆಯಿತು. ಆಂಧ್ರಕೇಸರಿ ಎಂದು ಕರೆಯಲ್ಪಡುವ ಬ್ಯಾರಿಸ್ಟರ್ ಟಿ. ಪ್ರಕಾಶ ಈ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಂತರ ಮಲಬಾರು, ಕೊಚ್ಚಿ, ತಿರುವಾಂಕೂರು ಪ್ರದೇಶಗಳನ್ನು ಸೇರಿಸಿಕೊಂಡು ಕೇರಳ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ರೂಪುಗೊಂಡಿತು.



ಇ.ಎಂ.ಎಸ್. ನಂಬೂದಿರಿಪ್ಪಾಡ್

ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಸೇರಿದ ಪಯ್ಯನ್ನೂರ್ ಕಾಂಗ್ರೆಸ್ ಸಮ್ಮೇಳನದಲ್ಲಿ ಸ್ವಾತಂತ್ರ್ಯದ ನಂತರ ಕೇರಳವನ್ನು ಪ್ರತ್ಯೇಕ ಪ್ರಾಂತ್ಯವಾಗಿ ಪುನಃಸಂಘಟಿಸಬೇಕೆಂಬ ಬೇಡಿಕೆಯನ್ನು ಮಂಡಿಸಲಾಯಿತು. 1947ರಲ್ಲಿ ಕೆ. ಕೇಳಪ್ಪನ್‌ರ ಅಧ್ಯಕ್ಷತೆಯಲ್ಲಿ ತ್ರಿಶೂರಿನಲ್ಲಿ ಸೇರಿದ ಐಕ್ಯಕೇರಳ ಸಮ್ಮೇಳನದಲ್ಲಿಯೂ ಸ್ವಾತಂತ್ರ್ಯಾನಂತರ ಆಲುವಾದಲ್ಲಿ ಸೇರಿದ ಐಕ್ಯ ಕೇರಳ ಸಮ್ಮೇಳನದಲ್ಲಿಯೂ ಐಕ್ಯಕೇರಳ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಇದರ ನಂತರ 1949 ಜುಲೈ 1ರಲ್ಲಿ ತಿರುವಾಂಕೂರು ಮತ್ತು ಕೊಚ್ಚಿಯನ್ನು ಸಂಯೋಜಿಸಿ 'ತಿರುಕೊಚ್ಚಿ' ರಾಜ್ಯವನ್ನು ರೂಪಿಸಲಾಯಿತು. ಮಲೆಯಾಳ ಮಾತನಾಡುವ ಪ್ರದೇಶಗಳನ್ನು ಸೇರಿಸಿಕೊಂಡು ಕೇರಳ ರಾಜ್ಯವನ್ನು ರೂಪೀಕರಿಸಬೇಕೆನ್ನುವ ವಾದವನ್ನು ಇ.ಎಂ.ಎಸ್. ನಂಬೂದಿರಿಪ್ಪಾಡ್ ತನ್ನ ಗ್ರಂಥವಾದ 'ಒನ್ನೇಕಾಲ್ ಕೋಟಿ ಮಲೆಯಾಳಿಗಳ್'ನ ಮೂಲಕ ಮುಂದಿಟ್ಟರು. ಭಾಷೆಗಳ ಆಧಾರದಲ್ಲಿ ರಾಜ್ಯಗಳ ರೂಪೀಕರಣವಾಗಬೇಕು ಎನ್ನುವ ಹೋರಾಟವು ರಾಷ್ಟ್ರದಾದ್ಯಂತ




ವ್ಯಾಪಕವಾದಾಗ ಕೇಂದ್ರಸರಕಾರವು ಪ್ರಾಂತ್ಯ ಪುನರ್ವಿಂಗಡನಾ ಆಯೋಗವನ್ನು ರೂಪಿಸಿತು. ಕಮಿಷನ್‌ನ ಶಿಫಾರಸಿನಂತೆ ಮಲಬಾರು, ತಿರುವಾಂಕೂರು, ಕೊಚ್ಚಿಯನ್ನು ಸೇರಿಸಿಕೊಂಡು 1956 ನವೆಂಬರ್ 1 ರಂದು ಕೇರಳ ಪ್ರಾಂತ್ಯವನ್ನು ರೂಪಿಸಲಾಯಿತು.

ತಿರುವಾಂಕೂರಿನ ಭಾಗವಾಗಿದ್ದ ತೋವಾಳ, ಅಗಸ್ತೀಶ್ವರ, ಕಲ್‌ಕುಳಂ, ವಿಳವನ್‌ಕೋಡ್ ಎಂಬೀ ತಾಲೂಕುಗಳನ್ನು ಮದ್ರಾಸ್ ರಾಜ್ಯಕ್ಕೆ ಬಿಟ್ಟುಕೊಡಬೇಕಾಯಿತು. ದಕ್ಷಿಣ ಕನ್ನಡದ ಭಾಗವಾಗಿದ್ದ ಕಾಸರಗೋಡು, ಹೊಸದುರ್ಗ ತಾಲೂಕುಗಳನ್ನು ಕೇರಳಕ್ಕೆ ಸೇರಿಸಲಾಯಿತು.

ಪ್ರಾಂತ್ಯ ರೂಪೀಕರಣಕ್ಕೆ ಸಂಬಂಧಿಸಿದ ವಿವಿಧ ಘಟನಾವಳಿಗಳನ್ನು ಒಳಪಡಿಸಿ ಡಿಜಿಟಲ್ ಅಸೈನ್‌ಮೆಂಟ್ ಒಂದನ್ನು ತಯಾರಿಸಿರಿ.

### ಐಕ್ಯಕೇರಳ ಪ್ರತಿಜ್ಞೆ

ಮೂನಾಯಿ ಮರಿಂಞ್ಞ್ ಕಿಡಕುಮ್ ಈ ಕೇರಳಂ
ಒನ್ನಾಕುಮೆನ್ನಾಯಿ ಪ್ರತಿಜ್ಞಾ ಚೈಯುನ್ನು ನಾಮ್
ನೂಟಿರುವತ್ತಂಜಿ ಲಕ್ಷಮ್ ಕರಳ್ ಗಳಿಲ್
ಒತ್ತುತುಡಿಪತ್ತಿ ಸತ್ಯಾಕ್ಷರಾಂಜಳಾಮ್
ರಂಡರ ಕೋಡಿ ಬಲಿಷ್ಠ ಹಸ್ತಂಜಗಳೀ
ಸಂಗರತ್ತಿಕ್ಕೆಳುಂಡಾಯುದಮೆತ್ತುವಾನ್
ದೈರ್ಯಮುಂಡೆಂಗಿಲೆದಿರ್ತಿ ನಿಲ್ಕಟ್ಟೆ
ದೈವಾಧಿಕಾರಮ್ ಸಂಧಿ ಪಳಮೆಯುಮ್
ಶಕ್ತಿಯುಂಡೆಂಗಿಲೆದಿರ್ತಿ ನಿಲ್ಕಟ್ಟೆ
ಧಿಕ್ಕಾರಕಾಪಟ್ಯ ಮರ್ದನ ಶಕ್ತಿಗಳ್
ಸ್ವೇಚ್ಛಾಧಿಪತ್ಯತಗರ್ತುರ್, ಬಹುಜನ
ಸ್ವಚ್ಛಂದವಾಳ್ವ ನಡಪ್ಪಾಕುಮಿಂಜುನಾಂ
ಒಟ್ಟಜನಸಭಾ, ಒಟ್ಟನೀತಿ ನ್ಯಾಯಂ
ಒಟ್ಟ ಸರ್ಕಾರಿನೀಕೇರಳ ಭೂಮಿಯಿಲ್

**ಎನ್. ಪಿ. ಕೃಷ್ಣ ವಾರಿಯರ್**

ಐಕ್ಯಕೇರಳದ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ಅವಲೋಕಿಸಿರಿ.

ಭೂಸುಧಾರಣೆ, ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ, ವಿಕೇಂದ್ರೀಕರಣ ಯೋಜನೆ ಮುಂತಾದ ವಲಯಗಳಲ್ಲಿ ಕೇರಳವು ಗಳಿಸಿರುವ ಸಾಧನೆಗಳನ್ನು ವಿವಿಧ ಮೂಲಗಳಿಂದ ಕಂಡುಹಿಡಿದು ಒಂದು ಸಂಚಿಕೆ ತಯಾರಿಸಿರಿ.

## ಕೇರಳ ಆಧುನಿಕತೆಯೆಡೆಗೆ

- **ಯುರೋಪಿಯನರ ಆಗಮನ**
  - ಪೋರ್ಚುಗೀಸರು, ಡಚ್ಚರು, ಇಂಗ್ಲಿಷರು, ಫ್ರೆಂಚರು
- **ಆರಂಭಕಾಲದ ಪ್ರತಿಭಟನೆಗಳು**
  - ಪಳಶ್ಶಿರಾಜ, ವೇಲುತಂಬಿ, ಪಾಲಿಯತ್ತಚ್ಚನ್
- **ಆರ್ಥಿಕ ಬದಲಾವಣೆಗಳು**
  - ಜಾಗತಿಕ ಮಾರುಕಟ್ಟೆಯ ಭಾಗವಾಯಿತು. ಭೂಸಂಬಂಧಗಳಲ್ಲಿ ಉಂಟಾದ ಬದಲಾವಣೆಗಳು, ಕೃಷಿಯ ವಾಣಿಜ್ಯೀಕರಣ, ಉದ್ದಿಮೆಗಳ ಬೆಳವಣಿಗೆ
- **ಸಾಂಸ್ಕೃತಿಕ ಸಾಮಾಜಿಕ ರಂಗಗಳ ಬದಲಾವಣೆಗಳು**
  - ಶಿಕ್ಷಣ ನಿಯಮ, ಆರೋಗ್ಯ, ಸಾಮಾಜಿಕ ಸುಧಾರಣಾ ಚಳವಳಿಗಳು, ವೈಕ್ಕಂ ಸತ್ಯಾಗ್ರಹ, ಗುರುವಾಯೂರ್ ಸತ್ಯಾಗ್ರಹ, ದೇವಾಲಯ ಪ್ರವೇಶ ಘೋಷಣೆ
- **ರಾಷ್ಟ್ರೀಯ ಚಳವಳಿ**
  - ಅಸಹಕಾರ ಚಳವಳಿ, ನಿಯಮೋಲ್ಲಂಘನಾ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ, ಐಕ್ಯಕೇರಳ



## ಮೌಲ್ಯನಿರ್ಣಯ ಮಾಡುವ

- 'ಎ' ವಿಭಾಗದಲ್ಲಿರುವವುಗಳಿಗೆ ಸರಿಹೊಂದುವವುಗಳನ್ನು 'ಬಿ' ವಿಭಾಗದಿಂದ ಆರಿಸಿ ಬರೆಯಿರಿ.

| | |
|---|---|
| • ಪೋರ್ಚುಗೀಸ್<br>• ಡಚ್<br>• ಫ್ರೆಂಚ್<br>• ಬ್ರಿಟಿಷ್ | • ಅಟ್ಟಿಂಗಲ್ ದಂಗೆ<br>• ಕರ್ನಾಟಿಕ್ ಯುದ್ಧಗಳು<br>• ಕುಳಚ್ಚಲ್ ಯುದ್ಧ<br>• ಕುಂಞಾಲಿ ಮರಕ್ಕಾರರ ಹೋರಾಟ |

- ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಕೇರಳದಲ್ಲಿ ಆಧಿಪತ್ಯವನ್ನು ಸ್ಥಾಪಿಸಿದುದು ಹೇಗೆ?
- ಬ್ರಿಟಿಷ್ ಆಡಳಿತಕಾಲದಲ್ಲಿ ಕೇರಳದ ವ್ಯಾಪಾರ, ಉದ್ಯಮ, ಕೃಷಿ ಮೊದಲಾದ ಕ್ಷೇತ್ರಗಳಲ್ಲಿ ಉಂಟಾದ ದುಷ್ಪರಿಣಾಮಗಳನ್ನು ವಿಶ್ಲೇಷಿಸಿರಿ.
- ಕೆಳಗೆ ನೀಡಿರುವ ಘಟನೆಗಳಿಗೆ ಸಂಬಂಧಿಸಿದ ವ್ಯಕ್ತಿಗಳನ್ನು ಆವರಣದಿಂದ ಗುರುತಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.
  - ಕುಂಡರ ಘೋಷಣೆ ......................................

NT-911-6-SOC.SCI.-I-10-K-VOL.2

- ವೈಕ್ಕಂ ಸತ್ಯಾಗ್ರಹ ......................................
- ಗುರುವಾಯೂರು ಸತ್ಯಾಗ್ರಹ ......................................
- ಕಿಳರಿಯೂರು ಬಾಂಬ್ ಪ್ರಕರಣ ......................................
- ಮಲೆಯಾಳಿ ಮೆಮೋರಿಯಲ್ ......................................

(ಡಾ. ಪಲ್ಪು, ಜಿ.ಪಿ. ಪಿಳ್ಳೈ, ಪಳಶ್ಶೀರಾಜ, ಕೆ. ಕೇಳಪ್ಪನ್, ಕೆ.ಬಿ. ಮೆನೋನ್, ಶ್ರೀ ನಾರಾಯಣಗುರು, ವೇಲುತಂಬಿ ದಳವ, ಟಿ.ಕೆ. ಮಾಧವನ್)


- ಕೇರಳದಲ್ಲಿ ಬೇರೂರಿದ್ದ ಸಾಮಾಜಿಕ ಅಸಮಾನತೆ, ಅನಾಚಾರಗಳನ್ನು ಕೊನೆಗೊಳಿಸುವುದಕ್ಕಾಗಿ ಬೆಳೆದುಬಂದ ಸಮಾಜ ಸುಧಾರಣಾ ಚಳವಳಿಗಳು ಯಾವುವು? ಪಟ್ಟಿ ಮಾಡಿರಿ.
- ಕೇರಳದಲ್ಲಿ ನಡೆದ ರಾಷ್ಟ್ರೀಯ ಚಳವಳಿಗೆ ಏಕರೂಪತೆಯಿರಲಿಲ್ಲ. ಕಾರಣಗಳೇನು?
- ಐಕ್ಯಕೇರಳದ ರೂಪೀಕರಣದೆಡೆಗೆ ಮುನ್ನಡೆಸಿದ ಘಟನೆಗಳನ್ನು ವಿವರಿಸಿರಿ.

## ಮುಂದುವರಿದ ಚಟುವಟಿಕೆಗಳು

- ಕೇರಳದಲ್ಲಿ ಬ್ರಿಟಿಷರಿಗೆದುರಾಗಿ ನಡೆದ ಆರಂಭಕಾಲದ ಪ್ರತಿಭಟನೆಗಳಾದ ಅಟ್ಟಿಂಗಲ್ ದಂಗೆ, ಪಳಶ್ಶೀರಾಜ, ವೇಲುತಂಬಿ ದಳವ ಮತ್ತು ಪಾಲಿಯತ್ತಚ್ಚನ್ ಮೊದಲಾದವರ ಹೋರಾಟಗಳ ಆಧಾರದಲ್ಲಿ ನಾಟಕವೊಂದನ್ನು ರಚಿಸಿ ತರಗತಿಯಲ್ಲಿ ಮಂಡಿಸಿರಿ.
- ಬ್ರಿಟಿಷ್ ಆಡಳಿತ ಕಾಲದಲ್ಲಿ ಕೇರಳದ ಸಾಂಸ್ಕೃತಿಕ ರಂಗದಲ್ಲಿ ಉಂಟಾದ ಬದಲಾವಣೆಗಳ ಕುರಿತು ಸೆಮಿನಾರ್ ಪ್ರಬಂಧವೊಂದನ್ನು ತಯಾರಿಸಿರಿ.

  ಒಳಪಡಬೇಕಾದ ವಲಯಗಳು:

  - ಮುದ್ರಣ ಮತ್ತು ಶಿಕ್ಷಣ
  - ಆರೋಗ್ಯ
  - ಕಾನೂನುಗಳು ಮತ್ತು ನ್ಯಾಯನಿರ್ವಹಣೆ
  - ಉತ್ತರಾಧಿಕಾರ
- ಕೇರಳದಲ್ಲುಂಟಾದ ಸಮಾಜ ಸುಧಾರಣಾ ಚಳವಳಿಗಳ ಕುರಿತು ಮತ್ತು ಸಾಮಾಜಿಕ ಬದಲಾವಣೆಗಾಗಿ ನಡೆದ ಚಳವಳಿಗಳ ಕುರಿತು ಐ.ಸಿ.ಟಿ. ಸಾಧ್ಯತೆಗಳ ಸಹಾಯದಿಂದ ಮಾಹಿತಿಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ಒಂದನ್ನು ತಯಾರಿಸಿರಿ.



ಅಧ್ಯಾಯ

09

# ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ

*ಇದು ನಮಗೆ ಲಭಿಸಿದ ಪುನರ್ಜನ್ಮ. ಬದುಕಿ ಊರಿಗೆ ಹಿಂತಿರುಗಿ ಬರಲು ಸಾಧ್ಯವಾಗಬಹುದೆಂದು ಯಾವುದೇ ನಿರೀಕ್ಷೆಯು ಇರಲಿಲ್ಲ. ನಮ್ಮನ್ನು ಬಿಡುಗಡೆಗೊಳಿಸುವುದಕ್ಕಾಗಿ ಕಾರ್ಯಾಚರಣೆ ನಡೆಸಿದ ಭಾರತ ಸರಕಾರ ಹಾಗೂ ಇತರ ಎಲ್ಲರಿಗೂ ನಾವು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವೆ. ಇದು ಭಾರತದ ಪೌರನಾಗಿರುವುದಕ್ಕೆ ಹೆಮ್ಮೆ ಪಡುವ ಕ್ಷಣವಾಗಿದೆ.*

ಇದು ಸಿರಿಯಾ ದೇಶದ ಆಂತರಿಕ ಕಲಹದಲ್ಲಿ ಸಿಲುಕಿ ಊರಿಗೆ ಹಿಂತಿರುಗಲು ಅಸಾಧ್ಯವಾದ ಭಾರತೀಯ ದಾದಿಯರನ್ನು ರಾಷ್ಟ್ರವು ಐಕ್ಯತೆಯಿಂದ ಕಾರ್ಯನಿರತವಾಗಿ ಹಿಂದಕ್ಕೆ ಕರೆದುತಂದಾಗ ದಾದಿಯರು ವ್ಯಕ್ತಪಡಿಸಿದ ಪ್ರತಿಕ್ರಿಯೆಯಾಗಿದೆ. ಇದೇ ರೀತಿಯ ಘಟನೆಗಳ ಕುರಿತು ನಿಮಗೂ ತಿಳಿದಿರಬಹುದಲ್ಲವೇ. ರಾಷ್ಟ್ರವು ಯಾವಾಗಲೂ ಜನರ ಜೀವಕ್ಕೆ, ಆಸ್ತಿಯ ಸಂರಕ್ಷಣೆಗೆ, ಜನಕ್ಷೇಮ ಚಟುವಟಿಕೆಗಳನ್ನು ಜಾರಿಗೊಳಿಸಲು ಮತ್ತು ಮೇಲೆ ಸೂಚಿಸಿದ ಘಟನೆಗೆ ಸಮಾನವಾದ ಬಿಕ್ಕಟ್ಟುಗಳ ಸಂದರ್ಭಗಳಲ್ಲಿ ಫಲಪ್ರದವಾಗಿ ಕಾರ್ಯನಿರ್ವಹಿಸಲು ಸಾಧ್ಯವಿರುವ ಏಕೈಕ ಸಂಸ್ಥೆಯಾಗಿದೆ. ಆದುದರಿಂದ ರಾಷ್ಟ್ರವೆಂಬುದು ನಾವು ರೂಪಿಸಿದ ಸಾಮಾಜಿಕ – ರಾಜಕೀಯ ಸಂಸ್ಥೆಗಳಲ್ಲಿ ಅತ್ಯಂತ ಪ್ರಧಾನವಾದುದಾಗಿದೆ.


ನಿಕೊಲೊ ಮಾಕ್ಯುವೆಲ್ಲಿ

ರಾಷ್ಟ್ರವು ಸಾರ್ವತ್ರಿಕವಾದ, ಬಲಿಷ್ಠವಾದ ಹಾಗೂ ಅನಿವಾರ್ಯವಾದ ಒಂದು ಸಂಸ್ಥೆಯಾಗಿದೆ. ಮನುಷ್ಯನು ಸ್ಥಿರವಾಸ ಆರಂಭಿಸಿದ ನಂತರ ರಾಷ್ಟ್ರವು ರೂಪುಗೊಂಡಿತು. ವಿವಿಧ ರೂಪ ಮತ್ತು ರಚನೆಯಿಂದ ಕೂಡಿದ ರಾಷ್ಟ್ರವು ಎಲ್ಲ ಕಾಲದಲ್ಲೂ ನೆಲೆನಿಂತಿರುವುದಾಗಿ ಇತಿಹಾಸದಿಂದ ನಮಗೆ ತಿಳಿಯಬಹುದು. ರಾಷ್ಟ್ರ ಎಂಬ ಪದ ಮೊದಲಾಗಿ ಉಪಯೋಗಿಸಿದುದು ಪಾಶ್ಚಾತ್ಯ ಚಿಂತಕನಾದ ನಿಕೊಲೊ ಮಾಕ್ಯುವೆಲ್ಲಿಯಾಗಿದ್ದಾನೆ.

## ರಾಷ್ಟ್ರ ಎಂದರೇನು?

FES7CJ

ರಾಷ್ಟ್ರವೆಂದರೆ ಒಂದು ನಿಶ್ಚಿತ ಭೂಪ್ರದೇಶದಲ್ಲಿ ಸ್ಥಿರವಾಗಿ ವಾಸಿಸುವ ಹಾಗೂ ಅಧಿಕಾರವಿರುವ ಸರಕಾರದಿಂದ ಕೂಡಿದ ಜನತೆಯಾಗಿದೆ.

ಮೇಲೆ ನೀಡಿರುವ ನಿರ್ವಚನೆಯಿಂದ ಒಂದು ರಾಷ್ಟ್ರಕ್ಕೆ ಇರಬೇಕಾದ ಮೂಲಭೂತ ಘಟಕಗಳು ಯಾವುವು ಎಂದು ಕಂಡುಹಿಡಿಯಲು ಪ್ರಯತ್ನಿಸಿರಿ.

- ಜನರು
- 
- 
- 

## ಜನಸಂಖ್ಯೆ (Population)

ಜನತೆಯು ರಾಷ್ಟ್ರ ರೂಪೀಕರಣದ ಅನಿವಾರ್ಯಘಟಕಗಳಲ್ಲಿ ಒಂದಾಗಿದೆ. ಪರಸ್ಪರ ಹೊಂದಾಣಿಕೆ, ಪರಸ್ಪರಾವಲಂಬನೆ, ಸಾರ್ವಜನಿಕ ಹಿತಾಸಕ್ತಿ ಎಂಬಿವುಗಳ ಆಧಾರದಲ್ಲಿ ಜನರು ಒಂದುಗೂಡಿ ಕಾರ್ಯನಿರ್ವಹಿಸುವುದು ರಾಷ್ಟ್ರದ ಅಸ್ತಿತ್ವಕ್ಕೆ ಅನಿವಾರ್ಯವಾಗಿದೆ. ಜನರಿಲ್ಲದೆ ರಾಷ್ಟ್ರವಿಲ್ಲ. ಆದರೆ ಒಂದು ರಾಷ್ಟ್ರದಲ್ಲಿ ಇರಬೇಕಾದ ಅತೀ ಕಡಿಮೆ ಜನಸಂಖ್ಯೆ ಎಷ್ಟು ಹಾಗೂ ಗರಿಷ್ಠ ಎಷ್ಟೆಂಬುದನ್ನು ನಿರ್ಧರಿಸಲಿಲ್ಲ. ಅತೀ ಕಡಿಮೆ ಜನಸಂಖ್ಯೆ ಹಾಗೂ ಅಮಿತ ಜನಸಂಖ್ಯೆಯು ರಾಷ್ಟ್ರಕ್ಕೆ ಒಳಿತಲ್ಲ. ಇದು ರಾಷ್ಟ್ರದ ಅಭಿವೃದ್ಧಿಯನ್ನು ಪ್ರತಿಕೂಲವಾಗಿ ಬಾಧಿಸುತ್ತದೆ. ಜನಸಂಖ್ಯೆ ಕಡಿಮೆಯಾದ ಕೆನಡಾವು ವಲಸೆಯನ್ನು ಪ್ರೋತ್ಸಾಹಿಸುತ್ತದೆ. ಮಾನವ ಸಂಪನ್ಮೂಲದ ಕೊರತೆಯೇ ಇದಕ್ಕೆ ಕಾರಣ. ಆದರೆ ಅಧಿಕ ಜನಸಂಖ್ಯೆಯು ನಿರುದ್ಯೋಗ ಹಾಗೂ ಬಡತನಕ್ಕೆ ಕಾರಣವಾಗುತ್ತದೆ.



**ಜನಸಂಖ್ಯೆಯ ಏರಿಳಿತಗಳು ರಾಷ್ಟ್ರದ ಮೇಲೆ ಹೇಗೆ ಪ್ರಭಾವ ಬೀರುತ್ತದೆ?**

ಒಂದು ರಾಷ್ಟ್ರದ ಜನರು ಒಂದೇ ಧರ್ಮದವರೋ ಒಂದೇ ಭಾಷೆ ಅಥವಾ ಒಂದೇ ಸಂಸ್ಕೃತಿಯವರೋ ಆಗಬೇಕೆಂದಿಲ್ಲ. ಆದರೆ ಸಾಮಾನ್ಯವಾದ ರಾಷ್ಟ್ರೀಯತೆಯ ಆಧಾರದಲ್ಲಿ ಏಕತೆಯಿಂದ ಜೀವಿಸುವವರಾಗಿರಬೇಕು. ರಾಷ್ಟ್ರೀಯತೆಯೆಂದರೇನು ಮತ್ತು ಅದು ಯಾವ ರೀತಿಯಲ್ಲಿ ರಾಷ್ಟ್ರದ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದ್ದೀರಲ್ಲವೇ.

## ಭೂಪ್ರದೇಶ (Territory)

ನೀಡಿರುವ ಭಾರತದ ಭೂಪಟ ಹಾಗೂ ಮಾಹಿತಿಗಳನ್ನು ಪರಿಶೋಧಿಸಿರಿ. ಭಾರತದ ಭೂಪ್ರದೇಶ ಹಾಗೂ ಗಡಿಗಳ ಕುರಿತಾಗಿರುವ ಮಾಹಿತಿಗಳನ್ನು ಭೂಪಟದೊಂದಿಗೆ ನೀಡಲಾಗಿದೆ. ಭೂಪ್ರದೇಶವು ರಾಷ್ಟ್ರರೂಪೀಕರಣಕ್ಕೆ ಅನಿವಾರ್ಯವಾಗಿರುವ ಒಂದು ಘಟಕವಾಗಿದೆ.

ಸರಿಯಾದ ಗಡಿಗಳಿಂದೊಡಗೂಡಿರುವ ಒಂದು ಭೂಪ್ರದೇಶವು ರಾಷ್ಟ್ರಕ್ಕೆ ಇರಬೇಕು. ಜನರು ನಿಶ್ಚಿತ ಭೂಪ್ರದೇಶದಲ್ಲಿ ಸ್ಥಿರವಾಸ ಮಾಡುವಾಗ ರಾಷ್ಟ್ರವು ರೂಪುಗೊಳ್ಳುತ್ತದೆ. ಭೂಪ್ರದೇಶದಲ್ಲಿ ರಾಷ್ಟ್ರಕ್ಕೆ ಪೂರ್ಣವಾದ ನಿಯಂತ್ರಣವಿರಬೇಕು.

ಭೂಪ್ರದೇಶ ಎಂದರೆ ನೆಲಭಾಗ ಮಾತ್ರವಲ್ಲ. ಗಡಿಯಲ್ಲಿ ಬರುವ ನೆಲ, ಜಲ, ವಾಯು, ಕರಾವಳಿ ಪ್ರದೇಶಗಳು ಭೂಪ್ರದೇಶದ ಭಾಗವಾಗಿವೆ.




ಅಟ್ಲಾಸಿನ ಸಹಾಯದಿಂದ ಜಾಗತಿಕ ಭೂಪಟವನ್ನು ನಿರೀಕ್ಷಿಸಿರಿ. ಹೆಚ್ಚು ವಿಸ್ತೀರ್ಣವಿರುವ ರಷ್ಯಾ, ಕೆನಡಾ, ಅಮೇರಿಕಾ ಮೊದಲಾದ ರಾಷ್ಟ್ರಗಳನ್ನು ಮತ್ತು ವಿಸ್ತೀರ್ಣ ಕಡಿಮೆಯಿರುವ

**ಟೆರಿಟೋರಿಯಲ್ ವಾಟರ್ಸ್**

ಸಮುದ್ರ ಸಾಮಿಪ್ಯವಿರುವ ರಾಷ್ಟ್ರಗಳ ತೀರ ಪ್ರದೇಶಗಳಿಂದ ಹನ್ನೆರಡು ನಾಟಿಕಲ್ ಮೈಲ್ (ಇಪ್ಪತ್ತೆರಡು ಕಿ.ಮೀ.) ಸಮುದ್ರ ಭಾಗವನ್ನು ಭೂಪ್ರದೇಶದ ಭಾಗವೆಂದು ಲೆಕ್ಕ ಹಾಕಲಾಗುತ್ತದೆ. ಈ ವಲಯವನ್ನು ಟೆರಿಟೋರಿಯಲ್ ವಾಟರ್ಸ್ ಎಂದು ಕರೆಯುತ್ತಾರೆ. ಅನುಮತಿಯಿಲ್ಲದೆ ಈ ವಲಯಗಳಿಗೆ ಪ್ರವೇಶಿಸುವ ಹಡಗುಗಳನ್ನು, ಬೋಟುಗಳನ್ನು ತೀರ ಸಂರಕ್ಷಣಾ ಸೇನೆಯು ವಶಪಡಿಸಿಕೊಳ್ಳುತ್ತದೆ.

ಸ್ಯಾನ್‌ಮೆರಿನೋ, ವ್ಯಾಟಿಕನ್ ಸಿಟಿ ಮೊದಲಾದ ರಾಷ್ಟ್ರಗಳು ನಿಮಗೆ ಕಂಡುಬರುತ್ತದೆ. ಭೂಪ್ರದೇಶಗಳ ಗಾತ್ರವು ರಾಷ್ಟ್ರ ರೂಪೀಕರಣಕ್ಕೆ ಬಾಧಕವಾಗುವುದಿಲ್ಲ. ಮೇರೆಗಳಿಂದ ಕೂಡಿರುವ ಭೂಪ್ರದೇಶವಿದ್ದರೆಸಾಕು.

## ಸರಕಾರ

ಸರಕಾರವು ರಾಷ್ಟ್ರಕ್ಕಿರುವ ಒಂದು ಅನಿವಾರ್ಯ ಘಟಕವಾಗಿದೆ. ಸರಕಾರವು ರಾಷ್ಟ್ರಕ್ಕೆ ಬೇಕಾಗಿ ನಿಯಮಗಳನ್ನು ನಿರ್ಮಿಸಿ ಕಾರ್ಯಗತಗೊಳಿಸುತ್ತದೆ ಮತ್ತು ನ್ಯಾಯುವನ್ನು ಖಾತರಿಗೊಳಿಸುತ್ತದೆ.

ಜನರಿಗೆ ರಕ್ಷಣೆಯನ್ನು ಖಾತರಿಪಡಿಸುವುದು, ವಿವಿಧ ಸೇವೆಗಳು ಲಭಿಸುವಂತೆ ಮಾಡುವುದು ಸರಕಾರವಾಗಿದೆ. ರಾಷ್ಟ್ರಕ್ಕೆ ಬೇಕಾಗಿ ಸರಕಾರಗಳು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಕೆಳಗೆ ನೀಡಲಾಗಿದೆ. ಹೆಚ್ಚಿನ ವಿಷಯಗಳನ್ನು ಸೇರಿಸಿ ಪಟ್ಟಿಯನ್ನು ವಿಸ್ತರಿಸಿರಿ.

- ಶಾಂತಿ ಸುವ್ಯವಸ್ಥೆಯನ್ನು ಖಾತರಿಗೊಳಿಸುವುದು.
- ಉದ್ಯೋಗದ ಅವಕಾಶ ಲಭಿಸುವಂತೆ ಮಾಡುವುದು.
- ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.
- 
- 

ಸರಕಾರಗಳು ನಿರ್ವಹಿಸುವ ಇಂತಹ ಜವಾಬ್ದಾರಿಗಳ ಮೂಲಕ ರಾಷ್ಟ್ರವು ಜನರೆಡೆಗೆ ತಲುಪುತ್ತದೆ. ವಿವಿಧ ರಾಷ್ಟ್ರಗಳಲ್ಲಿ ವಿಭಿನ್ನ ರೀತಿಯ ಸರಕಾರಗಳು ಕಾರ್ಯನಿರ್ವಹಿಸುತ್ತಿವೆ. ರಾಜಾಡಳಿತ, ಸೇನಾಡಳಿತ, ಪ್ರಜಾಪ್ರಭುತ್ವ ಹೀಗೆ ಅನೇಕ ವಿಧದ ಸರಕಾರದ ಕುರಿತು ಚರ್ಚಿಸಿದ್ದೀರಲ್ಲವೇ. ಯಾವುದೇ ರೀತಿಯ ಸರಕಾರವಾದರೂ ಎಲ್ಲ ರಾಷ್ಟ್ರಗಳಲ್ಲಿಯೂ ಸರಕಾರ ಇರಲೇಬೇಕು. ಸರಕಾರಗಳು ಕಾಲಕ್ಕನುಗುಣವಾಗಿ ಬದಲಾವಣೆಗಳಿಗೆ ಗುರಿಯಾಗುತ್ತವೆ. ಆದರೆ ರಾಷ್ಟ್ರವು ಸ್ಥಿರವಾದುದಾಗಿದೆ.

## ಪರಮಾಧಿಕಾರ (Sovereignty)

**ಕೇರಳವು ಒಂದು ರಾಷ್ಟ್ರವಲ್ಲ**

ಸರಿಯಾದ ಭೂಪ್ರದೇಶ, ಜನರು, ಸರಕಾರವು ಕೇರಳಕ್ಕಿದೆ. ಆದರೆ ಆಂತರಿಕ ಹಾಗೂ ವಿದೇಶಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಕುರಿತು ತೀರ್ಮಾನವನ್ನು ಕೈಗೊಳ್ಳಲಿರುವ ಅಧಿಕಾರವು ಕೇರಳಕ್ಕೆ ಇಲ್ಲ. ಆದುದರಿಂದಲೇ ಕೇರಳವನ್ನು ಒಂದು ರಾಷ್ಟ್ರವೆಂದು ಪರಿಗಣಿಸಲು ಸಾಧ್ಯವಿಲ್ಲ.

ಇಲ್ಲಿ ನೀಡಿರುವ ವಾರ್ತೆಗಳ ಶಿರೋನಾಮೆಗಳನ್ನು ಗಮನಿಸಿರಿ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಷಯಗಳ ಕುರಿತು ಭಾರತ ಸರಕಾರವು ಕೈಗೊಂಡ ತೀರ್ಮಾನಗಳು ಹಾಗೂ ಧೋರಣೆಗಳನ್ನು ಇಲ್ಲಿ ಹೇಳಲಾಗಿದೆ. ಬಾಹ್ಯ ನಿಯಂತ್ರಣವಿಲ್ಲದೆ ಆಂತರಿಕ ವಿಷಯಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳಲು ಮತ್ತು ಅಂತಾರಾಷ್ಟ್ರೀಯ ವಿಷಯಗಳಲ್ಲಿ ಸ್ವಂತವಾದ ಧೋರಣೆಗಳನ್ನು ಸ್ವೀಕರಿಸಲಿರುವ ಪೂರ್ಣವಾದ ಅಧಿಕಾರವು ರಾಷ್ಟ್ರಕ್ಕೆ ಇದೆ. ರಾಷ್ಟ್ರಕ್ಕಿರುವ ಈ ಅಧಿಕಾರವನ್ನು ಪರಮಾಧಿಕಾರ ಎನ್ನುತ್ತೇವೆ.




ಪರಮಾಧಿಕಾರವು ರಾಷ್ಟ್ರವನ್ನು ಇತರ ಸಂಸ್ಥೆಗಳಿಂದ ಭಿನ್ನವಾಗಿಸುತ್ತದೆ. ಜನರು, ಭೂಪ್ರದೇಶ ಮತ್ತು ಸರಕಾರವಿದ್ದರೂ ರಾಷ್ಟ್ರವು ರೂಪುಗೊಳ್ಳುವುದಿಲ್ಲ. ರಾಷ್ಟ್ರವು ರೂಪುಗೊಳ್ಳಬೇಕಿದ್ದರೆ ಪರಮಾಧಿಕಾರ ಅತಿ ಅಗತ್ಯ. ಇದು ರಾಷ್ಟ್ರದ ಸಂಪೂರ್ಣ, ಅಪರಿಮಿತ ಹಾಗೂ ಅವಿಭಾಜ್ಯವಾದ ಅಧಿಕಾರವಾಗಿದೆ. ಯಾವುದೇ ಕಾರಣಕ್ಕೂ ಪರಮಾಧಿಕಾರವನ್ನು ವಿಭಜಿಸಲು ಸಾಧ್ಯವಿಲ್ಲ. ಪರಮಾಧಿಕಾರವು ವಿಭಜಿಸಲ್ಪಟ್ಟರೆ ಹೊಸ ರಾಷ್ಟ್ರವು ರೂಪುಗೊಳ್ಳುತ್ತದೆ. ಪರಮಾಧಿಕಾರಕ್ಕೆ ಪ್ರಧಾನವಾಗಿ ಎರಡು ಹಂತಗಳಿವೆ. ಅವುಗಳು ಯಾವುವೆಂದು ನಿರೀಕ್ಷಿಸಿರಿ.

**ದಕ್ಷಿಣ ಸುಡಾನ್**



2011ರಲ್ಲಿ ಸುಡಾನನ್ನು ವಿಭಜಿಸಿ ದಕ್ಷಿಣ ಸುಡಾನ್ ರಾಷ್ಟ್ರವು ರೂಪುಗೊಂಡಿತು. ಇದು ಒಂದು ರಾಷ್ಟ್ರದ ಪರಮಾಧಿಕಾರದ ವಿಭಜನೆ ಮತ್ತು ನೂತನ ರಾಷ್ಟ್ರವೊಂದರ ರೂಪುಗೊಳ್ಳುವಿಕೆಗಿರುವ ಇತ್ತೀಚೆಗಿನ ಉದಾಹರಣೆಯಾಗಿದೆ. ದಕ್ಷಿಣ ಸುಡಾನ್ ವಿಶ್ವ ಸಂಸ್ಥೆಯ 193ನೇ ಸದಸ್ಯ ರಾಷ್ಟ್ರವಾಗಿದೆ.

**ಪರಮಾಧಿಕಾರ**

| ಆಂತರಿಕ ಹಂತ | ಬಾಹ್ಯ ಹಂತ |
|---|---|
| **ಆಂತರಿಕ ಹಂತ:** ಭೂಪ್ರದೇಶದೊಳಗೆ ಎಲ್ಲ ವಿಷಯಗಳಿಗೆ ಸರಿಯಾದ ತೀರ್ಮಾನವನ್ನು ಕೈಗೊಳ್ಳಲಿರುವ ಅಧಿಕಾರ. | **ಬಾಹ್ಯ ಹಂತ:** ಅಂತಾರಾಷ್ಟ್ರೀಯ ವಿಷಯಗಳಲ್ಲಿ ಸ್ವತಂತ್ರವಾದ ತೀರ್ಮಾನವನ್ನು ಕೈಗೊಳ್ಳಲಿರುವ ಅಧಿಕಾರ |

ರಾಷ್ಟ್ರ ರೂಪೀಕರಣಕ್ಕೆ ಅನಿವಾರ್ಯವಾಗಿರುವ ಘಟಕಗಳನ್ನು ಸೇರಿಸಿ ಒಂದು ವಿಚಾರಗೋಷ್ಠಿ ಪ್ರಬಂಧವನ್ನು ತಯಾರಿಸಿರಿ.




## ರಾಷ್ಟ್ರದ ಜವಾಬ್ದಾರಿಗಳು

ಮೇಲೆ ನೀಡಿರುವುದು ರಾಷ್ಟ್ರದ ಜವಾಬ್ದಾರಿಗೆ ಸಂಬಂಧಿಸಿ ಪ್ರಮುಖ ಪಾಶ್ಚಾತ್ಯ ಚಿಂತಕನಾದ 'ಜರ್ಮಿ ಬೇಂತಾಂ' ನ ದೃಷ್ಟಿಕೋನವಾಗಿದೆ. ಎಲ್ಲರ ಒಳಿತು ಅಥವಾ ಜನರ ಕ್ಷೇಮವು ಎಲ್ಲ ರಾಷ್ಟ್ರಗಳ ಜವಾಬ್ದಾರಿಯಾಗಿದೆ. ಪೌರರಿಗೆ ಉತ್ತಮವಾದ ಜೀವನವನ್ನು ನೀಡುವುದು ರಾಷ್ಟ್ರವೊಂದರ ಪ್ರಧಾನ ಜವಾಬ್ದಾರಿಯೆಂದು ಗ್ರೀಕ್ ಚಿಂತಕರಾದ ಪ್ಲೇಟೋ ಹಾಗೂ ಅರಿಸ್ಟಾಟಲ್‌ರ ಅಭಿಪ್ರಾಯವಾಗಿದೆ.


ರಾಷ್ಟ್ರಕ್ಕೆ ಆಧುನಿಕ ಕಾಲದಲ್ಲಿ ಅತೀ ವಿಪುಲವಾದ ಜವಾಬ್ದಾರಿಗಳಿವೆ.

> ರಾಷ್ಟ್ರದ ಗುರಿಯು ಅತ್ಯಧಿಕ ಜನರಿಗೆ
> ಅತ್ಯಧಿಕ ಒಳಿತನ್ನು ಉಂಟು ಮಾಡುವುದಾಗಿದೆ.
>
> ಜರ್ಮಿ ಬೇಂತಾಂ

ಕ್ಷೇಮ ರಾಷ್ಟ್ರ (Welfare State) ಎಂಬ ಆಶಯವು ಜಾರಿಗೆ ಬರುವುದರೊಂದಿಗೆ ಜವಾಬ್ದಾರಿಗಳು ಗಣನೀಯವಾಗಿ ಹೆಚ್ಚಿದುವು. ರಾಷ್ಟ್ರದ ಜವಾಬ್ದಾರಿಗಳನ್ನು ಸೂಚಿಸುವ ಚಾರ್ಟನ್ನು ವೀಕ್ಷಿಸಿರಿ.




ನಿರ್ಬಂಧಿತ ಜವಾಬ್ದಾರಿಗಳೆಂಬುದು ರಾಷ್ಟ್ರವು ಎಲ್ಲ ಕಾಲದಲ್ಲೂ ನಿರ್ಬಂಧಿತವಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳಾಗಿವೆ. ನಿರ್ಬಂಧಿತ ಜವಾಬ್ದಾರಿಗಳ ನಿರ್ವಹಣೆಯಿಂದ ವಿಮುಖವಾಗಲು ರಾಷ್ಟ್ರಗಳಿಗೆ ಸಾಧ್ಯವಿಲ್ಲ. ಈ ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ ಜನರ ಜೀವನ ಹಾಗೂ ಸಂಪತ್ತಿಗೆ ರಕ್ಷಣೆ ಇರಲಾರದು.



**ನಿರ್ಬಂಧಿತ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಾಗಿ ಭಾರತದಲ್ಲಿ ರೂಪುಗೊಂಡಿರುವ ಸಂಸ್ಥೆಗಳು ಯಾವುವು? ಕಂಡುಹಿಡಿದು ಪಟ್ಟಿ ತಯಾರಿಸಿರಿ.**

ನಿರ್ಬಂಧಿತ ಜವಾಬ್ದಾರಿಗಳಿಗಿಂತ ವಿವೇಚನಾತ್ಮಕ ಜವಾಬ್ದಾರಿಗಳು ಹೇಗೆ ಭಿನ್ನವಾಗಿವೆ? ವಿವೇಚನಾತ್ಮಕ ಜವಾಬ್ದಾರಿಗಳೆಂದರೆ ರಾಷ್ಟ್ರದ ಆರ್ಥಿಕ ಸ್ಥಿತಿಗನುಸಾರವಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳಾಗಿವೆ. ಶಿಕ್ಷಣ, ಆರೋಗ್ಯ ಸಂರಕ್ಷಣೆ ಮೊದಲಾದ ಜವಾಬ್ದಾರಿಗಳ ನಿರ್ವಹಣೆಯಿಂದ ಜನರಿಗೆ ಉತ್ತಮವಾದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಇಂತಹ ಪ್ರಗತಿಪರವಾದ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಜಾರಿಗೊಳಿಸುವ ರಾಷ್ಟ್ರವನ್ನು ನಾವು ಕ್ಷೇಮ ರಾಷ್ಟ್ರವೆಂದು ಕರೆಯುತ್ತೇವೆ. ರಾಷ್ಟ್ರದ ವಿವೇಚನಾತ್ಮಕ ಜವಾಬ್ದಾರಿಗಳ ಮಿತಿಯನ್ನು ನಿರ್ಧರಿಸಲು ಸಾಧ್ಯವಿಲ್ಲ. ತಂತ್ರಜ್ಞಾನದ ಬೆಳವಣಿಗೆ ಹಾಗೂ ಮಾನವನ ಅವಶ್ಯಕತೆಗಳಲ್ಲಿ ಉಂಟಾದ ಹೆಚ್ಚಳವು ಈ ವಲಯವನ್ನು ವಿಪುಲಗೊಳಿಸುತ್ತದೆ.

*ರಾಷ್ಟ್ರದ ವಿಭಿನ್ನ ಜವಾಬ್ದಾರಿಗಳಿಗೆ ಸಂಬಂಧಿಸಿದ ವಾರ್ತೆಗಳು ಹಾಗೂ ಚಿತ್ರ ಸಂಗ್ರಹಿಸಿ ಕಿರುಚಲನಚಿತ್ರವನ್ನು ತಯಾರಿಸಿರಿ.*





**ರಾಷ್ಟ್ರವು ನಿರ್ವಹಿಸುವ ನಿರ್ಬಂಧಿತ ಹಾಗೂ ವಿವೇಚನಾತ್ಮಕ ಜವಾಬ್ದಾರಿಗಳ ಪ್ರಾಧಾನ್ಯತೆಯನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ.**

## ರಾಷ್ಟ್ರದ ಆವಿರ್ಭಾವ ಸಿದ್ಧಾಂತಗಳು

ರಾಷ್ಟ್ರವು ಹೇಗೆ ಅಸ್ತಿತ್ವಕ್ಕೆ ಬಂತು ಎಂಬುದನ್ನು ಸ್ಪಷ್ಟಪಡಿಸುವ ಕೆಲವು ಸಿದ್ಧಾಂತಗಳನ್ನು ಗಮನಿಸಿರಿ.

### ರಾಷ್ಟ್ರ ರೂಪೀಕರಣ ಸಿದ್ಧಾಂತಗಳು

**ದೈವದತ್ತ ಸಿದ್ಧಾಂತ**

ರಾಷ್ಟ್ರವು ದೇವರಿಂದ ಸೃಷ್ಟಿಸಲ್ಪಟ್ಟದ್ದಾಗಿದೆ. ರಾಜನು ದೇವರ ಪ್ರತಿನಿಧಿಯಾಗಿದ್ದಾನೆ. ಅವನಿಗೆ ದೇವನೊಂದಿಗೆ ಮಾತ್ರ ಋಣವಿದೆ.

**ವಿಕಾಸ ಸಿದ್ಧಾಂತ**

ರಾಷ್ಟ್ರವು ಚರಿತ್ರೆಯ ಸೃಷ್ಟಿಯಾಗಿದೆ. ಇದು ಸಮಾಜದ ವಿಕಾಸ ಪ್ರಕ್ರಿಯೆಯ ಪರಿಣಾಮವಾಗಿ ರೂಪುಗೊಂಡಿದೆ.

**ಸಾಮಾಜಿಕ ಒಪ್ಪಂದ ಸಿದ್ಧಾಂತ**

ಜನರು ರೂಪಿಸಿದ ಒಂದು ಒಪ್ಪಂದದ ಆಧಾರದಲ್ಲಿ ರಾಷ್ಟ್ರವು ಅಸ್ತಿತ್ವಕ್ಕೆ ಬಂತು. ಮನುಷ್ಯನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಅವರು ರಾಷ್ಟ್ರಕ್ಕೆ ರೂಪು ನೀಡಿದರು.

**ಶಕ್ತಿ ಸಿದ್ಧಾಂತ**

ಪ್ರಬಲರಾದವರು ದುರ್ಬಲರಾದವರ ಮೇಲೆ ಆಧಿಪತ್ಯವನ್ನು ಸ್ಥಾಪಿಸುವುರ ಮೂಲಕ ರಾಷ್ಟ್ರವು ರೂಪುಗೊಂಡಿತು.

ರಾಷ್ಟ್ರ ರೂಪೀಕರಣಕ್ಕೆ ಸಂಬಂಧಿಸಿದ ವಿಭಿನ್ನ ದೃಷ್ಟಿಕೋನಗಳನ್ನು ಮೇಲೆ ನೀಡಿರುವ ಸಿದ್ಧಾಂತಗಳು ಮುಂದಿರಿಸುತ್ತವೆ. ಇವುಗಳಲ್ಲಿ ವಿಕಾಸ ಸಿದ್ಧಾಂತವು ಅತ್ಯಂತ ಸೂಕ್ತವಾದುದಾಗಿದೆ. ವಿವಿಧ ಸನ್ನಿವೇಶಗಳ ಪ್ರಭಾವದ ಪರಿಣಾಮವಾಗಿ ರಾಷ್ಟ್ರವು ರೂಪುಗೊಂಡಿತ್ತಲ್ಲದೆ ವಿವಿಧ ರೀತಿಯ ವಿಕಾಸದ ಪರಿಣಾಮವಾಗಿ ಇಂದಿನ ರೂಪಕ್ಕೆ ರಾಷ್ಟ್ರವು ತಲುಪಿತು ಎಂಬುದನ್ನು ಈ ಸಿದ್ಧಾಂತವು ಸ್ಪಷ್ಟಪಡಿಸುತ್ತದೆ. ಗೋತ್ರ, ಗೋತ್ರಾಡಳಿತ ಎಂಬಿವುಗಳಿಂದ ಆರಂಭವಾಗಿ ನಗರ ರಾಷ್ಟ್ರ, ಸಾಮ್ರಾಜ್ಯಶಾಹಿ ರಾಷ್ಟ್ರಗಳು, ಫ್ಯೂಡಲ್ ರಾಷ್ಟ್ರ ಹೀಗೆ ವಿವಿಧ ರೂಪದಲ್ಲಿ ರಾಷ್ಟ್ರಗಳು ಅಸ್ತಿತ್ವದಲ್ಲಿದ್ದುವು. ಇಂದು ಈ ರಾಷ್ಟ್ರಗಳನ್ನು ಸಾಮಾನ್ಯವಾಗಿ ದೇಶರಾಷ್ಟ್ರ(Nation State)ಗಳೆಂದು ಕರೆಯುತ್ತಾರೆ. ಸಾಮಾನ್ಯವಾದ ರಾಷ್ಟ್ರೀಯ ದೃಷ್ಟಿಕೋನದ ಆಧಾರದಲ್ಲಿ ರೂಪುಗೊಳ್ಳುವುದರಿಂದ ಇವುಗಳನ್ನು ದೇಶರಾಷ್ಟ್ರಗಳೆಂದು ಕರೆಯಲಾಗುತ್ತದೆ.

## ರಾಷ್ಟ್ರ ಹಾಗೂ ಪೌರ





ರಾಷ್ಟ್ರ ರೂಪುಗೊಳ್ಳಬೇಕಾದರೆ ಜನರು ಅನಿವಾರ್ಯವೆಂಬುದನ್ನು ಈ ಮೊದಲು ನಾವು ಚರ್ಚಿಸಿದ್ದೇವಲ್ಲವೇ. ಭಾರತೀಯ ಪೌರನಿಗೆ ವಿದೇಶಕ್ಕೆ ಹೋಗಲು ಅನಿವಾರ್ಯವಾದ ಪಾಸ್‌ಪೋರ್ಟ್‌ನ ಚಿತ್ರವನ್ನು ಕೊಡಲಾಗಿದೆ. ಪಾಸ್‌ಪೋರ್ಟ್, ಜನನ ಸರ್ಟಿಫಿಕೇಟ್ ಮೊದಲಾದುವುಗಳಲ್ಲಿ ರಾಷ್ಟ್ರೀಯತೆಯನ್ನು ದಾಖಲಿಸುತ್ತಾರೆ. ಒಬ್ಬ ವ್ಯಕ್ತಿಯ ಪೌರತ್ವವು ಯಾವುದೆಂಬುದನ್ನು ಅದು ಸ್ಪಷ್ಟಪಡಿಸುತ್ತದೆ.

NT-911-7-SOC.SCI.-I-10-K-VOL.2

## ಪೌರತ್ವ

> ಒಂದು ರಾಷ್ಟ್ರದ ಕಾನೂನು ನಿರ್ಮಾಣದಲ್ಲಿ ಹಾಗೂ ನ್ಯಾಯನಿರ್ವಹಣೆಯಲ್ಲಿ ಭಾಗವಹಿಸಲು ಅಧಿಕಾರವಿರುವ ಯಾವನೇ ಒಬ್ಬ ವ್ಯಕ್ತಿಯನ್ನು ಆ ರಾಷ್ಟ್ರದ ಪೌರನೆಂದು ಕರೆಯಬಹುದು.
>
> ಅರಿಸ್ಟಾಟಲ್




ಮೇಲೆ ನೀಡಿರುವುದು ಗ್ರೀಕ್ ಚಿಂತಕನಾದ ಅರಿಸ್ಟಾಟಲ್ ಹೇಳಿದ ಪೌರತ್ವದ ದೃಷ್ಟಿಕೋನವಾಗಿದೆ. ರಾಷ್ಟ್ರ ಹಾಗೂ ಪೌರರೊಳಗಿನ ಪರಸ್ಪರ ಸಂಬಂಧವನ್ನು ಇದು ಸ್ಪಷ್ಟಪಡಿಸುತ್ತದೆ.

ಪೌರತ್ವವೆಂದರೆ ಒಂದು ದೇಶದ ಪೂರ್ಣ ಹಾಗೂ ಸಮಾನತೆಯಿಂದ ಕೂಡಿದ ಸದಸ್ಯತನವಾಗಿದೆ. ಪೌರತ್ವವು ಒಬ್ಬ ವ್ಯಕ್ತಿಯನ್ನು ರಾಜಕೀಯ ಮತ್ತು ಪೌರರ ಹಕ್ಕುಗಳನ್ನು ಅನುಭವಿಸಲು ಪ್ರಾಪ್ತರನ್ನಾಗಿಸುತ್ತದೆ. ರಾಷ್ಟ್ರ ಮತ್ತು ಪೌರರೊಳಗಿನ ಸಂಬಂಧವನ್ನು ತಿಳಿಸುವ ಚಾರ್ಟನ್ನು ನಿರೀಕ್ಷಿಸಿರಿ.

ಇದು ರಾಷ್ಟ್ರವು ಪೌರನಿಗೆ ಹಕ್ಕುಗಳನ್ನು ಖಾತರಿಪಡಿಸುವಾಗ ಪೌರನು ರಾಷ್ಟ್ರಕ್ಕಾಗಿ ನಿರ್ವಹಿಸಬೇಕಾದ ಕರ್ತವ್ಯಗಳಿವೆಯೆಂಬುದನ್ನು ಸ್ಪಷ್ಟಪಡಿಸುತ್ತದೆ.


ಪ್ರಜಾಪ್ರಭುತ್ವ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದ ನಂತರ ಪೌರತ್ವ ಎಂಬ ಆಶಯಕ್ಕೆ ಪ್ರಾಧಾನ್ಯ ಲಭಿಸಿದೆ. ರಾಜಕೀಯ ಹಕ್ಕುಗಳ ಮೂಲಕ ಆಡಳಿತ ನಿರ್ವಹಣೆಯಲ್ಲಿ ಪೌರನ ಪಾಲ್ಗೊಳ್ಳುವಿಕೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯು ಖಚಿತಪಡಿಸುತ್ತದೆ. ರಾಜಕೀಯ ಹಕ್ಕುಗಳು ಲಭಿಸುವುದು ಪೌರನಿಗೆ ಮಾತ್ರವಾಗಿದೆ.

ಒಂದು ರಾಷ್ಟ್ರದಲ್ಲಿ ವಾಸಿಸುವ ಎಲ್ಲರೂ ಆ ರಾಷ್ಟ್ರದ ಪೌರರೆ? ಪೌರರಲ್ಲದೆ ವಿದೇಶೀಯರು ಕೂಡಾ ಒಂದು ರಾಷ್ಟ್ರದಲ್ಲಿರುತ್ತಾರೆ. ಭಾರತದ ಅನೇಕ ಪೌರರು ವಿದೇಶದಲ್ಲಿ ಕೆಲಸ ಮಾಡುತ್ತಾರೆಂದು ನಿಮಗೆ ತಿಳಿದಿದೆಯಲ್ಲವೇ. ಪೌರನಿಗೆ ಲಭಿಸುವ ಎಲ್ಲ ಹಕ್ಕುಗಳು ವಿದೇಶೀಯರಿಗೆ ಲಭಿಸುವುದಿಲ್ಲ. ಭಾರತದ ಪೌರನಿಗೆ ಮಾತ್ರ ಲಭಿಸುವ ಕೆಲವು ಹಕ್ಕುಗಳನ್ನು ಕೆಳಗೆ ನೀಡಲಾಗಿದೆ. ಹೆಚ್ಚಿನ ಹಕ್ಕುಗಳನ್ನು ಬರೆದು ಪಟ್ಟಿಯನ್ನು ವಿಸ್ತರಿಸಿರಿ.

### ರಾಜಕೀಯ ಹಕ್ಕುಗಳು

ಮತದಾನ ಮಾಡುವ ಹಕ್ಕು, ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು, ಸಂಘಟನೆಗಳನ್ನು ರೂಪಿಸಲಿರುವ ಹಕ್ಕು, ಸರಕಾರವನ್ನು ವಿಮರ್ಶಿಸಲಿರುವ ಹಕ್ಕು, ಅಧಿಕಾರವನ್ನು ಹೊಂದಲಿರುವ ಹಕ್ಕು ಮೊದಲಾದವುಗಳು ರಾಜಕೀಯ ಹಕ್ಕುಗಳಾಗಿವೆ.

### ಲ್ಯಾರಿ ಬೇಕರ್



ಇವರು 1917ರಲ್ಲಿ ಬ್ರಿಟನಿನ ಬರ್ಮಿಂಗ್ ಹ್ಯಾಮಿನಲ್ಲಿ ಜನಿಸಿದರು. 1945ರಲ್ಲಿ ಲೆಪ್ರಸಿ ಮಿಶನ್‌ನ ಭಾಗವಾಗಿ ಭಾರತಕ್ಕೆ ಬಂದರು. ಗಾಂಧೀಜಿಯವರ ಆಶಯಗಳು ಅವರ ಮೇಲೆ ಹೆಚ್ಚು ಪ್ರಭಾವ ಬೀರಿತು. ಕೇರಳದಲ್ಲಿ ಕಡಿಮೆ ಖರ್ಚಿನ ಮನೆಗಳ ನಿರ್ಮಾಣದ ಕುರಿತು ತಿಳಿಸಿದರು. ಲ್ಯಾರಿ ಬೇಕರ್‌ರವರನ್ನು ವಾಸ್ತುಶಿಲ್ಪದ 'ಗಾಂಧೀಜಿ' ಎಂದು ಕರೆಯುತ್ತಾರೆ. 1989ರಲ್ಲಿ ಭಾರತ ಪೌರತ್ವವನ್ನು ಸ್ವೀಕರಿಸಿದ ಲ್ಯಾರಿ ಬೇಕರ್ 2007ರಲ್ಲಿ ಇಹಲೋಕ ತ್ಯಜಿಸಿದರು. ಅಪೇಕ್ಷಿತ ಪೌರತ್ವದೊಂದಿಗೆ ಬೇಕರ್ ಭಾರತದ ಪೌರರಾದರು.

- ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು
- 
- 

ಒಂದು ದೇಶದಲ್ಲಿರುವ ಎಲ್ಲರ ಪೌರತ್ವವು ಒಂದೇ ರೀತಿಯಲ್ಲಿ ಲಭಿಸಿದುದೆ? ಪೌರತ್ವವು ಸಾಮಾನ್ಯವಾಗಿ ಎರಡು ವಿಧದಲ್ಲಿದೆ. ಚಾರ್ಟನ್ನು ನಿರೀಕ್ಷಿಸಿರಿ.





ಸ್ವಾಭಾವಿಕ ಪೌರತ್ವವು ಹುಟ್ಟಿನಿಂದ ಲಭಿಸುವ ಪೌರತ್ವವಾಗಿದೆ . ಅಪೇಕ್ಷಿತ ಪೌರತ್ವವೆಂದರೆ ಒಂದು ದೇಶದಲ್ಲಿ ಅಸ್ತಿತ್ವದಲ್ಲಿರುವ ನಿಯಮಾವಳಿಗಳನ್ನು ಪಾಲಿಸಿಕೊಂಡು ಒಬ್ಬ ಅನ್ಯದೇಶದ ವ್ಯಕ್ತಿಗೆ ದೊರೆಯುವ ಪೌರತ್ವವಾಗಿದೆ. ಪೌರತ್ವ ನಿಯಮಾವಳಿಯಲ್ಲಿರುವ ಯೋಗ್ಯತೆಗಳು ಇದ್ದರೆ ಮಾತ್ರವೇ ಆ ವ್ಯಕ್ತಿಗೆ ಪೌರತ್ವವನ್ನು ಗಳಿಸಲು ಸಾಧ್ಯ.

## ರಾಜ್ಯಶಾಸ್ತ್ರ

ನಾವು ಈ ತನಕ ರಾಷ್ಟ್ರದೊಂದಿಗೆ ಸಂಬಂಧಿಸಿದ ವಿವಿಧ ಆಶಯಗಳನ್ನು ಚರ್ಚಿಸಿದೆವು. ರಾಷ್ಟ್ರ, ಸರಕಾರ ಎಂಬಿವುಗಳ ಕುರಿತು ಕಲಿಯಲು ಪುರಾತನ ಕಾಲದಿಂದಲೇ ಆರಂಭಿಸಿದ್ದಾರೆ. ಮನುಷ್ಯನ ನಿತ್ಯ ಜೀವನದೊಂದಿಗೆ ಸಂಬಂಧವನ್ನು ಹೊಂದಿರುವ ಕಾರಣ ರಾಜಕೀಯ ವಿಷಯಗಳನ್ನು ಹೆಚ್ಚು ಸಮಗ್ರವಾಗಿ ವಿಶ್ಲೇಷಣೆಗೆ ಮತ್ತು ಅಧ್ಯಯನಕ್ಕೆ ಒಳಪಡಿಸಬೇಕು. ರಾಜ್ಯಶಾಸ್ತ್ರವು ರಾಜಕೀಯಕ್ಕೆ ಸಂಬಂಧಿಸಿದ ಒಂದು ಕಲಿಕಾ ವಿಷಯ ಎಂಬ ದೃಷ್ಟಿಯಲ್ಲಿ ಅಸ್ತಿತ್ವಕ್ಕೆ ಬಂತು. ಪುರಾತನ ಗ್ರೀಕ್ ಚಿಂತಕನಾದ ಅರಿಸ್ಟಾಟಲ್ ರಾಜ್ಯಶಾಸ್ತ್ರಕ್ಕೆ ನೀಡಿರುವ ನಿರ್ವಚನವನ್ನು ವಿಶ್ಲೇಷಿಸಿರಿ.

> ರಾಷ್ಟ್ರ ಹಾಗೂ ಸರಕಾರದ ಕುರಿತಾದ ಅಧ್ಯಯನವೇ ರಾಜ್ಯಶಾಸ್ತ್ರವಾಗಿದೆ.
>
> **ಅರಿಸ್ಟಾಟಲ್**

ಅರಿಸ್ಟಾಟಲ್‌ನ ನಿರ್ವಚನದ ಪ್ರಕಾರ ರಾಜ್ಯಶಾಸ್ತ್ರವೆಂದರೆ ರಾಷ್ಟ್ರ, ಸರಕಾರ ಎಂಬೀ ಸಂಸ್ಥೆಗಳ ಕುರಿತಾದ ಅಧ್ಯಯನವಾಗಿದೆ. ರಾಜಕೀಯ ವಿಷಯಗಳನ್ನು ಚರ್ಚಿಸುವ ತನ್ನ ಕೃತಿಗೆ ಅರಿಸ್ಟಾಟಲ್ 'ಪೊಲಿಟಿಕ್ಸ್' ಎಂಬ ಹೆಸರು ನೀಡಿದನು. ಇದು ರಾಷ್ಟ್ರವನ್ನು ಸಮಗ್ರವಾಗಿ ವಿಶ್ಲೇಷಣೆ ಮಾಡಿದ ಮೊದಲ ಕೃತಿಯಾಗಿದೆ. ಅದುದರಿಂದ ಇವರನ್ನು ರಾಜ್ಯಶಾಸ್ತ್ರದ ಪಿತಾಮಹ ಎನ್ನುತ್ತಾರೆ. ಪ್ಲೇಟೋ, ಸೊಕ್ರಟಿಸ್ ಮುಂತಾದವರ ಕೊಡುಗೆಗಳು ರಾಜ್ಯಶಾಸ್ತ್ರದ ಆವಿರ್ಭಾವಕ್ಕೆ




ಸಹಾಯಕವಾಯಿತು. ನಗರರಾಷ್ಟ್ರ ಎಂಬ ಅರ್ಥ ಬರುವ ಗ್ರೀಕ್ ಪದವಾದ 'ಪೋಲಿಸ್' ಎಂಬ ಪದದಿಂದ ಪೊಲಿಟಿಕ್ಸ್ ಎಂಬ ಪದವು ರೂಪುಗೊಂಡಿತು.

ರಾಷ್ಟ್ರತಂತ್ರಶಾಸ್ತ್ರ ಕಲಿಕೆಯ ಆರಂಭದಲ್ಲಿ ರಾಷ್ಟ್ರ, ಸರಕಾರ ಮೊದಲಾದ ಸಂಸ್ಥೆಗಳು ಹಾಗೂ ಅವುಗಳ ಕಾರ್ಯವೈಖರಿಗಳ ಕುರಿತು ಅಧ್ಯಯನ ಮಾಡಿದವು. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದೊಡನೆ ರಾಜಕೀಯದ ಪಾಲ್ಗೊಳ್ಳುವಿಕೆ ಎಂಬ ಆಶಯಕ್ಕೆ ಪ್ರಾಧಾನ್ಯ ಲಭಿಸಿತು. ಇದರ ಪರಿಣಾಮವಾಗಿ ರಾಜಕೀಯ ಸಂಸ್ಥೆಗಳ ಕುರಿತಾದ ಅಧ್ಯಯನದೊಂದಿಗೆ ರಾಜಕೀಯ ಚಟುವಟಿಕೆಗಳು ರಾಜ್ಯಶಾಸ್ತ್ರದ ಭಾಗವಾದುವು. ರಾಜ್ಯಶಾಸ್ತ್ರ ಕಲಿಕಾ ಕ್ಷೇತ್ರದ ವ್ಯಾಪ್ತಿಯು ನಿರಂತರವಾಗಿ ಬೆಳೆಯುತ್ತಿದೆ. ರಾಜ್ಯಶಾಸ್ತ್ರದ ಪ್ರಧಾನ ಕಲಿಕಾಕ್ಷೇತ್ರಗಳ ಚಿತ್ರವನ್ನು ನಿರೀಕ್ಷಿಸಿರಿ.

ರಾಜ್ಯಶಾಸ್ತ್ರದ ಪ್ರಧಾನ ಕಲಿಕಾ ಕ್ಷೇತ್ರಗಳನ್ನು ಪರಿಚಯಿಸಿಕೊಂಡಿರಲ್ಲವೇ. ಈ ನಾಲ್ಕು ಕ್ಷೇತ್ರಗಳು ಅಲ್ಲದೆ ರಾಜಕೀಯ ಚಟುವಟಿಕೆಗೆ ಸಂಬಂಧವಿರುವ ಎಲ್ಲ ಆಶಯಗಳು ರಾಜ್ಯಶಾಸ್ತ್ರದ ಭಾಗವಾಗಿ ಚರ್ಚಿಸಲ್ಪಡುತ್ತವೆ.

## ರಾಜ್ಯಶಾಸ್ತ್ರದ ಕಲಿಕೆ ಯಾಕೆ?


ರಾಜ್ಯಶಾಸ್ತ್ರದ ಕಲಿಕೆಯಿಂದ ರಾಜಕೀಯವನ್ನು ಬೇರ್ಪಡಿಸಬೇಕೆ? ರಾಜಕೀಯದಲ್ಲಿ ನಾವು ಸಕ್ರಿಯವಾಗಿ ಪಾಲ್ಗೊಳ್ಳಬೇಕೆ? ಇದಕ್ಕೆ ಸಂಬಂಧಿಸಿ ಪ್ಲೇಟೋರವರ ದೃಷ್ಟಿಕೋನವನ್ನು ನಿರೀಕ್ಷಿಸಿರಿ.

> ನೀವು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದಿರುವುದರ ಪರಿಣಾಮದಿಂದ ನಿಮಗಿಂತಲೂ ಕಡಿಮೆ ಸಾಮರ್ಥ್ಯದವರು ನಿಮ್ಮನ್ನು ಆಳುವರು.
>
> **ಪ್ಲೇಟೊ**

*ರಾಜ್ಯಶಾಸ ಚಿಂತಕರ ಚಿತ್ರಗಳನ್ನು ಮತ್ತು ಕೊಡುಗೆಗಳನ್ನು ಸೇರಿಸಿ ಪವರ್ ಪೋಯಿಂಟ್ ಪ್ರೆಸಂಟೇಶನ್ ತಯಾರಿಸಿ ಮಂಡಿಸಿರಿ.*



ಪ್ರಜಾಪ್ರಭುತ್ವ ಸಮಾಜದಲ್ಲಿ ಪ್ಲೋಟೋವಿನ ಈ ದೃಷ್ಟಿಕೋನಕ್ಕೆ ತುಂಬಾ ಪ್ರಾಧಾನ್ಯತೆಯಿದೆ. ನಾವು ಪಾಲ್ಗೊಳ್ಳುವ ಸಮಾಜದ ಒಳಿತು ಮತ್ತು ಹಿರಿಮೆಯು ನೀವು ಹೇಗೆ ಈ ಸಮಾಜದ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುತ್ತೀರಿ ಎನ್ನುವುದನ್ನು ಆಶ್ರಯಿಸಿಕೊಂಡಿದೆ. ಸಾಮಾನ್ಯವಾಗಿ ಯಾವುದೇ ವಿಷಯವನ್ನು ಪ್ರಜ್ಞಾಪೂರ್ವಕವಾಗಿ ವಿಶ್ಲೇಷಿಸಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ರಾಜ್ಯಶಾಸ್ತ್ರದ ಕಲಿಕೆಯು ನಿಮಗೆ ಸಹಾಯಮಾಡುತ್ತದೆ.




## ಮೌಲ್ಯನಿರ್ಣಯ ಮಾಡುವ

- ರಾಷ್ಟ್ರ ಎಂದರೇನು? ರಾಷ್ಟ್ರದ ಪ್ರಧಾನ ಘಟಕಗಳು ಯಾವುವು?
- ಪರಮಾಧಿಕಾರದ ಆಂತರಿಕ ಹಾಗೂ ಬಾಹ್ಯ ಹಂತಗಳನ್ನು ವಿವರಿಸಿರಿ.
- ರಾಷ್ಟ್ರಕ್ಕೆ ನಿರ್ಬಂಧಿತ ಮತ್ತು ವಿವೇಚನಾತ್ಮಕ ಎಂಬ ಎರಡು ಜವಾಬ್ದಾರಿಗಳಿವೆ. ಅವುಗಳು ಯಾವುವು?
- ರಾಷ್ಟ್ರ ನಿರ್ಮಾಣಕ್ಕೆ ಸಂಬಂಧಿಸಿದ ವಿವಿಧ ಸಿದ್ಧಾಂತಗಳು ಯಾವುವು?
- ಪೌರತ್ವ ಎಂದರೇನು?
- ಪೌರ ಹಾಗೂ ವಿದೇಶೀ ವ್ಯಕ್ತಿಗಳೊಳಗಿನ ವ್ಯತ್ಯಾಸವನ್ನು ವಿವರಿಸಿರಿ.
- ಅಪೇಕ್ಷಿತ ಪೌರತ್ವ ಹಾಗೂ ಸ್ವಾಭಾವಿಕ ಪೌರತ್ವಗಳನ್ನು ವಿಶದೀಕರಿಸಿರಿ.
- ರಾಜ್ಯಶಾಸ್ತ್ರ ಎಂದರೇನು? ಕೆಳಗೆ ನೀಡಿರುವ ವ್ಯಕ್ತಿಗಳಲ್ಲಿ ಯಾರನ್ನು ರಾಜ್ಯಶಾಸ್ತ್ರದ ಪಿತನೆಂದು ಕರೆಯುತ್ತಾರೆ?

  ಎ) ಅರಿಸ್ಟಾಟಲ್ ಬಿ) ಪ್ಲೇಟೊ

  ಸಿ) ಸೋಕ್ರೆಟಿಸ್ ಡಿ) ಕೌಟಿಲ್ಯ

## ಮುಂದುವರಿದ ಚಟುವಟಿಕೆಗಳು

- ಪ್ರಧಾನ ರಾಜಕೀಯ ಚಿಂತಕರ ಚಿತ್ರಗಳನ್ನು ಸಂಗ್ರಹಿಸಿ ಅಡಿಟಿಪ್ಪಣಿಯೊಂದಿಗೆ ಆಲ್ಬಂ ತಯಾರಿಸಿರಿ.
- ಪ್ರಮುಖ ಚಿಂತಕರು, ಕೃತಿಗಳು ಹಾಗೂ ಅವರು ಮುಂದಿರಿಸಿದ ಸಿದ್ಧಾಂತಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.
- ಭಾರತ ಸರಕಾರ ಜಾರಿಗೊಳಿಸುವ ಜನರಕ್ಷೇಮ ಯೋಜನೆಗಳನ್ನು ಪಟ್ಟಿಮಾಡಿ ಅವುಗಳ ಪ್ರಾಧಾನ್ಯತೆಗಳ ಕುರಿತು ಟಿಪ್ಪಣಿ ತಯಾರಿಸಿರಿ.

ಅಧ್ಯಾಯ

10



# ಪೌರಪ್ರಜ್ಞೆ



## ಹಾಜಬ್ಬ

ಇವರು ಮಂಗಳೂರಿನ ಸಮೀಪದ ನ್ಯೂಪದವು ಗ್ರಾಮದಲ್ಲಿ ಪಂಚಾಯತ್ ಶಾಲೆ ಸ್ಥಾಪಿಸಿ ಸಾವಿರಾರು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒದಗಿಸಿದ್ದಾರೆ. ಮಾರ್ಗದ ಬದಿಯಲ್ಲಿ ಕಿತ್ತಳೆ ವ್ಯಾಪಾರ ಮಾಡುತ್ತಿರುವ ಇವರು ನಿರಕ್ಷರರು. ತನಗೆ ಲಭಿಸದ ವಿದ್ಯಾಭ್ಯಾಸವು ಸಮಾಜದ ಎಲ್ಲರಿಗೂ ಲಭಿಸಲು ಸಂದರ್ಭವನ್ನೊದಗಿಸಿದ ಇವರು ಜನರಿಗೆ ಮಾದರಿ ವ್ಯಕ್ತಿಯಾಗಿದ್ದಾರೆ.



## ಕಲ್ಲೆನ್‌ಪೊಕ್ಕುಡನ್

ಕಣ್ಣೂರು ಜಿಲ್ಲೆಯ ಪಯಜಾಡಿ ಗ್ರಾಮದಲ್ಲಿ ಜನಿಸಿದ ಕಲ್ಲೆನ್ ಪೊಕ್ಕುಡನ್ ಪ್ರಸಿದ್ಧ ಪರಿಸರ ಸಂರಕ್ಷಕರಾಗಿದ್ದರು. ಎರಡನೆಯ ತರಗತಿಯವರೆಗೆ ಮಾತ್ರವೇ ವಿದ್ಯಾಭ್ಯಾಸ ಹೊಂದಿದ ಪೊಕ್ಕುಡನ್ ಕಾಂಡ್ಲ ಕಾಡುಗಳ ಸಂರಕ್ಷಣೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟವರು. ಸಾವಿರಾರು ಕಾಂಡ್ಲ ಗಿಡಗಳನ್ನು ನೆಟ್ಟುಬೆಳೆಸಿ ಕಲ್ಲೆನ್ ಪೊಕ್ಕುಡನ್ ಪರಿಸರ ಪ್ರಜ್ಞೆಯನ್ನು ಮೂಡಿಸುವಲ್ಲಿ ಮಾದರಿಯಾಗಿದ್ದರು.

ಹಾಜಬ್ಬ ಹಾಗೂ ಕಲ್ಲೆನ್ ಪೊಕ್ಕುಡನ್‌ರವರು ಸಮಾಜದ ಒಳಿತಿಗಾಗಿ ತಾವು ಸ್ವತಃ ಆಯ್ಕೆಮಾಡಿಕೊಂಡ ವಲಯಗಳಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿದವರಾಗಿದ್ದಾರೆ.

ಇವರ ಕುರಿತು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಸಹಪಾಠಿಗಳೊಂದಿಗೆ ಚರ್ಚಿಸಲು ಪ್ರಯತ್ನಿಸಿರಿ.

ಇವರ ಜೀವನವು ಸಾಮಾನ್ಯ ವ್ಯಕ್ತಿಗಳಿಗೂ ಅದ್ಭುತವಾದ ಬದಲಾವಣೆಗಳನ್ನು ಮಾಡಲು ಸಾಧ್ಯವಿದೆ ಎಂಬ ಸಂದೇಶವನ್ನು ನೀಡುತ್ತದೆ. ವಿಭಿನ್ನವಾದ ಚಿಂತನೆಗಳು, ನಿಸ್ವಾರ್ಥವಾದ ಕೆಲಸಗಳು, ಸಮಾಜದ ಸಹಜೀವಿಗಳ ಸಮಸ್ಯೆಗಳ ಕುರಿತಾದ ಪ್ರಜ್ಞೆ ಹಾಗೂ ಸೇವಾ ಮನೋಭಾವವು ಇವರಿಗೆ ಪ್ರೇರಣೆಯಾಗಿದೆ.




**ಸಮಾಜದ ಏಳಿಗೆಗಾಗಿ ಈ ರೀತಿಯಲ್ಲಿ ಕಾರ್ಯಪ್ರವೃತ್ತರಾದ ವ್ಯಕ್ತಿಗಳ ಕುರಿತು ನಿಮಗೆ ತಿಳಿದಿದೆಯೇ? ಅಂತಹ ವಿಶೇಷ ವ್ಯಕ್ತಿಗಳ ಕುರಿತು ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.**

ಉತ್ತಮವಾದ ಸಮಾಜ ಸೃಷ್ಟಿಗೆ ಎಲ್ಲರಲ್ಲೂ ಇಂತಹ ಮನೋಭಾವಗಳು ಮತ್ತು ಮೌಲ್ಯಗಳು ರೂಪುಗೊಳ್ಳಬೇಕಾದುದು ಅನಿವಾರ್ಯವಾಗಿದೆ. ಆಧುನಿಕ ಸಮಾಜದಲ್ಲಿನ ಪ್ರತಿಯೋರ್ವ ಸದಸ್ಯನನ್ನು ಪೌರನೆಂದು ಕರೆಯುತ್ತಾರೆ. ಪೌರಪ್ರಜ್ಞೆಯೆಂದರೆ ಪ್ರತಿಯೊಬ್ಬ ಪೌರನೂ ಸಮಾಜಕ್ಕೆ ಬದ್ಧನಾಗಿರಬೇಕು ಮತ್ತು ಸಮಾಜದ ಉತ್ತಮ ಆಸಕ್ತಿಗಳು ಪೌರನದ್ದಾಗಿದೆ ಎಂಬ ತಿಳುವಳಿಕೆಯಾಗಿದೆ. ಪೌರಪ್ರಜ್ಞೆ ಇರುವವನು ತನ್ನೊಂದಿಗೆ, ಸಮೂಹದೊಂದಿಗೆ, ಮಾನವೀಯತೆಯೊಂದಿಗೆ ಒಟ್ಟಾಗಿ ಜವಾಬ್ದಾರಿಯುಳ್ಳವನಾಗಿರುತ್ತಾನೆ.

## ಪೌರಪ್ರಜ್ಞೆಯ ಪ್ರಾಧಾನ್ಯತೆ

ಸಮಾಜದ ಹಾಗೂ ರಾಷ್ಟ್ರದ ಪ್ರಗತಿಯಲ್ಲಿ ಪೌರಪ್ರಜ್ಞೆಯು ಅತಿಹೆಚ್ಚು ಪ್ರಭಾವ ಬೀರುತ್ತದೆ. ಪೌರಪ್ರಜ್ಞೆ ಇಲ್ಲದಿದ್ದಲ್ಲಿ ಮಾನವನು ಸ್ವಾರ್ಥಿಯಾಗುತ್ತಾನೆ ಮತ್ತು ತಾನು ಮಾಡುವ ಎಲ್ಲ ಕಾರ್ಯಗಳನ್ನು ತನ್ನ ಸ್ವಾರ್ಥ ಸಾಧನೆಗೆ ಬಳಸುತ್ತಾನೆ. ಇದು ಸಾಮಾಜಿಕ ಜೀವನದ ಮೇಲೆ ಪ್ರತಿಕೂಲ ಪರಣಾಮ ಬೀರುತ್ತದೆ. ಇಂತಹ ಸಮಾಜದಲ್ಲಿ ಶಾಂತಿ ಸಮಾಧಾನಗಳು ಇರಲಾರವು.

ಕೊಟ್ಟಿರುವ ವಾರ್ತಾ ಶೀರ್ಷಿಕೆಗಳನ್ನು ನಿರೀಕ್ಷಿಸಿರಿ. ನಮ್ಮ ಸಾರ್ವಜನಿಕ ಸಮಾಜವು ಎದುರಿಸುತ್ತಿರುವ ಕೆಲವು ಸಮಸ್ಯೆಗಳನ್ನು ಇಲ್ಲಿ ಸೂಚಿಸಲಾಗಿದೆ. ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ರಾಷ್ಟ್ರಕ್ಕೆ ಮಾತ್ರ ಸಾಧ್ಯವೆ? ಜನರ ಒಗ್ಗಟ್ಟಾದ ಚಟುವಟಿಕೆ ಮತ್ತು ಸಹಕಾರವು ಇದಕ್ಕೆ ಅನಿವಾರ್ಯವಾಗಿದೆ. ಸಾರ್ವಜನಿಕ ಸಮಾಜವು ಎದುರಿಸುತ್ತಿರುವ ಕೆಲವು ಸಮಸ್ಯೆಗಳು ಹಾಗೂ ಅವುಗಳಿಗಿರುವ ಕೆಲವು ಪರಿಹಾರಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. ಹೆಚ್ಚಿನ ಪರಿಹಾರಗಳನ್ನು ಬರೆದು ಪಟ್ಟಿಯನ್ನು ವಿಸ್ತರಿಸಿರಿ.



| ಸಮಸ್ಯೆಗಳು | ನಾವೇನು ಮಾಡಬಹುದು? |
|---|---|
| • ಜಲಕ್ಷಾಮ | • ಕಾರ್ಯದಕ್ಷತೆಯಿಂದ ಕೂಡಿದ ಬಳಕೆ<br>•<br>• |
| • ಪರಿಸರ ಮಲಿನೀಕರಣ | • ಮಾಲಿನ್ಯವನ್ನು ಉಗಮಸ್ಥಳದಲ್ಲೇ ಸಂಸ್ಕರಿಸುವುದು.<br>•<br>• |
| • ಪ್ರಳಯ | • ಸುರಕ್ಷಿತ ಜಾಗಗಳಿಗೆ ಸ್ಥಳಾಂತರಗೊಳ್ಳುವುದು.<br>•<br>• |
| • ಭ್ರಷ್ಟಾಚಾರ | • ಭ್ರಷ್ಟಾಚಾರಕ್ಕೆದುರಾಗಿ ಜಾಗೃತಿ ಮೂಡಿಸುವುದು<br>•<br>• |

ಸಾರ್ವಜನಿಕರು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪೌರಪ್ರಜ್ಞೆ ಸಹಾಯಕವಾಗುತ್ತದೆಯೆಂದು ಇದರಿಂದ ತಿಳಿದುಕೊಳ್ಳಬಹುದು.

ಎಲ್ಲರ ಕ್ಷೇಮವನ್ನು ಖಚಿತಪಡಿಸುವುದಕ್ಕೂ ಸಮಾಜದ ಪುನರ್‌ನಿರ್ಮಾಣಕ್ಕೂ ಉತ್ತಮವಾದ ಪೌರಪ್ರಜ್ಞೆಯನ್ನು ಬೆಳೆಸಬೇಕು. ರಾಷ್ಟ್ರದ ಪ್ರಗತಿಗೆ ಹಾಗೂ ಏಕತೆಗೆ ಇದು ತುಂಬ ಸಹಾಯಕವಾಗಬಹುದು. ಆದುದರಿಂದಲೇ ಪೌರಪ್ರಜ್ಞೆ ಬೆಳೆಸಲು ಎಲ್ಲ ರಾಷ್ಟ್ರಗಳು ಮತ್ತು ಸಮಾಜಗಳು ಹೆಚ್ಚಿನ ಪ್ರಾಧಾನ್ಯತೆವನ್ನು ನೀಡುತ್ತಿವೆ. ಕೇರಳ ಜನತೆಯನ್ನು ದುರಂತಕ್ಕೀಡುಮಾಡಿದ 2018 ಆಗಸ್ಟ್‌ನಲ್ಲಿ ಉಂಟಾದ ಮಹಾಪ್ರಳಯವನ್ನು ಎದುರಿಸಿ ಜೀವಿಸಲು ಸಾಧ್ಯವಾದುದು ವ್ಯತ್ಯಸ್ತ ಜನವಿಭಾಗಗಳು ಒಟ್ಟಾಗಿ ನಡೆಸಿದ ರಕ್ಷಣಾಕಾರ್ಯಗಳಿಂದಾಗಿದೆ. ಪೌರ ಪ್ರಜ್ಞೆಗೆ ಇದು ಉತ್ತಮ ಉದಾಹರಣೆಯಾಗಿದೆ. ಪ್ರತಿಯೊಬ್ಬರ ಚಟುವಟಿಕೆಗಳು ಸಮಾಜದ ಒಳಿತಿಗಾಗಿರುವಾಗ ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದೆಂಬ ತಿಳುವಳಿಕೆಯೇ ಪೌರಪ್ರಜ್ಞೆಗೆ ಆಧಾರ.

*ಪರಿಸರ ಸಂರಕ್ಷಣೆ, ಭ್ರಷ್ಟಾಚಾರಕ್ಕೆದುರಾಗಿ ಪ್ರಜ್ಞೆ ಮೂಡಿಸುವುದು ಎಂಬ ವಿಷಯವನ್ನು ಒಳಪಡಿಸಿ ಕಿರು ಚಿತ್ರ ತಯಾರಿಸಿ ಮಂಡಿಸಿರಿ.*



## ಪೌರಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳು

ಪೌರಪ್ರಜ್ಞೆಯನ್ನು ರೂಪಿಸುವಲ್ಲಿ ಜೀವನದ ಸನ್ನಿವೇಶಗಳು ಮತ್ತು ಅನುಭವಗಳು ಪ್ರಭಾವ ಬೀರುತ್ತವೆ. ಪ್ರತಿಯೊಬ್ಬ ವ್ಯಕ್ತಿಗೂ ಜೀವನದ ಸನ್ನಿವೇಶಗಳು ವ್ಯತ್ಯಸ್ತ ಅನುಭವಗಳನ್ನು ನೀಡುವುದರಿಂದಾಗಿ ಪೌರಪ್ರಜ್ಞೆಯಲ್ಲಿಯೂ ಏರುಪೇರು ಉಂಟಾಗುತ್ತದೆ. ಪೌರಪ್ರಜ್ಞೆಯನ್ನು ರೂಪಿಸುವ ಪ್ರಧಾನ ಘಟಕಗಳು ಈ ಕೆಳಗಿನಂತಿವೆ.

- ಕುಟುಂಬ
- ಶಿಕ್ಷಣ
- ಸಾಮಾಜಿಕ ವ್ಯವಸ್ಥೆ
- ಸಂಘಟನೆಗಳು
- ರಾಜಕೀಯ ವ್ಯವಸ್ಥೆ

NT-911-8-SOC.SCI.-I-10-K-VOL.2

ಮೇಲೆ ಹೇಳಿರುವ ಪ್ರತಿಯೊಂದು ಘಟಕವೂ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಅವುಗಳು ಮನುಷ್ಯನ ಚಿಂತನೆಯನ್ನು ಮತ್ತು ಚಟುವಟಿಕೆಯನ್ನು ರೂಪಿಸುತ್ತವೆ. ಅನುಕೂಲಕರವಾದ ಸನ್ನಿವೇಶಗಳು ಮಾತ್ರವಲ್ಲ ಪ್ರತಿಕೂಲ ಸವಾಲುಗಳನ್ನುಂಟುಮಾಡುವ ಸನ್ನಿವೇಶಗಳು ಒಬ್ಬ ವ್ಯಕ್ತಿಯಲ್ಲಿ ಪ್ರಬಲವಾದ ಪೌರಪ್ರಜ್ಞೆಯನ್ನು ರೂಪಿಸುವುದಕ್ಕೆ ಸಹಾಯಕವಾಗುತ್ತವೆ.



**ವ್ಯತ್ಯಸ್ತ ಜೀವನ ಸನ್ನಿವೇಶಗಳು ಹೇಗೆ ಪೌರಪ್ರಜ್ಞೆ ರೂಪಿಸುವುದಕ್ಕೆ ಸಹಾಯಕವಾಗುತ್ತದೆ ಎಂಬುದನ್ನು ಚರ್ಚಿಸಿರಿ. ಅನುಕೂಲ ಮತ್ತು ಪ್ರತಿಕೂಲ ಸನ್ನಿವೇಶಗಳ ಪ್ರಭಾವದಿಂದ ಪೌರಪ್ರಜ್ಞೆಯು ರೂಪುಗೊಂಡ ವ್ಯಕ್ತಿಗಳನ್ನು ಕಂಡುಕೊಂಡು ಪಟ್ಟಿ ತಯಾರಿಸಿರಿ.**

## ಪೌರಪ್ರಜ್ಞೆಯನ್ನು ಹೇಗೆ ಬೆಳೆಸಬಹುದು?

ಪೌರಪ್ರಜ್ಞೆ ಬೆಳೆಸಿ ಉಳಿಸಬೇಕಾದುದು ಅನಿವಾರ್ಯವಾಗಿದೆ. ಪೌರಪ್ರಜ್ಞೆ ಬೆಳೆಸುವುದಕ್ಕಾಗಿ ಪ್ರಜ್ಞಾಪೂರ್ವಕವಾದ ಪ್ರಯತ್ನ ಅಗತ್ಯವಾಗಿದೆ. ಪ್ರತಿಯೊಂದು ಸಮಾಜವೂ ಪೌರಪ್ರಜ್ಞೆ ಬೆಳೆಸುವುದಕ್ಕೆ ಕ್ರಿಯಾತ್ಮಕವಾದ ಕ್ರಮಗಳನ್ನು ಕೈಗೊಳ್ಳುತ್ತದೆ.

ಸಾಮಾಜಿಕ ಕ್ಷೇಮವನ್ನು ಪೂರ್ಣವಾಗಿ ಅರ್ಥೈಸಿಕೊಂಡು ನಡೆಸುವ ಕ್ರಿಯಾತ್ಮಕ ಸಹಭಾಗಿತ್ವದ ಮೂಲಕ ಮಾತ್ರವೇ ಎಲ್ಲರಲ್ಲೂ ಪೌರಪ್ರಜ್ಞೆ ಬೆಳೆಸಲು ಸಾಧ್ಯ. ಕೆಲವು ವಿಧಾನಗಳನ್ನು ಕೆಳಗೆ ಕೊಡಲಾಗಿದೆ.

### ಕುಟುಂಬ

ಕುಟುಂಬವು ಹಿರಿಯರನ್ನು ಗೌರವಿಸಲು ಮತ್ತು ಸಾಮಾಜಿಕ ಸೇವೆಯಲ್ಲಿ ಪಾಲ್ಗೊಳ್ಳಲು ಕಲಿಸುವ ಪ್ರಾಥಮಿಕ ಸಂಸ್ಥೆಯಾಗಿದೆ. ಸದಸ್ಯರಲ್ಲಿ ಕರ್ತವ್ಯಪ್ರಜ್ಞೆ ಬೆಳೆಸುವುದರಲ್ಲೂ ಉಳಿಸುವುದರಲ್ಲೂ ಕುಟುಂಬವು ಪ್ರಧಾನ ಪಾತ್ರವಹಿಸುತ್ತದೆ. ಕುಟುಂಬದಿಂದ ಲಭಿಸುವ ಪ್ರೇರಣೆ ಹಾಗೂ ಪ್ರೋತ್ಸಾಹವು ಉನ್ನತವಾದ ಪೌರಪ್ರಜ್ಞೆಯನ್ನು ಬೆಳೆಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಕುಟುಂಬಕ್ಕಾಗಿ, ಕುಟುಂಬವು ಸಮಾಜಕ್ಕಾಗಿ ಎಂಬ ಪ್ರಜ್ಞೆಯನ್ನು ಕುಟುಂಬದಲ್ಲಿ ಬೆಳೆಸಲು ಸಾಧ್ಯವಾಗಬೇಕು.



**ಕುಟುಂಬವು ಪೌರಪ್ರಜ್ಞೆಯನ್ನು ರೂಪಿಸುವಲ್ಲಿ ಹೇಗೆ ಪ್ರಭಾವ ಬೀರುತ್ತದೆ? ಚರ್ಚಿಸಿರಿ.**

*ನಿಮ್ಮ ಶಾಲೆಯಲ್ಲಿ ನಡೆಸುವ ವಿವಿಧ ಚಟುವಟಿಕೆಗಳನ್ನು ಒಳಪಡಿಸಿ ಬ್ಲೋಗ್ ತಯಾರಿಸಿರಿ.*



### ವಿದ್ಯಾಭ್ಯಾಸ

ವಿವಿಧ ವಿಷಯಗಳ ಕಲಿಕೆಯ ಮೂಲಕ ಲಭಿಸುವ ಜ್ಞಾನವನ್ನು ಸಮಾಜಕ್ಕೆ ಪ್ರಯೋಜನಕರವಾಗುವ ರೀತಿಯಲ್ಲಿ ಉಪಯೋಗಿಸಲು ವ್ಯಕ್ತಿಯನ್ನು ಸಜ್ಜುಗೊಳಿಸುವುದು ವಿದ್ಯಾಭ್ಯಾಸದ ಉದ್ದೇಶವಾಗಿದೆ. ಮೌಲ್ಯಪ್ರಜ್ಞೆ, ಸಹಿಷ್ಣುತೆ, ನಾಯಕತ್ವ ಗುಣ, ಪರಿಸರ ಪ್ರಜ್ಞೆ, ವೈಜ್ಞಾನಿಕ ಪ್ರಜ್ಞೆ ಮುಂತಾದುವುಗಳನ್ನು ಬೆಳೆಸಲು ವಿದ್ಯಾಭ್ಯಾಸವು ಸಹಾಯಕವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಮಾಜಕ್ಕೆ

ಪ್ರಯೋಜನಕಾರಿಯಾದ ರೀತಿಯಲ್ಲಿ ಉಪಯೋಗಿಸಲು ವಿದ್ಯಾಭ್ಯಾಸದ ಮೂಲಕ ಸಾಧ್ಯವಾಗಬೇಕು. ಮೌಲ್ಯಾಧಾರಿತ ಶಿಕ್ಷಣದ ಮೂಲಕ ಪೌರಪ್ರಜ್ಞೆಯನ್ನು ಜನರೆಡೆಗೆ ತಲುಪಿಸಲು ಸಾಧ್ಯ. ಈ ಉದ್ದೇಶಕ್ಕಾಗಿ ಸರಕಾರಗಳು ವಿದ್ಯಾಭ್ಯಾಸ ಧೋರಣೆಗಳಿಗೆ ರೂಪುನೀಡುತ್ತವೆ.

**ಪೌರಪ್ರಜ್ಞೆ ರೂಪಿಸಲು ಸಹಾಯಕವಾಗುವ ಯಾವೆಲ್ಲ ಚಟುವಟಿಕೆಗಳನ್ನು ಶಾಲೆಗಳಲ್ಲಿ ನಡೆಸಲು ಸಾಧ್ಯವಿದೆ. ವಾರ್ಷಿಕ ಕ್ಯಾಲೆಂಡರ್ ತಯಾರಿಸಿ ಕಾರ್ಯಗತಗೊಳಿಸಿರಿ.**



## ಸಂಘಟನೆಗಳು

ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಕಾರ್ಯವೆಸಗುವ ಅನೇಕ ಸಂಘಟನೆಗಳು ನಮ್ಮ ಸಮಾಜದಲ್ಲಿವೆ ಎಂದು ನಿಮಗೆ ತಿಳಿದಿದೆಯಲ್ಲವೇ. ಇಂತಹ ಸಂಸ್ಥೆಗಳು ಸೇವಾ ಮನೋಭಾವದಿಂದ ಕಾರ್ಯವೆಸಗಲು ಒಬ್ಬ ವ್ಯಕ್ತಿಯನ್ನು ಸಜ್ಜುಗೊಳಿಸುತ್ತದೆ.

ಪರಿಸರ ಸಂರಕ್ಷಣೆ, ಮಾನವ ಹಕ್ಕುಗಳ ಸಂರಕ್ಷಣೆ, ಸಾಂತ್ವನ ಚಟುವಟಿಕೆಗಳು ಮುಂತಾದ ವಲಯಗಳಲ್ಲಿ ಅನೇಕ ಸ್ವಯಂಸೇವಾ ಸಂಘಟನೆಗಳು ಕಾರ್ಯವೆಸಗುತ್ತಿವೆ. ಪರಿಸರ ಪ್ರಜ್ಞೆ ಹಾಗೂ ಮಾನವನ ಹಕ್ಕುಗಳ ಪ್ರಜ್ಞೆಯನ್ನು ವ್ಯಕ್ತಿಗಳಲ್ಲಿ ಮೂಡಿಸಲು ಇಂತಹ ಸಂಘಟನೆಗಳಿಗೆ ಸಾಧ್ಯವಾಗುತ್ತದೆ.

## ಮಾಧ್ಯಮಗಳು

ಪೌರಪ್ರಜ್ಞೆ ರೂಪೀಕರಣದಲ್ಲಿ ಮಾಧ್ಯಮಗಳಿಗೆ ಪ್ರಧಾನ ಪಾತ್ರವಿದೆ. ಪತ್ರಿಕೆಗಳು ಮತ್ತು ಎಲೆಕ್ಟ್ರೋನಿಕ್ ಮಾಧ್ಯಮಗಳು ಸಮಾಜದ ಮೇಲೆ ಅತಿಹೆಚ್ಚು ಪ್ರಭಾವ ಬೀರುತ್ತವೆ. ಮಾಧ್ಯಮಗಳು ವಾರ್ತೆ ಮತ್ತು ಮಾಹಿತಿಗಳನ್ನು ಜನರಿಗೆ ತಲುಪಿಸುತ್ತವೆ. ನಿಖರವಾದ ಮತ್ತು ವಸ್ತುನಿಷ್ಠವಾದ ಮಾಹಿತಿಗಳು ಕ್ರಿಯಾತ್ಮಕವಾದ ಆಶಯ ರೂಪೀಕರಣಕ್ಕೆ ಕಾರಣವಾಗುತ್ತವೆ. ಮಾಧ್ಯಮಗಳು ನಿಷ್ಪಕ್ಷಪಾತವೂ ಸ್ವತಂತ್ರವೂ ಆಗಿರಬೇಕು. ಮಾಧ್ಯಮಗಳಿಂದ ಲಭಿಸುವ ತಿಳುವಳಿಕೆಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸಬೇಕು.

**ಪೌರಪ್ರಜ್ಞೆಯನ್ನು ಪ್ರತಿಫಲಿಸುವ ವಾರ್ತೆ ಹಾಗೂ ಚಿತ್ರಗಳನ್ನೊಳಗೊಂಡ ಆಲ್ಬಂ ತಯಾರಿಸಿರಿ.**



## ಪ್ರಜಾಪ್ರಭುತ್ವ ವ್ಯವಸ್ಥೆ

ಪ್ರಜಾಪ್ರಭುತ್ವವು ಪೌರಪ್ರಜ್ಞೆಯನ್ನು ಮೂಡಿಸಲು ಅನಿವಾರ್ಯವಾದ ಘಟಕವಾಗಿದೆ. ಪ್ರಜಾಪ್ರಭುತ್ವವು ಪೌರಪ್ರಜ್ಞೆ ಬೆಳೆಸಲು ಸಹಾಯಕವಾಗುವ ಎಲ್ಲಾ ಘಟಕಗಳಿಗೂ ಆಧಾರವಾಗಿದೆ. ಪ್ರಜಾಪ್ರಭುತ್ವವು ಒಂದು ಆಡಳಿತ ವಿಧಾನ ಎಂಬುದಕ್ಕಿಂತಲೂ ಒಂದು ಜೀವನ ವಿಧಾನವಾಗಿದೆ. ನಮ್ಮ ಎಲ್ಲ ಚಟುವಟಿಕೆಗಳಲ್ಲಿಯೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಜನರು ಪರಸ್ಪರ ಸಹಕಾರದೊಂದಿಗೆ ಜೀವಿಸಬೇಕಾದುದು ಪ್ರಜಾಪ್ರಭುತ್ವದಲ್ಲಿ ಅನಿವಾರ್ಯವಾಗಿದೆ. ಇನ್ನೊಬ್ಬರಿಂದ ಸ್ವೀಕರಿಸುವ ಸಹಕಾರ ಮತ್ತು ಪ್ರೋತ್ಸಾಹವನ್ನು ಹಿಂತಿರುಗಿಸಿ ನೀಡಬೇಕೆಂಬುದು

ಉತ್ತಮ ಪ್ರಜಾಪ್ರಭುತ್ವ ಪ್ರಜ್ಞೆಯ ಸಂಕೇತವಾಗಿದೆ. ಪ್ರಜಾಪ್ರಭುತ್ವವು ಸಹಜೀವಿಗಳ ಕುರಿತು ಚಿಂತಿಸಲು ಹಾಗೂ ಅವರ ಸ್ವಾತಂತ್ರ್ಯ, ಸಮಾನ ಹಕ್ಕುಗಳು ಎಂಬಿವುಗಳನ್ನು ಸಂರಕ್ಷಿಸುವುದಕ್ಕಾಗಿ ಕಾರ್ಯ ಪ್ರವೃತ್ತರಾಗಲು ವ್ಯಕ್ತಿಗಳನ್ನು ಪ್ರೇರೇಪಿಸುತ್ತದೆ. ಪ್ರಜಾಪ್ರಭುತ್ವವು ಕಾನೂನಿನ ಆಡಳಿತದಲ್ಲಿ ವಿಶ್ವಾಸವಿರಿಸಿದೆ. ಎಲ್ಲರೂ ನಿಯಮಕ್ಕೆ ವಿಧೇಯರಾಗಿದ್ದಾರೆ ಎಂಬುದು ಇದರ ಮೂಲತತ್ವ.

## ಉತ್ತಮ ವ್ಯಕ್ತಿತ್ವಗಳನ್ನು ಪರಿಚಯಿಸುವ



ಎ.ಪಿ.ಜೆ. ಅಬ್ದುಲ್ ಕಲಾಂ ಮದರ್ ತೆರೇಸ ಮಾಯಿಲಮ್ಮ ದಶರಥ್ ಮಾಂಜಿ

ಚಿತ್ರಗಳನ್ನು ನಿರೀಕ್ಷಿಸಿರಿ. ಇವರು ಸಮಾಜಕ್ಕೆ ಉನ್ನತ ಕೊಡುಗೆಗಳನ್ನು ನೀಡಿರುವ ಉತ್ತಮ ಪೌರಪ್ರಜ್ಞೆಯಿರುವ ವ್ಯಕ್ತಿಗಳಾಗಿದ್ದಾರೆ. ಇವರ ಕಾರ್ಯಕ್ಷೇತ್ರಗಳನ್ನು ಮತ್ತು ಕೊಡುಗೆಗಳನ್ನು ಕಂಡುಹಿಡಿಯಿರಿ.

ಇವರು ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವಾಗ ಮಾನವೀಯತೆ, ಸಹವರ್ತಿಗಳೊಂದಿಗೆ ಸ್ನೇಹ ಮತ್ತು ಕರ್ತವ್ಯಪ್ರಜ್ಞೆಯನ್ನು ಪ್ರದರ್ಶಿಸಿದವರು. ಇವರು ನಮಗೆ ನೀಡುವ ಸಂದೇಶವೇನು? ತಮ್ಮ ಕಾರ್ಯಕ್ಷೇತ್ರಗಳಲ್ಲಿ ಎಲ್ಲರೂ ನಿಸ್ವಾರ್ಥತೆಯಿಂದ ಮತ್ತು ಅರ್ಪಣಾ ಮನೋಭಾವದಿಂದ ಕಾರ್ಯವೆಸಗಬೇಕು. ಪ್ರತಿಯೊಬ್ಬನೂ ಈ ರೀತಿಯಲ್ಲಿ ಚಿಂತಿಸಲು ಮತ್ತು ಕಾರ್ಯವೆಸಗಲು ತೊಡಗುವಾಗ ಸಾಮಾಜಿಕ ಪ್ರಗತಿಯು ಸಾಧ್ಯವಾಗುತ್ತದೆ. ಜೈವಿಕ ಕೃಷಿ, ರಸ್ತೆ ಸುರಕ್ಷಾ ಪ್ರಜ್ಞೆ ಮೂಡಿಸುವುದು, ಮಾದಕದ್ರವ್ಯ ವಿರುದ್ಧ ಚಟುವಟಿಕೆಗಳು, ಜೀವರಕ್ಷಾ ಕಾರ್ಯಕ್ರಮಗಳು ಎಂಬಿವುಗಳಲ್ಲಿ ನೀವು ಭಾಗವಹಿಸುವಿರಲ್ಲವೇ. ಇವುಗಳು ನಿಮ್ಮಲ್ಲಿರುವ ಪೌರಪ್ರಜ್ಞೆಯನ್ನು ಸ್ಪಷ್ಟಪಡಿಸುತ್ತವೆ.



**ಪೌರಪ್ರಜ್ಞೆಯನ್ನು ರೂಪಿಸಲು ವಿದ್ಯಾಲಯಗಳಲ್ಲಿ ಯಾವೆಲ್ಲ ಚಟುವಟಿಕೆಗಳನ್ನು ಜಾರಿಗೊಳಿಸಬಹುದು ಎಂಬುದನ್ನು ಪಟ್ಟಿಮಾಡಿರಿ.**

## ಪೌರಪ್ರಜ್ಞೆ ಮತ್ತು ನೈತಿಕತೆ

ಮಾನವನ ಜೀವನದ ಎಲ್ಲಾ ಹಂತಗಳಲ್ಲೂ ಪ್ರತಿಫಲಿಸಬೇಕಾದ ನೈತಿಕತೆಯ ಕುರಿತಾದ ಗಾಂಧೀಜಿಯವರ ದೃಷ್ಟಿಕೋನವನ್ನು ಮೇಲೆ ನೀಡಲಾಗಿದೆ. ಎಲ್ಲಾ ಚಟುವಟಿಕೆಯ ಆಧಾರವು ನೈತಿಕತೆಯಾಗಿದೆ. ನೈತಿಕತೆ ಎಂದರೇನು? ನೈತಿಕತೆಯೆಂದರೆ ಒಳಿತು ಕೆಡುಕುಗಳನ್ನು ತಿಳಿದುಕೊಂಡು ಒಳ್ಳೆಯದನ್ನು ಸ್ವೀಕರಿಸಿಕೊಂಡು ಕರ್ತವ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದಾಗಿದೆ.

ಸಮಾಜ ಮತ್ತು ರಾಷ್ಟ್ರಕ್ಕಾಗಿ ಮಾಡಬೇಕಾದ ಕರ್ತವ್ಯವನ್ನು ನೆರವೇರಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರಬೇಕು.

**ಗಾಂಧೀಜಿಯ ದೃಷ್ಟಿಕೋನದಲ್ಲಿ ನೈತಿಕತೆ**



- ಆದರ್ಶರಹಿತ ರಾಜಕೀಯ
- ಶ್ರಮರಹಿತ ಸಂಪತ್ತು
- ಮಾನವೀಯತೆ ಇಲ್ಲದ ವಿಜ್ಞಾನ
- ನೀತಿ ಇಲ್ಲದ ವ್ಯಾಪಾರ
- ಮೌಲ್ಯರಹಿತ ವಿದ್ಯಾಭ್ಯಾಸ
- ತ್ಯಾಗರಹಿತ ಆರಾಧನೆ
- ಮನಃಸ್ಸಾಕ್ಷಿಗೆ ವಿರುದ್ಧವಾದ ಸಂತೋಷ

ಇವುಗಳು ಹೆಚ್ಚು ಅಪಾಯಕಾರಿ

ನಮ್ಮ ಚಿಂತನೆಗಳನ್ನು ಮತ್ತು ಕಾರ್ಯಗಳನ್ನು ಅವಲೋಕಿಸಿ ನೋಡಿರಿ. ಅದರಲ್ಲಿ ನೈತಿಕತೆಯು ಒಳಗೊಂಡಿರುವ ಅಥವಾ ನೈತಿಕವಲ್ಲದ ಅಂಶವಿರಬಹುದು. ನಮ್ಮ ಸಮಾಜದಲ್ಲಿ ನಡೆಯುವ ವಿವಿಧ ಘಟನೆ ಹಾಗೂ ಚಟುವಟಿಕೆಗಳನ್ನು ಅವಲೋಕಿಸಿ ನೈತಿಕ ಮತ್ತು ನೈತಿಕವಲ್ಲದ ಚಟುವಟಿಕೆಗಳ ಪಟ್ಟಿಯನ್ನು ವಿಸ್ತರಿಸಿರಿ.



ನೈತಿಕತೆಯು ಪೌರಪ್ರಜ್ಞೆಗೆ ಸಹಾಯಕವಾಗಿದೆ. ಆದರೆ ಅನೈತಿಕತೆಯು ಪೌರಪ್ರಜ್ಞೆಯನ್ನು ನಿರ್ನಾಮಗೊಳಿಸುತ್ತದೆ. ಜೀವನದ ಎಲ್ಲಾ ವಲಯಗಳಲ್ಲೂ ನೈತಿಕ ಪ್ರಜ್ಞೆಯನ್ನು ಸೃಷ್ಟಿಸುವುದು ಪೌರಪ್ರಜ್ಞೆಯನ್ನು ಬೆಳೆಸಲಿರುವ ಹೆಚ್ಚು ಫಲಪ್ರದವಾದ ಮಾರ್ಗವಾಗಿದೆ. ಪೌರಪ್ರಜ್ಞೆಯು ಕ್ರಿಯಾತ್ಮಕವಾಗಿರುವ ಮಾನಸಿಕಾವಸ್ಥೆಯಾಗಿದೆ.

FF23E7

ಪೌರಪ್ರಜ್ಞೆ ಇರುವ ಹಾಗೂ ಪೌರಪ್ರಜ್ಞೆ ಇಲ್ಲದಿರುವ ಕೆಲವು ಚಟುವಟಿಕೆಗಳನ್ನು ಕೆಳಗೆ ಕೊಡಲಾಗಿದೆ. ಅವುಗಳಿಗೆ ಪೌರಪ್ರಜ್ಞೆಗೆ ಎದುರು(☑) ಗುರುತನ್ನೂ ಪೌರಪ್ರಜ್ಞೆ ಇಲ್ಲದಿರುವುದರ ಎದುರು(☒) ಗುರುತನ್ನು ದಾಖಲಿಸಿರಿ.

| ಹೇಳಿಕೆ | ಪೌರಪ್ರಜ್ಞೆ | ಪೌರಪ್ರಜ್ಞೆ ಇಲ್ಲದಿರುವುದು |
|---|---|---|
| • ಅದೆಷ್ಟೇ ತರಾತುರಿ ಇದ್ದರೂ ವಾಹನ ಚಲಾಯಿಸುವಾಗ ಸಾರಿಗೆ ನಿಯಮವನ್ನು ಪಾಲಿಸಬೇಕು. | | |
| • ಮನೆಯಲ್ಲಿನ ಮಾಲಿನ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿಕ್ಷೇಪಿಸುವುದರಲ್ಲಿ ತಪ್ಪಿಲ್ಲ. | | |
| • ಚಾರಿತ್ರಿಕ ಸ್ಮಾರಕಗಳನ್ನು ಸಂರಕ್ಷಿಸಬೇಕಾದುದು ನನ್ನ ಕರ್ತವ್ಯವಾಗಿದೆ. | | |
| • ಪ್ರಕೃತಿಯನ್ನು ಸಂರಕ್ಷಿಸಬೇಕಾದುದು ನನ್ನ ಕರ್ತವ್ಯವಾಗಿದೆ. | | |
| • ಅನ್ಯಾಯದ ವಿರುದ್ಧ ದೂರು ನೀಡಬಾರದು. | | |
| • ಅಗತ್ಯದ ಸಂದರ್ಭಗಳಲ್ಲಿ ಭ್ರಷ್ಟಾಚಾರ ನಡೆಸಬಹುದು. | | |
| • ವೃದ್ಧರನ್ನು ಗೌರವಿಸಬೇಕು ಹಾಗೂ ಸಂರಕ್ಷಿಸಬೇಕು. | | |

## ಪೌರಪ್ರಜ್ಞೆ ಹಾಗೂ ಸವಾಲುಗಳು

ಸಾರ್ವಜನಿಕ ಆಸಕ್ತಿಯನ್ನು ಅವಗಣಿಸಿ ಸ್ವಂತ ಆಸಕ್ತಿಗಳಿಗಾಗಿ ಏನನ್ನೂ ಮಾಡಲು ತಯಾರಾಗುವುದೇ ಪೌರಪ್ರಜ್ಞೆಯು ಎದುರಿಸುವ ಪ್ರಧಾನ ಸವಾಲಾಗಿದೆ. ವ್ಯಕ್ತಿಗೆ ಒಂದೇ ಸಮಯದಲ್ಲಿ ಕುಟುಂಬದೊಂದಿಗೆ ಹಾಗೂ ಸಮಾಜದೊಂದಿಗೆ ಜವಾಬ್ದಾರಿ ಇದೆ. ಈ ಸವಾಲುಗಳನ್ನು ಎದುರಿಸುವುದು ಹೇಗೆ?

- ಪ್ರತಿಯೊಬ್ಬರೂ ತಮ್ಮ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿರಿ.
- ಸಾರ್ವಜನಿಕ ಹಿತಾಸಕ್ತಿಗೆ ಹಾನಿಯಾಗದಂತೆ ಸ್ವಂತ ಆಸಕ್ತಿಗಳಿಗಾಗಿ ಪ್ರಯತ್ನಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಿರಿ.
- ಇತರರಿಂದ ನಿರೀಕ್ಷಿಸುವ ಬದಲಾವಣೆಗಳು ನಮ್ಮಿಂದಲೇ ಆರಂಭಿಸಬೇಕು.
- ಪ್ರಜಾಪ್ರಭುತ್ವ ಮತ್ತು ಸಹಿಷ್ಣುತೆಯ ಆಧಾರದಲ್ಲಿ ಕಾರ್ಯನಿರ್ವಹಿಸಿರಿ.
- ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಸಮಾನವಾಗಿ ಪರಿಗಣಿಸಬೇಕು.

ಇಂತಹ ಹೆಚ್ಚಿನ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು ಪೌರಪ್ರಜ್ಞೆಯ ಸವಾಲು ಗಳನ್ನು ಎದುರಿಸಲು ಸಹಾಯಕವಾಗಬಹುದು.



**ನಾವು ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳೋಣ...**

ಪೌರಪ್ರಜ್ಞೆಯಿರುವ ವಿದ್ಯಾರ್ಥಿ ಸಮಾಜಕ್ಕೆ ಮಾದರಿಯಾಗುವ ಅನೇಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳೋಣ. ಕೆಲವನ್ನು ಕೆಳಗೆ ನೀಡಲಾಗಿದೆ. ಹೆಚ್ಚಿನವುಗಳನ್ನು ಕಂಡುಕೊಳ್ಳುವಿರಲ್ಲವೇ.

- ಅಂಗಾಂಗ ದಾನ ನೀಡುವ ಸಮ್ಮತಿಪತ್ರ
- ರಕ್ತದಾನಕ್ಕೆ ತಯಾರಾಗುವುದು.
- ಎಸ್.ಪಿ.ಸಿ., ಎನ್.ಸಿ.ಸಿ, ಸ್ಕೌಟ್, ಗೈಡ್ಸ್ ಇತರ ಕ್ಲಬ್‌ಗಳು ಮುಂತಾದುವುಗಳ ಚಟುವಟಿಕೆಗಳಲ್ಲಿ ಭಾಗವಹಿಸುವುದು.
- ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿ ಇಡುವುದು.
- ಅಪಘಾತಕ್ಕೀಡಾದವರಿಗೆ ಪ್ರಥಮ ಚಿಕಿತ್ಸೆ ನೀಡುವುದು.
- ವಿಕಲಚೇತನರಿಗೂ ವೃದ್ಧರಿಗೂ ಸಹಾಯಮಾಡುವುದು.
- 
- 

## ಸಮಾಜವಿಜ್ಞಾನದ ಕಲಿಕೆ ಮತ್ತು ಪೌರಪ್ರಜ್ಞೆ

ಸಮಾಜವಿಜ್ಞಾನ ಕಲಿಕೆಗೆ ಪೌರಪ್ರಜ್ಞೆ ರೂಪೀಕರಣದಲ್ಲಿ ಪ್ರಧಾನ ಪಾತ್ರವಹಿಸಲು ಸಾಧ್ಯವಿದೆ. ಮನುಷ್ಯನು ಸಮಾಜದೊಂದಿಗೆ ಸೇರಿ ಒಂದಾಗುವ ಕಲಿಕಾವಲಯವೆಂಬ ನೆಲೆಯಲ್ಲಿ ಸಮಾಜವಿಜ್ಞಾನ ಕಲಿಕೆಯು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸಮಗ್ರವಾದ ಬದಲಾವಣೆಗೆ ಕಾರಣವಾಗುತ್ತದೆ. ಪೌರಪ್ರಜ್ಞೆ ರೂಪೀಕರಣಕ್ಕೆ ಸಮಾಜ ವಿಜ್ಞಾನ ಕಲಿಕೆಯನ್ನು ಹೇಗೆ ಉಪಯೋಗಿಸಬಹುದೆಂದು ಪರಿಶೀಲಿಸೋಣ.

- ವೈವಿಧ್ಯತೆಗಳನ್ನು ಗೌರವಿಸಲು, ಸಹಿಷ್ಣುತೆಯಿಂದ ವರ್ತಿಸಲು ವ್ಯಕ್ತಿಗಳನ್ನು ಪ್ರಾಪ್ತರನ್ನಾಗಿಸುತ್ತದೆ.
- ರಾಷ್ಟ್ರೀಯ-ಸಾಮಾಜಿಕ-ಆರ್ಥಿಕ-ಪರಿಸರ ಸಮಸ್ಯೆಗಳ ವಿವಿಧ ಹಿನ್ನೆಲೆಗಳನ್ನು ತಿಳಿದುಕೊಳ್ಳಲು ಸಹಾಯಮಾಡುತ್ತದೆ.
- ವಿವಿಧ ಸಮಸ್ಯೆಗಳಿಗೆ ಸಮಗ್ರವಾದ ಪರಿಹಾರ ನಿರ್ದೇಶಿಸಲು ವ್ಯಕ್ತಿಗಳನ್ನು ಸಜ್ಜುಗೊಳಿಸುತ್ತದೆ.

- ಶಾಂತಿ ಹಾಗೂ ಸಹಬಾಳ್ವೆಯ ಸಂದೇಶವನ್ನು ಜನರಿಗೆ ತಲುಪಿಸುತ್ತದೆ.
- ಪೌರಪ್ರಜ್ಞೆಯ ಉತ್ತಮ ಮಾದರಿಗಳನ್ನು ಹಾಗೂ ಚಟುವಟಿಕೆಗಳನ್ನು ಪರಿಚಯಿಸಿ ವ್ಯಕ್ತಿಗಳನ್ನು ಪೌರಪ್ರಜ್ಞೆಯುಳ್ಳವರನ್ನಾಗಿ ಮಾಡುವುದಲ್ಲದೆ ಕಾರ್ಯನಿರತರಾಗುವಂತೆ ಮಾಡಲು ಸಾಧ್ಯವಿದೆ.

ಒಂದು ಸಮಾಜದ ಬೆಳವಣಿಗೆ, ವಿಕಾಸ ಮತ್ತು ಸುಸ್ಥಿರವಾಗಿ ನೆಲೆನಿಲ್ಲಲು ಪೌರಪ್ರಜ್ಞೆ ಅತಿ ಅಗತ್ಯವೆಂದು ನೀವು ತಿಳಿದುಕೊಂಡಿರಲ್ಲವೇ. ಆದರೆ ಎಲ್ಲ ವ್ಯಕ್ತಿಗಳಲ್ಲೂ ಪೌರಪ್ರಜ್ಞೆ ಸೃಷ್ಟಿಸುವುದು ಕಷ್ಟಕರವಾದುದಾಗಿದೆ. ಮಹತ್ತರವಾದ ಈ ಕಾರ್ಯವನ್ನು ನಿರ್ವಹಿಸುವುದಕ್ಕಿರುವ ಸುಲಭದ ದಾರಿಯೆಂದರೆ ನಾವು ಪ್ರತಿಯೊಬ್ಬರೂ ಪೌರಪ್ರಜ್ಞೆಯುಳ್ಳವರಾಗಿ ಬದಲಾಗಬೇಕು.

**ಪೌರಪ್ರಜ್ಞೆ**

- ಪ್ರಾಧಾನ್ಯ
- ನಿರ್ಣಯಿಸುವ ಘಟಕಗಳು
- ಪೌರಪ್ರಜ್ಞೆ ಬೆಳೆಸುವುದಕ್ಕಿರುವ ಮಾರ್ಗಗಳು
- ಪೌರಪ್ರಜ್ಞೆ ಹಾಗೂ ಧಾರ್ಮಿಕತೆ
- ಪೌರಪ್ರಜ್ಞೆ ಹಾಗೂ ಸವಾಲುಗಳು
- ಸಮಾಜವಿಜ್ಞಾನ ಕಲಿಕೆ ಮತ್ತು ಪೌರಪ್ರಜ್ಞೆ

## ಮೌಲ್ಯನಿರ್ಣಯ ಮಾಡುವ

- ಪೌರಪ್ರಜ್ಞೆ ಎಂದರೇನು? ಪೌರಪ್ರಜ್ಞೆಯನ್ನು ರೂಪಿಸುವ ಪ್ರಧಾನ ಘಟಕಗಳು ಯಾವುವು?
- ಪೌರಪ್ರಜ್ಞೆಯಿರುವ ವ್ಯಕ್ತಿಗಳಲ್ಲಿ ಕಂಡುಬರುವ ವಿಶೇಷತೆಗಳನ್ನು ಪಟ್ಟಿಮಾಡಿರಿ.
- ನೈತಿಕತೆಯು ಪೌರಪ್ರಜ್ಞೆ ಬೆಳೆಸುವುದರಲ್ಲಿ ವಹಿಸುವ ಪಾತ್ರವನ್ನು ವಿವರಿಸಿರಿ.
- ಸಮಾಜವು ಎದುರಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪೌರಪ್ರಜ್ಞೆಯು ಹೇಗೆ ಸಹಾಯಕವಾಗುತ್ತದೆ? ಉದಾಹರಣೆ ಸಹಿತ ಸಮರ್ಥಿಸಿರಿ.
- ಉನ್ನತ ಪೌರಪ್ರಜ್ಞೆ ಪ್ರಕಟಿಸುವ ಉತ್ತಮ ವ್ಯಕ್ತಿತ್ವಗಳಿಗೆ ಉದಾಹರಣೆ ನೀಡಿರಿ.
- ಪೌರಪ್ರಜ್ಞೆ ಬೆಳೆಸುವುದರಲ್ಲಿ ಕುಟುಂಬ, ವಿದ್ಯಾಭ್ಯಾಸ, ಮಾಧ್ಯಮ ಎಂಬಿವುಗಳು ವಹಿಸುವ ಪಾತ್ರವನ್ನು ವಿವರಿಸಿರಿ.
- ಪೌರಪ್ರಜ್ಞೆ ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸುವುದಕ್ಕಿರುವ ಮಾರ್ಗಗಳನ್ನು ನಿರ್ದೇಶಿಸಿರಿ.
- 'ಸಮಾಜ ವಿಜ್ಞಾನ ಕಲಿಕೆಯೂ ಪೌರಪ್ರಜ್ಞೆಯೂ' ಎಂಬ ವಿಷಯದಲ್ಲಿ ಒಂದು ಟಿಪ್ಪಣಿ ತಯಾರಿಸಿರಿ.

## ಮುಂದುವರಿದ ಚಟುವಟಿಕೆಗಳು

- ಉನ್ನತ ಪೌರಪ್ರಜ್ಞೆ ಪ್ರಕಟಿಸಿ ಉನ್ನತಿಗೇರಿದ ವ್ಯಕ್ತಿಗಳ ಕುರಿತು ವಿಷಯ ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ಪೌರಪ್ರಜ್ಞೆ ಪ್ರಕಟಿಸುವುದಕ್ಕೆ ವಿವಿಧ ವಲಯಗಳಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಪ್ರವರ್ತರಾಗಲು ಸಾಧ್ಯವಿರುವ ಸಂದರ್ಭಗಳನ್ನು ಕಂಡುಕೊಂಡು ಪಟ್ಟಿಯನ್ನು ತಯಾರಿಸಿರಿ.
- ಪೌರಪ್ರಜ್ಞೆ ಇಲ್ಲದ ಸಮಾಜವು ಎದುರಿಸುತ್ತಿರುವ ಸವಾಲುಗಳನ್ನು ಕಂಡುಹಿಡಿದು ವರದಿ ತಯಾರಿಸಿರಿ.



ಅಧ್ಯಾಯ

11

# ಸಮಾಜಶಾಸ್ತ್ರ : ಎಂದರೇನು? ಯಾಕೆ?

*ಎಂದಿಗಿಂತಲೂ ತಡವಾಗಿ ಅಪ್ಪುಣ್ಣಿಯು ಶಾಲೆಗೆ ಹೊರಟನು. ಬೆಳಿಗ್ಗೆ ಗಂಜಿ ಸಿಗಲು ತಡವಾಯಿತು. ಕೆಲವು ದಿನಗಳಿಂದ ಸರಿಯಾದ ಸಮಯಕ್ಕೆ ಆಹಾರವಿಲ್ಲ. ಬೀಜವನ್ನು ಸಂಪೂರ್ಣವಾಗಿ ತೆಗೆದು ಖರ್ಚು ಮಾಡಿ ಆಯಿತು. ಕಣಜದಲ್ಲಿದ್ದ ಭತ್ತವನ್ನೂ ದೊಡ್ಡ ಮಾವನು ಗಾಡಿಯವರಿಗೆ ಮಾರಿದ್ದನು. ಭತ್ತವನ್ನು ಕೇಳಲು ಹೋದರೆ ಬೈಗುಳಗಳನ್ನು ಸಹಿಸಲೇಬೇಕು. ಮಾವಂದಿರು ಮನೆಯಲ್ಲಿರುವುದು ಕೆಲವು ದಿನಗಳು ಮಾತ್ರ. ಅವರು ತೋಟಕ್ಕೆ ಹೋದರೆ ತಿರುಗಿ ಬರುವುದು ಎಂಟೋ ಹತ್ತೋ ದಿವಸಗಳು ಕಳೆದು. ಅಡಿಕೆ ಕೊಯ್ಯಲು ಅಥವಾ ತೆಂಗಿನ ಕಾಯಿ ಕೊಯ್ಯಲು ಇದ್ದರೆ ಅವರು ಪುನಃ ಹೋಗುತ್ತಾರೆ.*

*ಮನೆಯ ಖರ್ಚನ್ನು ನೋಡಬೇಕಾದುದು ತನ್ನ ಜವಾಬ್ದಾರಿಯಲ್ಲ ಎಂಬ ಭಾವನೆ ಅವರಿಗಿದೆ. ಮನೆಯ ಆಹಾರದ ವಿಚಾರದಲ್ಲಿ ಸಣ್ಣ ಮಾವನಿಗೂ ಗಮನವಿಲ್ಲ. ಸಮಯಕ್ಕಾಗುವಾಗ ಆಹಾರವಿಲ್ಲದಿದ್ದರೆ ಮೀನಾಕ್ಷಿಯಕ್ಕನನ್ನು ಬೈಯ್ಯುತ್ತಾರೆ. ಅವರು ಹತ್ತಿರದ ಮನೆಗಳಿಂದ ಭತ್ತವನ್ನೂ ಅಕ್ಕಿಯನ್ನೂ ಸಾಲಪಡೆಯಲು ಹೋಗುವರು. ಆಗಾಗ ಅವರು ಹೇಳುವುದುಂಟು "ಎಲ್ಲ ನನ್ನ ಯೋಗ"*

*ನಾಲುಕೆಟ್ಟ್*
*ಎಂ.ಟಿ. ವಾಸುದೇವನ್ ನಾಯರ್*

ಇದು ಪ್ರಸಿದ್ಧ ಸಾಹಿತಿಯಾದ ಎಂ.ಟಿ. ವಾಸುದೇವನ್ ನಾಯರ್‌ರವರ 'ನಾಲುಕೆಟ್ಟ್' ಎಂಬ ಕಾದಂಬರಿಯ ಒಂದು ಭಾಗವಾಗಿದೆ. ಕೇರಳದ ಕೆಲವು ಸಮುದಾಯಗಳಲ್ಲಿ ಅಸ್ತಿತ್ವದಲ್ಲಿದ್ದ ಅವಿಭಕ್ತ ಕುಟುಂಬದ ಸಂಪ್ರದಾಯದಲ್ಲಾದ ಬದಲಾವಣೆಗಳನ್ನು ಒಂದು ಮಗುವಿನ ದೃಷ್ಟಿಕೋನದ ಮೂಲಕ 'ನಾಲುಕೆಟ್ಟಿನಲ್ಲಿ' ಪ್ರಸ್ತುತಪಡಿಸುತ್ತಾರೆ.

NT-911-9-SOC.SCI.-I-10-K-VOL.2

ಇದೇ ವಿಚಾರದ ಬಗ್ಗೆ ಸಮಾಜವಿಜ್ಞಾನಿಯಾದ ರೋಬಿನ್ ಜೆಫ್ರಿಯ ಸಂಶೋಧನೆಗಳನ್ನು ಪರಿಶೀಲಿಸೋಣ.

> *ಆರ್ಥಿಕ ಬಿಕ್ಕಟ್ಟುಗಳನ್ನು ತಡೆದುಕೊಳ್ಳಲು ತರವಾಡುಗಳಿಗೆ ಸಾಧ್ಯವಾಗುತ್ತಿರಲಿಲ್ಲ. ದೊಡ್ಡ ಅವಿಭಕ್ತ ಕುಟುಂಬಗಳು ತಾವು ಸಂಗ್ರಹಿಸಿಟ್ಟ ಹೆಚ್ಚುವರಿ ಭತ್ತಕ್ಕೆ ಉತ್ತಮ ಬೆಲೆ ಲಭಿಸಿದುದರಿಂದ ಲಾಭ ಪಡೆದಿರಬಹುದು. ಆದರೆ ಇದೇ ಲಾಭದ ಹಣವು ತರವಾಡಿನಲ್ಲಿ ತಮ್ಮೊಳಗೆ ಪರಸ್ಪರ ಹೊಡೆದಾಟ ಮತ್ತು ಅಭಿಪ್ರಾಯ ವ್ಯತ್ಯಾಸಗಳಿಗೆ ದಾರಿಮಾಡಿಕೊಡುತ್ತಿತ್ತು. ಸಣ್ಣ ತರವಾಡುಗಳಿಗೆ ಸಂಬಂಧಿಸಿದಂತೆ ಗುಲಾಮ ಪದ್ಧತಿಯನ್ನು ನಿಲ್ಲಿಸಿದುದು, ಕಾರ್ಮಿಕರ ಕೂಲಿ ಹೆಚ್ಚು ಮಾಡಿದುದು ಹಾಗೂ ಭತ್ತದ ಬೆಲೆ ಹೆಚ್ಚಾದುದು ಅವರನ್ನು ಆರ್ಥಿಕ ಸಂಕಷ್ಟಕ್ಕೀಡುಮಾಡಿತು. ಅದಕ್ಕಿಂತಲೂ ಹೆಚ್ಚು ತರವಾಡಿನ ಸದಸ್ಯರು ಅವಿಭಕ್ತ ಕುಟುಂಬದ ಹಿತಾಸಕ್ತಿಗಿಂತಲೂ ತಮ್ಮ ಸ್ವ-ಹಿತಾಸಕ್ತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದರು.*
>
> ರೋಬಿನ್ ಜೆಫ್ರಿ
>
> ನಾಯರ್ ಒಡೆತನಗಳ ಪತನ

ಎಂ.ಟಿ. ಮತ್ತು ಜೆಫ್ರಿ ಪ್ರತಿಪಾದಿಸುವ ವಿಷಯ ಒಂದೇ ಆಗಿದ್ದರೂ ಅವರ ನಿರೀಕ್ಷಣೆಗಳು ಭಿನ್ನವಾಗಿವೆ. ಎಂ.ಟಿ.ಯವರ ವೈಯಕ್ತಿಕ ಅನುಭವ ಹಾಗೂ ಕಲ್ಪನೆಯು ನಾಲುಕೆಟ್ಟ್‌ನ ನಿಗಮನಕ್ಕೆ ಆಧಾರ. ಆದರೆ ವೈಜ್ಞಾನಿಕ ರೀತಿಗಳ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸಿ ಜೆಫ್ರಿಯು ತನ್ನ ನಿಗಮನಗಳಿಗೆ ತಲುಪಿದನು. ಇಬ್ಬರೂ ಅನುಸರಿಸಿದ ರೀತಿಗಳಲ್ಲಿರುವ ವ್ಯತ್ಯಾಸವನ್ನು ಪರಿಶೀಲಿಸೋಣ.

| ನಾಲುಕೆಟ್ಟ್ | ನಾಯರ್ ಒಡೆತನಗಳ ಪತನ |
|---|---|
| • ಕಾದಂಬರಿ ಎಂಬ ಸಾಹಿತ್ಯರೂಪ<br>• ಕಾಲ್ಪನಿಕ<br>• ಭಾವನಾತ್ಮಕ ಪ್ರತಿಕ್ರಿಯೆ | • ಸಂಶೋಧನಾತ್ಮಕ<br>• ವಸ್ತುನಿಷ್ಠ<br>• ಯುಕ್ತಿಪೂರ್ವಕವಾದ ವಿಶ್ಲೇಷಣೆ |

ಮೇಲೆ ನೀಡಿರುವ ಪಟ್ಟಿಯಿಂದ ಸೃಜನಾತ್ಮಕ ರಚನೆ ಮತ್ತು ಸಮಾಜವಿಜ್ಞಾನ ಅನ್ವೇಷಣೆಯ ವ್ಯತ್ಯಾಸ ತಿಳಿಯಿತಲ್ಲವೇ? ಸೃಜನಾತ್ಮಕ ರಚನೆ ಮತ್ತು ಸಮಾಜಶಾಸ್ತ್ರ ಕಲಿಕೆಗಳೊಳಗಿರುವ ವ್ಯತ್ಯಾಸಗಳನ್ನು ಪರಿಶೀಲಿಸೋಣ.

| ಸೃಜನಾತ್ಮಕ ರಚನೆ | ಸಮಾಜಶಾಸ್ತ್ರ ಕಲಿಕೆ |
|---|---|
| • ಕಲ್ಪನೆ (Imagination), ಸೃಜನಶೀಲತೆ (Creativity) ಎಂಬಿವುಗಳನ್ನು ಉಪಯೋಗಿಸಿ ರಚಿಸಲಾಗುವುದು.<br>• ಸಾಮಾಜಿಕ ಘಟಕಗಳನ್ನು ಸೌಂದರ್ಯಾತ್ಮಕ ಹಂತಗಳಲ್ಲಿ ಆವಿಷ್ಕರಿಸಲಾಗುತ್ತದೆ.<br>• ಸೃಜನಶೀಲ ರಚನೆಗಳು ಆಸ್ವಾದನೆಯ ಉದ್ದೇಶವನ್ನಿರಿಸಿಕೊಂಡಿವೆ.. | • ಸಾಮಾಜಿಕ ವಿದ್ಯಮಾನ/ವಿಷಯಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲಾಗುತ್ತದೆ.<br>• ಸಾಮಾಜಿಕ ವಾಸ್ತವಿಕತೆಗಳನ್ನು ಕಾರ್ಯಕಾರಣ ಸಂಬಂಧದ ಆಧಾರದಲ್ಲಿ (Cause - effect) ವಿಶ್ಲೇಷಿಸಲಾಗುತ್ತದೆ.<br>• ಸಮಾಜವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗುತ್ತದೆ. |

**ಸೃಜನಶೀಲ ರಚನೆ ಮತ್ತು ಸಮಾಜಶಾಸ್ತ್ರ ಕಲಿಕೆಗಳೊಳಗಿನ ವ್ಯತ್ಯಾಸಗಳನ್ನು ಚರ್ಚಿಸಿರಿ.**



## ಸಮಾಜವಿಜ್ಞಾನಗಳ ಲೋಕ

ಚರಿತ್ರೆ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ, ನರವಂಶಶಾಸ್ತ್ರ, ಮನಃಶಾಸ್ತ್ರ ಮೊದಲಾದುವುಗಳು ಸಮಾಜವಿಜ್ಞಾನದ ವಿವಿಧ ಶಾಖೆಗಳಾಗಿವೆ. ಕೆಳಗೆ ನೀಡಿರುವ ಪಟ್ಟಿಯನ್ನು ವಿಶ್ಲೇಷಿಸಿ ಸಂಬಂಧಪಟ್ಟ ಸಮಾಜವಿಜ್ಞಾನ ಶಾಖೆಯ ಹೆಸರನ್ನು ಕಂಡುಹಿಡಿಯಲು ಪ್ರಯತ್ನಿಸಿರಿ.

FFAYFU

| | |
|---|---|
| ಆರ್ಥಿಕ ವ್ಯವಹಾರಗಳ ಕುರಿತಾದ ಅಧ್ಯಯನ | ........................................ |
| ಭೂತ ಕಾಲದ ಮತ್ತು ನಾಗರಿಕತೆಯ ಕುರಿತಾದ ಅನ್ವೇಷಣೆ | ........................................ |
| ರಾಷ್ಟ್ರ ಮತ್ತು ಹಕ್ಕುಗಳ ಕುರಿತಾದ ಅಧ್ಯಯನ | ........................................ |
| ಮಾನವನ ಉಗಮ ಮತ್ತು ಮಾನವವಂಶದ ವಿಕಾಸದ ಕುರಿತಾದ ಅಧ್ಯಯನ | ........................................ |
| ಮನುಷ್ಯರ ಮನಸ್ಸು ಮತ್ತು ಮಾನಸಿಕ ಸ್ಥಿತಿಯ ಕುರಿತಾದ ಅಧ್ಯಯನ | ........................................ |

ನೀವು ತಿಳಿದುಕೊಂಡ ಪ್ರತಿಯೊಂದು ವಿಜ್ಞಾನ ಶಾಖೆಯೂ ಸಮಾಜದ ಯಾವುದಾದರೂ ಪ್ರತ್ಯೇಕ ವಲಯದ ಕುರಿತಾಗಿ ಅಧ್ಯಯನ ನಡೆಸುತ್ತದೆ. ಆದರೆ ಸಮಾಜಶಾಸ್ತ್ರವು ಮಾನವ ಮತ್ತು ಸಾಮಾಜಿಕ ಪರಿಸರಗಳೊಳಗಿನ ಸಂಬಂಧವನ್ನು ಸಮಗ್ರವಾಗಿ ಅಧ್ಯಯನ ನಡೆಸುವ ಶಾಸ್ತ್ರವಾಗಿದೆ.

**ಸಮಾಜವಿಜ್ಞಾನದ ವಿವಿಧ ಶಾಖೆಗಳ ಕಲಿಕಾ ವಲಯಗಳನ್ನು ಗುಂಪು ಚರ್ಚೆಯ ಮೂಲಕ ಮಂಡಿಸಲು ಪ್ರಯತ್ನಿಸಿರಿ.**




## ಆರಂಭಕಾಲದ ಸಮಾಜಶಾಸ್ತ್ರ ಚಿಂತಕರು

ನಾವು ಫ್ರಾನ್ಸಿನ ಕ್ರಾಂತಿಯ ಬಗ್ಗೆ ಹಿಂದಿನ ಅಧ್ಯಾಯಗಳಲ್ಲಿ ಚರ್ಚೆ ನಡೆಸಿದ್ದೇವಲ್ಲವೇ. ಕ್ರಾಂತಿಯ ಅನಂತರ ಫ್ರಾನ್ಸಿನಲ್ಲುಂಟಾದ ಸಾಮಾಜಿಕ ಸಮಸ್ಯೆಗಳು ಸಮಾಜಶಾಸ್ತ್ರದ ಉದ್ಭವಕ್ಕೆ ದಾರಿಮಾಡಿಕೊಟ್ಟಿತು. 19ನೆಯ ಶತಮಾನವನ್ನು ಚರಿತ್ರೆಯಲ್ಲಿ 'ಕ್ರಾಂತಿಗಳ ಯುಗ' ಎಂದು ಕರೆಯುತ್ತಾರೆ. ಈ ಕೆಳಗಿನ ಮೂರು ಕ್ರಾಂತಿಗಳು ಸಮಾಜಶಾಸ್ತ್ರವೆಂಬ ಶಾಖೆಯ ಉಗಮಕ್ಕೆ ದಾರಿಮಾಡಿಕೊಟ್ಟಿತು.



ಆಗಸ್ಟ್ ಕಾಮ್ಟೆ



ಹರ್ಬರ್ಟ್ ಸ್ಪೆನ್ಸರ್

- ಜ್ಞಾನೋದಯ ಅಥವಾ ವೈಜ್ಞಾನಿಕ ಕ್ರಾಂತಿ
- ಫ್ರಾನ್ಸಿನ ಕ್ರಾಂತಿ
- ಕೈಗಾರಿಕಾ ಕ್ರಾಂತಿ

ಈ ಕ್ರಾಂತಿಗಳ ಹಿನ್ನೆಲೆಯಲ್ಲಿ ಪಶ್ಚಿಮ ಯುರೋಪಿನಲ್ಲಿ ಸಮಾಜಶಾಸ್ತ್ರವು ಬೆಳೆದುಬಂತು. ಫ್ರೆಂಚ್ ಚಿಂತಕನಾದ ಆಗಸ್ಟ್ ಕಾಮ್ಟೆಯ(August Comte) ನ್ನು ಸಮಾಜಶಾಸ್ತ್ರದ (Sociology) ಪಿತ ಎಂದು ಕರೆಯುತ್ತಾರೆ.

ಹರ್ಬರ್ಟ್ ಸ್ಪೆನ್ಸರ್ ಚಾರ್ಲ್ಸ್ ಡಾರ್ವಿನನ ವಿಕಾಸಸಿದ್ಧಾಂತದ ತತ್ವಗಳನ್ನು ಸಮಾಜಶಾಸ್ತ್ರದ ಕಲಿಕೆಗೆ ಉಪಯೋಗಿಸಿದ ಚಿಂತಕನಾಗಿದ್ದಾನೆ. ಜೀವಶಾಸ್ತ್ರ ವಿಕಾಸದ ರೀತಿಯಲ್ಲಿಯೇ ಮಾನವ ಸಮೂಹವೂ ವಿಭಿನ್ನ ಹಂತಗಳಲ್ಲಿ ವಿಕಾಸಹೊಂದಿ ಇಂದಿನ ಹಂತಕ್ಕೆ ಬಂದು ತಲುಪಿದೆ ಎಂದು ಅವರು ವಾದಿಸಿದರು. ಕಾರ್ಲ್ ಮಾರ್ಕ್ಸ್, ಎಮೈಲ್ ದುರ್ಖಿಂ, ಮಾರ್ಕ್ಸ್ ವೆಬರ್ ಮೊದಲಾದ ಚಿಂತಕರು ಸಮಾಜಶಾಸ್ತ್ರದ ಬೆಳವಣಿಗೆಗೆ ಪ್ರಧಾನವಾದ ಕೊಡುಗೆಗಳನ್ನು ನೀಡಿದ್ದಾರೆ.

## ಭಾರತದಲ್ಲಿ ಸಮಾಜಶಾಸ್ತ್ರ

ಭಾರತದಲ್ಲಿ ಇಪ್ಪತ್ತನೇ ಶತಮಾನದ ಆರಂಭದಲ್ಲಿಯೇ ಸಮಾಜವಿಜ್ಞಾನ ಕಲಿಕೆಯು ಪ್ರಾರಂಭ ವಾಯಿತು. ಸಮಾಜವಿಜ್ಞಾನದ ಮೊದಲ ಅಧ್ಯಯನ ವಿಭಾಗವು ಬಾಂಬೆ ವಿಶ್ವವಿದ್ಯಾಲಯ ದಲ್ಲಿ ಪ್ರಾರಂಭಗೊಂಡಿತು. ಜಿ.ಎಸ್.ಘುರ್ಯೆ, ಎ.ಆರ್.ದೇಸಾಯಿ, ಎಸ್.ಸಿ.ದುಬೆ, ಎಂ.ಎನ್.ಶ್ರೀನಿವಾಸ್, ಡಿ.ಪಿ.ಮುಖರ್ಜಿ ಮೊದಲಾದವರು ಭಾರತದಲ್ಲಿ ಸಮಾಜಶಾಸ್ತ್ರದ ಅಧ್ಯಯನಕ್ಕೆ ಪ್ರಧಾನ ಕೊಡುಗೆಗಳನ್ನು ನೀಡಿದ ವರಾಗಿದ್ದಾರೆ.



ಜಿ.ಎಸ್. ಘುರ್ಯೆ



ಎಂ.ಎನ್. ಶ್ರೀನಿವಾಸ್



ಡಿ.ಪಿ. ಮುಖರ್ಜಿ

## ಸಮಾಜಶಾಸ್ತ್ರ ಎಂದರೇನು?

**ಸಮಾಜಶಾಸ್ತ್ರವೆಂದರೆ ಮಾನವ ಜೀವನದ ಸಾಮಾಜಿಕ ಆಯಾಮಗಳ ಕುರಿತು ನಡೆಸುವ ವೈಜ್ಞಾನಿಕ ಅಧ್ಯಯನವಾಗಿದೆ.**

ಮೇಲೆ ಕೊಟ್ಟಿರುವ ಸಮಾಜಶಾಸ್ತ್ರದ ನಿರ್ವಚನದಿಂದ ಯಾವೆಲ್ಲ ವಿಚಾರಗಳು ತಿಳಿದುಬರುತ್ತವೆ?


- ಸಮಾಜಶಾಸ್ತ್ರವು ಮಾನವನ ಜೀವನದ ಕುರಿತಾದ ಅಧ್ಯಯನವಾಗಿದೆ.
- 
- 

ಮಾನವ ಮತ್ತು ಅವನ ಸುತ್ತಲಿನ ಪರಿಸರಗಳೊಳಗಿನ ಪರಸ್ಪರ ಸಂಬಂಧಗಳ ಕುರಿತಾದ ವೈಜ್ಞಾನಿಕ ಕಲಿಕೆಯಾಗಿದೆ. ಆದುದರಿಂದ ಸಮಾಜದ ಕುರಿತಾದ ಸಮಗ್ರವಾದ ಅಧ್ಯಯನವಾಗಿ ಸಮಾಜಶಾಸ್ತ್ರವನ್ನು ಪರಿಗಣಿಸಲಾಗುತ್ತದೆ.

## ಸಮಾಜಶಾಸ್ತ್ರದ ಕಲಿಕೆ ಯಾಕೆ?

- ಸಮಾಜದ ಕುರಿತಾದ ಸರಿಯಾದ ತಿಳುವಳಿಕೆಯನ್ನು ರೂಪಿಸಲು ಸಹಾಯಕವಾಗುತ್ತದೆ.
- ತನ್ನ ಸಮಾಜ ಮತ್ತು ಇತರ ಸಮಾಜಗಳನ್ನು ವಸ್ತುನಿಷ್ಠವಾಗಿ ತಿಳಿಯಲು ಸಹಾಯಕವಾಗುತ್ತದೆ.
- ವ್ಯಕ್ತಿಗಳು ಮತ್ತು ಸಾಮಾಜಿಕ ಸಂಸ್ಥೆಗಳೊಳಗಿನ ಸಂಬಂಧಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.
- ಸಾಮಾಜಿಕ ಸಮಸ್ಯೆಗಳ ಕುರಿತು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುತ್ತದೆ.
- ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಸಹಾಯಕವಾಗುತ್ತದೆ.
- ಸಮಾಜಕಲ್ಯಾಣ ಯೋಜನೆಗಳು ಮತ್ತು ವಿಕಾಸಕ್ಕೆ ಉಪಯೋಗವಾಗುತ್ತದೆ.
- ಹಿಂದುಳಿದ ವಿಭಾಗಗಳು, ಶೋಷಿತರು, ತಾರತಮ್ಯ ಮತ್ತು ಪೀಡನೆಗೆ ಒಳಗಾದವರು ಮೊದಲಾದವರ ಕುರಿತಾದ ಅಧ್ಯಯನಗಳು ಸಮಾಜ ಕ್ಷೇಮ ಚಟುವಟಿಕೆಗಳಿಗೆ ಮಾರ್ಗದರ್ಶಿಯಾಗುತ್ತವೆ.

**ಸಮಾಜಶಾಸ್ತ್ರ ಕಲಿಕೆಯ ಪ್ರಾಧಾನ್ಯತೆಯನ್ನು ಚರ್ಚಿಮಾಡಿರಿ.**



## ಸಮಾಜಶಾಸ್ತ್ರದ ಕಲಿಕಾ ವಲಯಗಳು

ಸಮಾಜಶಾಸ್ತ್ರದ ವ್ಯಾಪ್ತಿಯು ಅತ್ಯಂತ ವಿಶಾಲವಾದುದಾಗಿದೆ. ವ್ಯಕ್ತಿಗಳು ಮತ್ತು ಘಟನೆಗಳೊಳಗಿನ ಪರಸ್ಪರ ಸಂಬಂಧದ ವಿಶ್ಲೇಷಣೆ ಹಾಗೂ ರಾಷ್ಟ್ರೀಯ ಸಮಸ್ಯೆಗಳಾದ ನಿರುದ್ಯೋಗ, ಜಾತಿ ಸಂಘರ್ಷ, ಗ್ರಾಮೀಣರ ಸಮಸ್ಯೆಗಳು, ಬಡತನ ಇತ್ಯಾದಿಗಳನ್ನು ಕೇಂದ್ರೀಕರಿಸಿ ನಡೆಯುವ ಅಧ್ಯಯನಗಳು ಸಮಾಜಶಾಸ್ತ್ರದ ಭಾಗವಾಗಿವೆ. ಈ ರೀತಿಯಲ್ಲಿ ಸಮಾಜಶಾಸ್ತ್ರದ ವಿಶ್ಲೇಷಣೆಗೊಳಪಟ್ಟ ಪ್ರಧಾನ ವಲಯಗಳನ್ನು ಕೆಳಗೆ ಕೊಡಲಾಗಿದೆ.

- ಸಾಮಾಜಿಕ ಸಂಸ್ಥೆಗಳು
- ಸಾಮಾಜಿಕ ಗುಂಪುಗಳು
- ಸಾಮಾಜಿಕ ಸಂಬಂಧಗಳು
- ಸಾಮಾಜೀಕರಣ
- ಸಾಮಾಜಿಕ ನಿಯಂತ್ರಣ
- ಸಮುದಾಯಗಳು
- ಸಾಮಾಜಿಕ ಬದಲಾವಣೆ
- ಸಾಮಾಜಿಕ ಸಮಸ್ಯೆಗಳು
- 
- 

ಇಂತಹ ಆಶಯ ವಲಯಗಳ ಕುರಿತಾದ ವೈಜ್ಞಾನಿಕ ಅನ್ವೇಷಣೆಯು ಸಮಾಜಶಾಸ್ತ್ರದ ಅಧ್ಯಯನದ ಪರಿಧಿಯಲ್ಲಿ ಬರುತ್ತದೆ.

## ಸಮಾಜಶಾಸ್ತ್ರದ ಕಲಿಕಾ ರೀತಿಗಳು

ಶೈಕ್ಷಣಿಕ ಹಾಗೂ ಪ್ರಾಯೋಗಿಕವಾದ ಅವಶ್ಯಕತೆಗಳನ್ನು ಮುಂದಿರಿಸಿಕೊಂಡು ಇಂದು ಪ್ರಪಂಚದಾದ್ಯಂತ ಸಮಾಜಶಾಸ್ತ್ರದ ಕಲಿಕೆಯು ನಡೆಯುತ್ತದೆ. ಇಂತಹ ಅಧ್ಯಯನಗಳಿಗಾಗಿ ಸಮಾಜಶಾಸ್ತ್ರವು ವಿಭಿನ್ನ ರೀತಿಯ ಕಲಿಕಾ ರೀತಿಗಳನ್ನು ನಡೆಸುತ್ತದೆ. ಅವುಗಳಲ್ಲಿ ಕೆಲವನ್ನು ಪರಿಶೋಧಿಸೋಣ.

### ಸಾಮಾಜಿಕ ಸಮೀಕ್ಷೆ (Social Survey)

ನೀವು ಜನಗಣತಿಯ ಕುರಿತು ಕೇಳಿರುವಿರಲ್ಲವೇ.

ಭಾರತದಲ್ಲಿ ಎಷ್ಟು ವರ್ಷಗಳಿಗೊಮ್ಮೆ ಜನಗಣತಿಯು ನಡೆಯುತ್ತದೆ? ಜನಗಣತಿಯ ವಿಶೇಷತೆಗಳು ಯಾವುವು?

ಜನಗಣತಿಯು ದೇಶದ ಒಟ್ಟು ಜನರ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಲಿರುವ ಸಮೀಕ್ಷೆಯಾಗಿದೆ. ಸಮೀಕ್ಷೆಯು ಸಾಮಾಜಿಕ ವಿಷಯಗಳ ಕುರಿತು ಕಲಿಯಲು ಅತ್ಯಂತ ಸೂಕ್ತವಾದ ಒಂದು ಕಲಿಕಾ ವಿಧಾನವಾಗಿದೆ. ಆಯ್ದ ಒಂದು ಜನವಿಭಾಗದಿಂದ ಸಂಗ್ರಹಿಸಿದ ಮಾಹಿತಿಗಳ ಆಧಾರದಲ್ಲಿ ಕಲಿಕಾವಿಷಯದ ಬಗ್ಗೆ ಸಮಗ್ರವಾದ ದೃಷ್ಟಿಕೋನವನ್ನು ರೂಪಿಸಲು ಸಮೀಕ್ಷೆಯು ಸಹಾಯಕವಾಗುತ್ತದೆ. ಹೆಚ್ಚಿನ ಪ್ರಮಾಣದ ಜನವಿಭಾಗದಿಂದ ಮಾಹಿತಿಗಳನ್ನು ಸಂಗ್ರಹಿಸಬೇಕಾದ ಸಂದರ್ಭದಲ್ಲಿ ಸಮೀಕ್ಷೆಯ ವಿಧಾನವನ್ನು ಉಪಯೋಗಿಸಲಾಗುತ್ತದೆ.

ಸಮಾಜಶಾಸ್ತ್ರದ ಕಲಿಕೆಯಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಸಮೀಕ್ಷೆಯು ಪ್ರಾಯೋಗಿಕವಲ್ಲ. ಇದಕ್ಕೆ ಕಾರಣವೇನೆಂದರೆ ಇಲ್ಲಿ ಕಲಿಕೆಗೆ ವಿಧೇಯವಾಗುವ ಎಲ್ಲ ವ್ಯಕ್ತಿಗಳಿಂದಲೂ ಮಾಹಿತಿಗಳನ್ನು ಸಂಗ್ರಹಿಸಲಾಗುವುದಿಲ್ಲ. ಅವರಿಂದ ಆಯ್ದ ನಿಗದಿತ ಪ್ರಮಾಣದ ಜನರಿಂದ ಮಾತ್ರವೇ ಮಾಹಿತಿಗಳನ್ನು ಸಂಗ್ರಹ ಮಾಡಲಾಗುತ್ತದೆ. ಇಂತಹ ಅಧ್ಯಯನಗಳನ್ನು **'ಮಾದರಿ ಸಮೀಕ್ಷೆ'** ಎಂದು ಕರೆಯುತ್ತಾರೆ.

ಇಂತಹ ಸಮೀಕ್ಷೆಗಳಲ್ಲಿ ಮಾಹಿತಿ ಸಂಗ್ರಹಿಸಲು ಅನೇಕ ವಿಧಾನಗಳನ್ನು ಉಪಯೋಗಿಸಲಾಗುತ್ತದೆ. ಸಾಮಾಜಿಕ ಮಾಧ್ಯಮಗಳು ಮತ್ತು ದೂರವಾಣಿಯ ಮೂಲಕ ಹಲವು ರೀತಿಯ ಸಮೀಕ್ಷೆಗಳನ್ನು ನಡೆಸುವುದನ್ನು ನೀವು ನೋಡಿರುವಿರಲ್ಲವೇ. ಆದರೆ ಸಾಮಾಜಿಕ ಸಮೀಕ್ಷೆಯಲ್ಲಿ ಮಾಹಿತಿಗಳನ್ನು ಸಂಗ್ರಹಿಸಲು ಸಾಧಾರಣವಾಗಿ ಮೊದಲೇ ತಯಾರಿಸಿದ ಪ್ರಶ್ನಾವಳಿಗಳನ್ನು ಉಪಯೋಗಿಸಲಾಗುತ್ತದೆ.

ಮಾಹಿತಿ ಸಂಗ್ರಹಕ್ಕಾಗಿ ಸಂಶೋಧಕರು ಉಪಯೋಗಿಸುವ ಪ್ರಶ್ನೆಗಳ ಪಟ್ಟಿಯನ್ನು **ಪ್ರಶ್ನಾವಳಿ** ಎಂದು ಕರೆಯುತ್ತಾರೆ. ಪ್ರಶ್ನೆಗಳನ್ನು ಸಂದರ್ಶಿತರಿಗೆ ನೀಡಿ ಮಾಹಿತಿ ಸಂಗ್ರಹ ಮಾಡಲಾಗುತ್ತದೆ. ಅಧ್ಯಯನಕ್ಕೆ ಒಳಪಡುವ ಗುಂಪನ್ನು ಸಂದರ್ಶಿತರು ಎಂದು ಕರೆಯುತ್ತಾರೆ. ಸಂದರ್ಶಿತರು ಭರ್ತಿ ಮಾಡಿ ಕೊಡುವ ಮಾಹಿತಿಗಳ ಆಧಾರದಲ್ಲಿ ಅಧ್ಯಯನವು ನಡೆಯುತ್ತದೆ.

ನಿಮ್ಮ ಶಾಲೆಯ ವಿದ್ಯಾರ್ಥಿಗಳ ಓದುವ ಹವ್ಯಾಸದ ಬಗ್ಗೆ ಒಂದು ಸಮೀಕ್ಷೆ ಮಾಡಬೇಕಂದಿರಲಿ. ಅದಕ್ಕಿರುವ ಪ್ರಶ್ನಾವಳಿಯಲ್ಲಿ ಯಾವುದನ್ನೆಲ್ಲ ಸೇರಿಸಬಹುದು? ಯಾವೆಲ್ಲ ಮಾಹಿತಿಗಳನ್ನು ಸಂಗ್ರಹಿಸಬೇಕೆಂದು ಮೊದಲೇ ತೀರ್ಮಾನಿಸಬೇಕು. ಕೆಳಗೆ ನೀಡಿರುವ ಮಾಹಿತಿಗಳನ್ನು ಸಂಗ್ರಹಿಸಬಹುದು.

- ಸಾಮಾನ್ಯವಾಗಿ ಓದುವ ಹವ್ಯಾಸ ಇರುವವರು ಎಷ್ಟು ಜನರು?
- ಸಾಮಾನ್ಯವಾಗಿ ಓದುವ ಪುಸ್ತಕಗಳು ಹಾಗೂ ಮಾಸಿಕಗಳು ಯಾವುವು?
- ದಿನಪತ್ರಿಕೆಗಳ ಓದಿಗೆ ಸರಾಸರಿ ಎಷ್ಟು ಸಮಯವನ್ನು ಮೀಸಲಿರಿಸುತ್ತೀರಿ?
- ಪುಸ್ತಕಗಳ ಓದಿಗೆ ವಾರದಲ್ಲಿ ಎಷ್ಟು ಸಮಯವನ್ನು ಉಪಯೋಗಿಸುತ್ತೀರಿ?
- ಪ್ರಾಯಕ್ಕನುಸಾರವಾಗಿರುವ ಓದು

ಮೇಲೆ ಹೇಳಿದ ಮಾಹಿತಿಗಳು ಲಭಿಸಲು ಸಹಾಯವಾಗುವ ರೀತಿಯಲ್ಲಿ ಒಂದು ಪ್ರಶ್ನಾವಳಿಯನ್ನು ತಯಾರಿಸಿರಿ.



## ಸಂದರ್ಶನ (Interview)



ವಾರ್ತಾ ಮಾಧ್ಯಮಗಳಲ್ಲಿ ನಡೆಸುವ ಸಂದರ್ಶನಗಳನ್ನು ಗಮನಿಸಿದ್ದೀರಲ್ಲವೇ. ಸಂದರ್ಶನವು ಸಮಾಜಶಾಸ್ತ್ರದಲ್ಲಿ ಮಾಹಿತಿ ಸಂಗ್ರಹಕ್ಕೆ ಉಪಯೋಗಿಸುವ ಪ್ರಧಾನವಾದ ಒಂದು ರೀತಿಯಾಗಿದೆ. ಇದರಲ್ಲಿ ಬಾಯಿಮಾತಿನ ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ಸಂಶೋಧಕ ಮತ್ತು ಸಂದರ್ಶಿತರೊಳಗಿನ ಸಂಭಾಷಣೆಯೇ ಸಂದರ್ಶನವಾಗಿದೆ. ವ್ಯಕ್ತಿಗಳ ಮನೋಭಾವ, ದೃಷ್ಟಿಕೋನ, ನಂಬಿಕೆ, ಜೀವನ ರೀತಿ ಮೊದಲಾದ ವಿಚಾರಗಳನ್ನು ಸೂಕ್ಷ್ಮಮಟ್ಟದಲ್ಲಿ ತಿಳಿದುಕೊಳ್ಳುವುದಕ್ಕೆ ಮತ್ತು ವಿಶ್ಲೇಷಣೆಗೆ ಉಪಯೋಗಿಸುವ ಕಲಿಕಾ ವಿಧಾನವೇ ಸಂದರ್ಶನವಾಗಿದೆ. ಸಂದರ್ಶನ ನಡೆಸುವಾಗ ಗಮನಿಸಬೇಕಾದ ಕೆಲವು ವಿಚಾರಗಳು:

- ಅಗತ್ಯವಾದ ವ್ಯಕ್ತಿಗಳನ್ನು ಕಂಡುಹಿಡಿಯುವುದು.
- ಸಂಗ್ರಹಿಸಬೇಕಾದ ಮಾಹಿತಿಗಳ ಬಗ್ಗೆ ತಿಳುವಳಿಕೆಯನ್ನು ರೂಪಿಸುವುದು.
- ಸೂಕ್ತವಾದ ಪ್ರಶ್ನೆಗಳನ್ನು ತಯಾರಿಸುವುದು.
- ಫಲಪ್ರದವಾದ ರೀತಿಯಲ್ಲಿರುವ ಆಶಯ ವಿನಿಮಯ.
- ಸಮಯದ ಕ್ರಮೀಕರಣ.
- ಲಭಿಸಿದ ಮಾಹಿತಿಗಳನ್ನು ಕ್ರಮಬದ್ಧಗೊಳಿಸುವುದು ಮತ್ತು ವರದಿ ತಯಾರಿಸುವುದು.

ಸಂದರ್ಶನ ಮತ್ತು ಪ್ರಶ್ನಾವಳಿಗಳ ಮಧ್ಯೆ ಕೆಲವು ವ್ಯತ್ಯಾಸಗಳಿವೆ. ಅವುಗಳನ್ನು ಪರಿಶೀಲಿಸುವ.

| ಸಂದರ್ಶನ | ಪ್ರಶ್ನಾವಳಿ |
|---|---|
| • ಮಾಹಿತಿಗಳನ್ನು ಬಾಯಿಮಾತಿನ ಮೂಲಕ ಸಂಗ್ರಹಿಸಲಾಗುತ್ತದೆ.<br>• ಸಂಶೋಧಕನು ಮಾಹಿತಿಗಳನ್ನು ದಾಖಲಿಸುತ್ತಾನೆ<br>•<br>• | • ಮಾಹಿತಿಗಳನ್ನು ದಾಖಲಿಸಿ ನೀಡಲಾಗುತ್ತದೆ.<br>• ಸಂದರ್ಶಕರು ಮಾಹಿತಿಗಳನ್ನು ದಾಖಲಿಸುತ್ತಾರೆ.<br>•<br>• |



**ನಿಮ್ಮ ಪ್ರದೇಶದ ಮಾಲಿನ್ಯ ಸಮಸ್ಯೆಗೆ ಸಂಬಂಧಿಸಿ ಜನಪ್ರತಿನಿಧಿಯೊಂದಿಗೆ ಸಂದರ್ಶನವನ್ನು ನಡೆಸಿರಿ.**

## ನಿರೀಕ್ಷಣೆ (Observation)

ನಿರೀಕ್ಷಣೆಯು ಎಲ್ಲ ವೈಜ್ಞಾನಿಕ ಸಂಶೋಧನೆಯ ರೀತಿಯಲ್ಲಿರುವಂತೆ ಸಮಾಜಶಾಸ್ತ್ರ ಕಲಿಕೆಯ ಮೂಲಭೂತವಾದ ಒಂದು ರೀತಿಯಾಗಿದೆ. ಸಂದರ್ಶನದಂತಹ ರೀತಿಗಳು ಪ್ರಾಯೋಗಿಕವಲ್ಲದ ಸಂದರ್ಭಗಳಲ್ಲಿ ನಿರೀಕ್ಷಣೆಯ ರೀತಿಗೆ ಹೆಚ್ಚಿನ ಪ್ರಾಧಾನ್ಯತೆಯಿದೆ. ನಿರೀಕ್ಷಣೆಯಲ್ಲಿ ಕಾಣುವ, ಕೇಳುವ ಮತ್ತು ಅನುಭವಿಸುವ ವಿಚಾರಗಳನ್ನು ವಸ್ತುನಿಷ್ಠವಾಗಿ ದಾಖಲಿಸುತ್ತಾರೆ. ನೇರವಾಗಿ ಸಂಗ್ರಹಿಸುವ ಇಂತಹ ಮಾಹಿತಿಗಳು ಸ್ಪಷ್ಟವಾದ ಮೌಲ್ಯಮಾಪನಕ್ಕೆ ಸಹಾಯಕವಾಗುತ್ತದೆ. ಎರಡು ರೀತಿಯ ನಿರೀಕ್ಷಣೆಗಳಿವೆ.

1. ಪಾಲ್ಗೊಳ್ಳುವ ನಿರೀಕ್ಷಣೆ
2. ಪಾಲ್ಗೊಳ್ಳದೇ ಇರುವ ನಿರೀಕ್ಷಣೆ

ನಿರೀಕ್ಷಕನು ಕಲಿಕಾ ವಲಯದಿಂದ ನೇರವಾಗಿ ಮಾಹಿತಿ ಸಂಗ್ರಹಿಸುವ ರೀತಿಯು ಪಾಲ್ಗೊಳ್ಳುವ ನಿರೀಕ್ಷಣೆಯಾಗಿದೆ. ಇದು ಸಮಾಜಶಾಸ್ತ್ರದಲ್ಲಿ ಬಹಳ ಪ್ರಚಾರದಲ್ಲಿರುವ ಒಂದು ರೀತಿಯಾಗಿದೆ. ಪಾಲ್ಗೊಳ್ಳುವ ನಿರೀಕ್ಷಣೆಯು ಸಮಾಜವಿಜ್ಞಾನಿಯು ಕಲಿಕೆಗೆ ವಿಧೇಯಗೊಳಿಸುವ ಗುಂಪಿನಲ್ಲಿ ಒಟ್ಟಿಗೇ ಇದ್ದು, ವಾಸಮಾಡಿ ಅವರ ಜೀವನದ ಬಗ್ಗೆ ನೇರವಾಗಿ ತಿಳಿದುಕೊಳ್ಳುವ ರೀತಿಯಾಗಿದೆ. ಇದಕ್ಕಾಗಿ ಸಂಶೋಧಕನು ಅವರ ಭಾಷೆ, ಸಂಸ್ಕೃತಿ ಎಂಬಿವುಗಳನ್ನು ಕಲಿತುಕೊಳ್ಳುವುದರೊಂದಿಗೆ ಅವರ ದೈನಂದಿನ ಜೀವನದಲ್ಲಿ ಪಾಲ್ಗೊಳ್ಳುತ್ತಾನೆ. ಇದರ ಮೂಲಕ ಸ್ಪಷ್ಟವಾಗದೇ ಇರುವ ವರ್ತನೆಗಳನ್ನು ಅಧ್ಯಯನಕ್ಕೊಳಪಡಿಸಲು ಸಾಧ್ಯವಾಗುತ್ತದೆ. ಪಾಲ್ಗೊಳ್ಳುವ ನಿರೀಕ್ಷಣೆಯನ್ನು ಫೀಲ್ಡ್‌ವರ್ಕ್ ಎಂದೂ ಕರೆಯುತ್ತಾರೆ. ಆದಿಕಾಲದ ಮಾನವ ಸಮೂಹಗಳ ಕುರಿತಾದ ಅಧ್ಯಯನಕ್ಕಾಗಿ ನರವಂಶಶಾಸ್ತ್ರದಲ್ಲಿ (Anthropology) ಈ ರೀತಿಯನ್ನು ಹೆಚ್ಚು ಉಪಯೋಗಿಸುತ್ತಿದ್ದರು.

ಪಾಲ್ಗೊಳ್ಳದೇ ಇರುವ ನಿರೀಕ್ಷಣೆಯಲ್ಲಿ ಸಮಾಜವಿಜ್ಞಾನಿಯು ಕಲಿಕೆಗೆ ಒಳಪಡಿಸುವ ಗುಂಪಿನಲ್ಲಿ ವಾಸಮಾಡಿ ಅಧ್ಯಯನವನ್ನು ಕೈಗೊಳ್ಳುವುದಿಲ್ಲ. ಅದರ ಬದಲಾಗಿ ಹೊರಗಿನಿಂದ ನಿರೀಕ್ಷಣೆ ಮಾಡುತ್ತಾನೆ.

**ನಿಮ್ಮ ಪ್ರದೇಶದಲ್ಲಿರುವ ಒಂದು ಆರ್ಥಿಕ ಸಂಸ್ಥೆ (ಉದಾ: ಬೇಂಕು, ಫ್ಯಾಕ್ಟರಿ, ಮಾರುಕಟ್ಟೆ) ಯನ್ನು ಸಂದರ್ಶಿಸಿ ನಿರೀಕ್ಷಣೆಯ ಮೂಲಕ ಅವುಗಳ ಚಟುವಟಿಕೆಗಳನ್ನು ದಾಖಲಿಸಿರಿ.**



## ಕೇಸ್ ಸ್ಟಡಿ (Case Study)

*ಸಮಾಜಶಾಸ್ತ್ರದ ವಿವಿಧ ಕಲಿಕಾವಿಧಾನಗಳ ಉದಾಹರಣೆಗಳನ್ನು ಸಂಗ್ರಹಿಸಿ ಪವರ್‌ಪೊಯಿಂಟ್ ಪ್ರಸಂಟೇಷನ್ ಮಂಡಿಸಿರಿ.*




ಅಪೂರ್ವವೂ ವಿಭಿನ್ನವೂ ಆದ ಸಾಮಾಜಿಕ ವಿದ್ಯಮಾನಗಳು ಮತ್ತು ಸಮಸ್ಯೆಗಳ ಕುರಿತು ಆಳವಾಗಿ ಕಲಿಯಲು ಕೇಸ್‌ಸ್ಟಡಿಯನ್ನು ಉಪಯೋಗಿಸಲಾಗುತ್ತದೆ. ಇಂತಹ ಅಧ್ಯಯನಗಳು ಸೂಕ್ಷ್ಮವೂ ಸಮಗ್ರವೂ ಆಗಿರುತ್ತದೆ. ಈ ಕಲಿಕಾ ವಿಧಾನವನ್ನು ಉಪಯೋಗಿಸಿ ಕಲಿಕೆಗೆ ಒಳಪಡಿಸುವ ವಿಷಯವನ್ನು 'ಕೇಸ್' ಎಂದು ಕರೆಯುತ್ತಾರೆ. 'ಕೇಸ್'ನ ಕುರಿತಾದ ಸಮಗ್ರವಾದ ಅಧ್ಯಯನವೇ ಕೇಸ್‌ಸ್ಟಡಿಯಾಗಿದೆ. ಸಮಾಜಶಾಸ್ತ್ರದ ಮಾಹಿತಿ ಸಂಗ್ರಹಕ್ಕೆ ಕೇಸ್‌ಸ್ಟಡಿಯನ್ನು ಉಪಯೋಗಿಸಲಾಗುತ್ತದೆ.

ಅನುದಿನವೂ ಸಂಕೀರ್ಣವಾಗುತ್ತಿರುವ ಇಂದಿನ ಸಮಾಜದ ವಿವಿಧ ಆಯಾಮಗಳ ಕುರಿತು ಆಳವಾಗಿ ಮತ್ತು ವಿಶಾಲವಾಗಿ ಕಲಿಯಲು ಸಮಾಜಶಾಸ್ತ್ರದಲ್ಲಿ ಮೇಲೆ ಹೇಳಿದ ಅನೇಕ ಸಂಶೋಧನಾ ರೀತಿಗಳನ್ನು ಉಪಯೋಗಿಸಲಾಗುತ್ತದೆ.

ಸಮಾಜದ ದೈನಂದಿನ ಪ್ರಕ್ರಿಯೆಗಳಲ್ಲಿ ಪ್ರಾಯೋಗಿಕ ದಕ್ಷತೆ ಇರುವ ವಿಜ್ಞಾನ ಶಾಖೆಯಾಗಿ ಸಮಾಜಶಾಸ್ತ್ರವು ಬೆಳೆದು ನಿಂತಿದೆ. ಸಂಶೋಧನಾ ಕಲಿಕೆಯಲ್ಲಿ ತರಬೇತಿ ಲಭಿಸಿದ ಸಮಾಜ ವಿಜ್ಞಾನಿಗಳು ಆಡಳಿತ ಯೋಜನಾ ವಿಭಾಗಗಳಿಗೆ ಅಗತ್ಯವಾಗಿ ಬೇಕಾಗಿದ್ದಾರೆ. ವಾಣಿಜ್ಯ, ನಗರಯೋಜನೆ, ಸಾಮಾಜಿಕ ಕ್ಷೇಮ, ಜಾಹೀರಾತು, ವಾರ್ತಾವಿನಿಮಯ, ಶೈಕ್ಷಣಿಕ ಚಟುವಟಿಕೆಗಳು ಮೊದಲಾದ ಅನೇಕ ಕ್ಷೇತ್ರಗಳಲ್ಲಿ ಸಮಾಜಶಾಸ್ತ್ರಕ್ಕೆ ಪ್ರಾಯೋಗಿಕ ಸಾಧ್ಯತೆಗಳಿವೆ.

ವಾಣಿಜ್ಯ, ನಗರಯೋಜನೆ, ಸಾಮಾಜಿಕ ಕ್ಷೇಮ, ಜಾಹೀರಾತು, ವಾರ್ತಾವಿನಿಮಯ, ಶಿಕ್ಷಣ ವಲಯಗಳಲ್ಲಿ ತರಬೇತಿಯನ್ನು ಹೊಂದಿದ ಸಮಾಜಶಾಸ್ತ್ರಜ್ಞರ ಸೇವಾಸಾಧ್ಯತೆಯು ಎಷ್ಟರ ಮಟ್ಟಿಗಿದೆ ಎಂದು ಕಂಡುಕೊಳ್ಳಿರಿ?

ಸಮಾಜಶಾಸ್ತ್ರವು ಸಾಮಾಜಿಕ ಜೀವನದ ಬಗ್ಗೆ ಮೂಲಭೂತವಾದ ತಿಳುವಳಿಕೆಯನ್ನು ರೂಪಿಸಲು ಹಾಗೂ ಆ ಮೂಲಕ ನಮ್ಮ ದೃಷ್ಟಿಕೋನವನ್ನು ವಿಶಾಲಗೊಳಿಸಲು ಸಹಾಯಮಾಡುತ್ತದೆ.




NT-911-10-SOC.SCI.-I-10-K-VOL.2

## ಮೌಲ್ಯನಿರ್ಣಯ ಮಾಡುವ

- ಸೃಜನಶೀಲ ಸಾಹಿತ್ಯ ಮತ್ತು ಸಮಾಜಶಾಸ್ತ್ರ ಕಲಿಕೆಯು ಯಾವೆಲ್ಲ ರೀತಿಯಲ್ಲಿ ವ್ಯತ್ಯಾಸ ಹೊಂದಿವೆ?
- ಸಮಾಜಶಾಸ್ತ್ರ ಎಂದರೇನು? ಯಾಕೆ? ಆರಂಭಕಾಲದ ಸಮಾಜಶಾಸ್ತ್ರ ಚಿಂತಕರು ಯಾರು?
- ಸಮಾಜಶಾಸ್ತ್ರದ ಪ್ರಧಾನ ಕಲಿಕಾ ವಲಯಗಳು ಯಾವುವು?
- ಸಮಾಜಶಾಸ್ತ್ರ ಕಲಿಕೆಯ ಪ್ರಯೋಜನಗಳು ಯಾವುವು?
- ಸಮಾಜಶಾಸ್ತ್ರ ಕಲಿಕಾ ರೀತಿಯಾದ ಸಾಮಾಜಿಕ ಸಮೀಕ್ಷೆಯು ಸಮಾಜವನ್ನು ತಿಳಿದುಕೊಳ್ಳಲು ಯಾವ ರೀತಿಯಲ್ಲಿ ಸಹಾಯ ಮಾಡುತ್ತದೆ?
- ನಿರೀಕ್ಷಣೆ ಮತ್ತು ಸಂದರ್ಶನಗಳೊಳಗಿನ ವ್ಯತ್ಯಾಸಗಳೇನು?
- ನಿಮ್ಮ ಶಾಲೆಯಲ್ಲಿ ಸಹಪಾಠಿಗಳು ಎದುರಿಸುತ್ತಿರುವ ಪ್ರಯಾಣದ ಸಮಸ್ಯೆಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಲು ಹತ್ತು ಪ್ರಶ್ನೆಗಳಾದರೂ ಇರುವ ಒಂದು ಪ್ರಶ್ನಾವಳಿ ತಯಾರಿಸಿರಿ.
- ಸಮಾಜಶಾಸ್ತ್ರದ ಪ್ರಯೋಗ ಸಾಧ್ಯತೆಗಳು ಯಾವುವು?

## ಮುಂದುವರಿದ ಚಟುವಟಿಕೆಗಳು

- ವೃದ್ಧರ ಸಮಸ್ಯೆಗಳನ್ನು ತಿಳಿದುಕೊಳ್ಳಲು ಅವರೊಂದಿಗೆ ಸಂದರ್ಶನ ನಡೆಸಿ ವರದಿ ತಯಾರಿಸಿರಿ.
- ಸಮಾಜಶಾಸ್ತ್ರ ಚಿಂತಕರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.



N
K E R A L A
Kasaragod
KASARAGOD
KARNATAKA
KANNUR
Kannur
WAYANAD
Kalpetta
KOZHIKODE
Kozhikode
MALAPPURAM
Malappuram
TAMIL NADU
PALAKKAD
Palakkad
Thrissur
THRISSUR
ERNAKULAM
IDUKKI
Ernakulam
Painavu
KOTTAYAM
Kottayam
Alappuzha
PATHANAMTHITTA
ALAPPUZHA
Pathanamthitta
KOLLAM
Kollam
THIRUVANANTHAPURAM
Thiruvananthapuram
LEGEND
State Boundary
District Boundary
State Capital
District Headquarters
Map not to Scale



INDIA
States and Union Territories
N
TAJIKISTAN
AFGHANISTAN
PAKISTAN
CHINA
NEPAL
BHUTAN
BANGLADESH
MYANMAR
SRI LANKA
JAMMU & KASHMIR
Srinagar
Jammu
HIMACHAL PRADESH
Shimla
Chandigarh
PUNJAB
HARYANA
DELHI
New Delhi
Dehradun
UTTARAKHAND
UTTAR PRADESH
Lucknow
RAJASTHAN
Jaipur
GUJARAT
Gandhinagar
MADHYA PRADESH
Bhopal
BIHAR
Patna
SIKKIM
Gangtok
ARUNACHAL PRADESH
Itanagar
ASOM (ASSAM)
Dispur
NAGALAND
Kohima
MEGHALAYA
Shillong
MANIPUR
Imphal
TRIPURA
Agartala
MIZORAM
Aizawl
JHARKHAND
Ranchi
WEST BENGAL
Kolkata
CHHATTISGARH
Raipur
ODISHA (ORISSA)
Bhubaneswar
DAMAN & DIU
Daman
Silvassa
DADRA & NAGAR HAVELI
Mumbai
MAHARASHTRA
TELANGANA
Hyderabad
Yanam (Puducherry)
ARABIAN SEA
BAY OF BENGAL
Panaji
GOA
KARNATAKA
ANDHRA PRADESH
Bengaluru (Bangalore)
Chennai
Mahe (Puducherry)
PUDUCHERRY (Pondicherry)
Karaikal (Puducherry)
TAMIL NADU
KERALA
Thiruvananthapuram
LAKSHADWEEP (INDIA)
Kavaratti
Palk Strait
INDIAN OCEAN
ANDAMAN & NICOBAR ISLANDS (INDIA)
Port Blair
LEGEND
International Boundary
State Boundary
Country Capital
State and U.T. Capital
Map not to Scale

# ASIA MAP



ARCTIC OCEAN
PACIFIC OCEAN
INDIAN OCEAN
NORWEGIAN SEA
BARENTS SEA
KARA SEA
LAPTEV SEA
BERING SEA
SEA OF OKHOTSK
SEA OF JAPAN
EAST CHINA SEA
SOUTH CHINA SEA
ARABIAN SEA
BAY OF BENGAL
BLACK SEA
CASPIAN SEA
RED SEA
MEDITERRANEAN SEA
RUSSIA
KAZAKHSTAN
MONGOLIA
CHINA
INDIA
JAPAN
NORTH KOREA
SOUTH KOREA
TAIWAN
PHILIPPINES
MALAYSIA
INDONESIA
THAILAND
MYANMAR
LAOS
VIETNAM
CAMBODIA
BRUNEI
NEPAL
BHUTAN
BANGLADESH
SRI LANKA
MALDIVES
PAKISTAN
AFGHANISTAN
IRAN
IRAQ
TURKEY
SYRIA
JORDAN
LEBANON
ISRAEL
SAUDI ARABIA
KUWAIT
QATAR
U.A.E.
OMAN
YEMEN
TURKMENISTAN
UZBEKISTAN
TAJIKISTAN
KYRGYZSTAN
GEORGIA
ARMENIA
AZERBAIJAN
CYPRUS
EGYPT
SUDAN
ERITREA
DJIBOUTI
ETHIOPIA
SOMALIA
KENYA
TANZANIA
UGANDA
LIBYA
FINLAND
NORWAY
SWEDEN
ESTONIA
LATVIA
LITHUANIA
BELARUS
UKRAINE
POLAND
GERMANY
ROMANIA
BULGARIA
GREECE
ITALY
UNITED KINGDOM
AUSTRALIA
PAPUA NEW GUINEA
IRIAN JAYA
Tropic of Cancer
Equator
Arctic Circle
Map not to Scale

# WORLD MAP




Map not to Scale

## ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

# ಭಾರತದ ಸಂವಿಧಾನ

## ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

*(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;*

*(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.*

*(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.*

*(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.*

*(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.*

*(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.*

*(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.*

*(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.*

*(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.*

*(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.*

*(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.*

## ಐತಿಹಾಸಿಕ ಪರಂಪರೆಗಳನ್ನು ರಕ್ಷಿಸಿರಿ...

ವೈವಿಧ್ಯಪೂರ್ಣ ಹಾಗೂ ಸಂಪದ್ಭರಿತವಾದ ಪರಂಪರೆಯು ನಮ್ಮ ದೇಶಕ್ಕಿದೆ. ಈ ಪರಂಪರೆಯನ್ನು ಬಿಂಬಿಸುವ ಐತಿಹಾಸಿಕ ಸ್ಮಾರಕಗಳು, ವಸ್ತುಗಳು, ಸ್ಥಳಗಳು ಇತ್ಯಾದಿಗಳನ್ನು ಮೂಲರೂಪದಲ್ಲೇ ಸಂರಕ್ಷಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮಹತ್ತರವಾದ ಐತಿಹಾಸಿಕ ಪರಂಪರೆ ಮತ್ತು ಸ್ಮಾರಕಗಳನ್ನು ಮುಂದಿನ ತಲೆಮಾರಿನವರಿಗೆ ವರ್ಗಾಯಿಸಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

### ಐತಿಹಾಸಿಕ ಪರಂಪರೆಯನ್ನು ರಕ್ಷಿಸಲು ನಾವು ಮಾಡಬಹುದಾದವುಗಳು

- ಕಲಿಕಾ ಚಟುವಟಿಕೆಯ ಅಂಗವಾಗಿ ಚಾರಿತ್ರಿಕ ಸ್ಮಾರಕಗಳು, ವಸ್ತುಸಂಗ್ರಹಾಲಯಗಳು, ರಕ್ಷಿತ ಪ್ರದೇಶಗಳನ್ನು ಸಂದರ್ಶಿಸುವುದು.
- ಇವುಗಳ ಕುರಿತಾದ ಚಿತ್ರಗಳು, ಮಾಹಿತಿಗಳು, ಇತರ ವಿವರಣೆಗಳು ಮೊದಲಾದುವುಗಳನ್ನು ಸಂಗ್ರಹಿಸುವುದು ಹಾಗೂ ಅವುಗಳ ಪ್ರದರ್ಶನ, ಚರ್ಚೆ ಇತ್ಯಾದಿಗಳನ್ನು ಏರ್ಪಡಿಸುವುದು.
- ಪರಂಪರೆಯ ಸಂರಕ್ಷಣೆಯ ಕುರಿತು ಇತರರಲ್ಲಿ ಪ್ರಜ್ಞೆಯನ್ನು ಮೂಡಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು.
- ನಾಡಿನ ಪರಂಪರೆಯ ಸಂರಕ್ಷಣೆಯನ್ನು ಶಾಲೆಯಿಂದಲೂ ಮಾಡಬಹುದು. ಅಲ್ಲದೆ ನಿಮ್ಮ ಶಾಲೆ ಹಾಗೂ ಪ್ರದೇಶದ ಚರಿತ್ರೆಯನ್ನು ಬರೆದು ಜಾಗ್ರತೆಯಿಂದಿರಿಸಬಹುದು.
- ಶಾಲೆಯಲ್ಲೊಂದು ಐತಿಹಾಸಿಕ ಪರಂಪರೆಯ ವಸ್ತುಸಂಗ್ರಹಾಲಯ ಮತ್ತು ಸಮಾಜವಿಜ್ಞಾನ ಪ್ರಯೋಗಾಲಯವನ್ನು ಸಜ್ಜೀಕರಿಸಬಹುದು.
- ಚಾರಿತ್ರಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ದುರುಪಯೋಗ ಮಾಡುವುದು ಗಮನಕ್ಕೆ ಬಂದಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು.

### ಮಾಡಬಾರದವುಗಳು

- ಚಾರಿತ್ರಿಕ ಸ್ಮಾರಕಗಳನ್ನು ಮತ್ತು ಅವುಗಳ ಮೂಲಗಳನ್ನು ವಿಕೃತಿಗೊಳಿಸುವುದು, ಅವುಗಳ ಮೇಲೆ ಚಿತ್ರಗಳನ್ನು ರಚಿಸುವುದು, ಬರೆಯುವುದು, ಪೋಸ್ಟರ್ ಹಚ್ಚುವುದು ಇತ್ಯಾದಿಗಳನ್ನು ಮಾಡಬಾರದು.
- ಚಾರಿತ್ರಿಕ ಸ್ಮಾರಕ ಹಾಗೂ ಸ್ಥಳಗಳನ್ನು ಅತಿಕ್ರಮಿಸಿ ಸ್ವಾಧೀನಪಡಿಸಲು ಪ್ರಯತ್ನಿಸಬಾರದು.
- ಐತಿಹಾಸಿಕ ವಸ್ತುಗಳು, ಸ್ಮಾರಕಗಳು, ಸ್ಥಳಗಳ ಅಸ್ತಿತ್ವಕ್ಕೆ ತೊಂದರೆಯಾಗುವಂತಹ ಯಾವುದೇ ಕಾರ್ಯವನ್ನು ಮಾಡಬಾರದು.

ಸಂಪದ್ಭರಿತವಾದ ಐತಿಹಾಸಿಕ ಪರಂಪರೆಯನ್ನು ರಕ್ಷಿಸಿರಿ...ಮುಂದಿನ ತಲೆಮಾರಿಗೆ ಅವುಗಳನ್ನು ವರ್ಗಾಯಿಸಿರಿ...